ಸಂಪುಟ: 06 ಸಂಚಿಕೆ: 13 ಪುಟಗಳು: 08 ಶನಿವಾರ 28 ಮಾರ್ಚ್ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com
ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ಪರಹಿತಕ್ಕಾಗಿ ನಿಮ್ಮ ಜೀವನವನ್ನು ಮುಡಿಪಾಗಿಡಿ, ನೀವು ತ್ಯಾಗಜೀವನವನ್ನು ಆರಿಸಿಕೊಳ್ಳುವುದಾದರೆ ಸೌಂದರ್ಯ, ಹಣ, ಅಧಿಕಾರಗಳ ಕಡೆ ತಿರುಗಿಯೂ ನೋಡಬೇಡಿ...

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಕರ್ನಾಟಕಕ್ಕೆ ಹೊಸ ರೈಲು ಘೋಷಿಸಿದ ವಿ ಸೋಮಣ್ಣ; 3 ಜಿಲ್ಲೆಗಳ ನಡುವೆ ಸಂಚಾರ

• ಉದಯವಾಹಿನಿ, ಬೆಂಗಳೂರು

ಕರ್ನಾಟಕಕ್ಕೆ ಹೊಸ ರೈಲು ಘೋಷಣೆಯಾಗಿದೆ. ಬೆಂಗಳೂರಿನ ಯಲಹಂಕ - ಅರಸೀಕೆರೆ ನಡುವೆ ವಾರದ 6 ದಿನ ಈ ರೈಲು ಸಂಚಾರ ನಡೆಸಲಿದೆ ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ ಸೋಮಣ್ಣ ತಿಳಿಸಿದ್ದಾರೆ. ಈ ರೈಲು ರಾಜ್ಯದ ನಾಲ್ಕು ಜಿಲ್ಲೆಗಳ ಪ್ರಯಾಣಿಕರಿಗೆ ಅನುಕೂಲವಾಗಲಿದೆ.


ಹೊಸ ರೈಲಿನ ಬಗ್ಗೆ ಟ್ವೀಟ್ ಮಾಡಿರುವ ಸಚಿವ ವಿ ಸೋಮಣ್ಣ, ಪ್ರಯಾಣಿಕರ ಬಹುದಿನದ ಬೇಡಿಕೆಯನ್ನು ಈಡೇರಿಸಲಾಗಿದ್ದು ಬೆಂಗಳೂರಿನಿಂದ




ತುಮಕೂರು ಮಾರ್ಗವಾಗಿ ಅರಸೀಕೆರೆಗೆ ನೂತನ ಮೆಮು ರೈಲಿನ ಸೇವೆಯನ್ನು ಒದಗಿಸಲಾಗಿದೆ ಎಂದು ತಿಳಿಸಿದ್ದಾರೆ.

**ವಿದ್ಯಾರ್ಥಿಗಳು, ಉದ್ಯೋಗಿಗಳಿಗೆ ಅನುಕೂಲ:** ಯಲಹಂಕದಿಂದ, ಯಶವಂತಪುರ ಮಾರ್ಗವಾಗಿ ಹೊರಡುವ ಈ ಮೆಮು ರೈಲು ವಿದ್ಯಾರ್ಥಿಗಳು, ದಿನಗೂಲಿ ಕಾರ್ಮಿಕರು, ಉದ್ಯೋಗಿಗಳು, ರೈತರು, ವ್ಯಾಪಾರಿಗಳು ಸೇರಿದಂತೆ ಮುಂತಾದ ಪ್ರಯಾಣಿಕರಿಗೆ ಕೈಗೆಟುಕುವ ಮತ್ತು ವಿಶ್ವಾಸಾರ್ಹ ಪ್ರಯಾಣದ ಆಯ್ಕೆಯನ್ನು ಒದಗಿಸಲಿದೆ. ಈ ಭಾಗದ ಪ್ರಯಾಣಿಕರು ಈ ನೂತನ ಮೆಮು ರೈಲಿನ ಸೇವೆಯನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಕೋರುತ್ತೇನೆ ಎಂದು ಸಚಿವರು ಟ್ವೀಟ್‌ನಲ್ಲಿ ತಿಳಿಸಿದ್ದಾರೆ. (ಕರ್ನಾಟಕದ 19 ವಿಶೇಷ ರೈಲುಗಳು ಖಾಯಂ)

**ಹೊಸ ಮೆಮು ರೈಲಿನ ವೇಳಾಪಟ್ಟಿ:** ಯಲಹಂಕ - ಅರಸೀಕೆರೆ ಮೆಮು ರೈಲು (ರೈ.ಸಂ 66505): ಬೆಳಿಗ್ಗೆ 6:45ಕ್ಕೆ ಯಲಹಂಕದಿಂದ ಹೊರಡುವ ರೈಲು ಯಶವಂತಪುರ, ತುಮಕೂರು (ಬೆಳಿಗ್ಗೆ 08:58ಕ್ಕೆ) ಮಾರ್ಗವಾಗಿ ಅರಸೀಕೆರೆಗೆ ಬೆಳಿಗ್ಗೆ 11:00 ಗಂಟೆಗೆ ತಲುಪಲಿದೆ. ಅರಸೀಕೆರೆ - ಯಲಹಂಕ ಮೆಮು ರೈಲು (ರೈ.ಸಂ 66506): ಅರಸೀಕೆರೆಯಿಂದ ಮಧ್ಯಾಹ್ನ 02:15ಕ್ಕೆ ಹೊರಡುವ ರೈಲು, ತುಮಕೂರು (ಸಂಜೆ 04:38ಕ್ಕೆ) ಮಾರ್ಗವಾಗಿ ಯಲಹಂಕಕ್ಕೆ ಸಂಜೆ



07:15ಕ್ಕೆ ತಲುಪಲಿದೆ. ಭಾನುವಾರದ ಹೊರತಾಗಿ ವಾರದ 6 ದಿನವೂ ಈ ಮೆಮು ರೈಲು ಸಂಚರಿಸಲಿದೆ.

### ರಾಮನಗರದಲ್ಲಿ ಒಡೆಯರ್ ಎಕ್ಸ್‌ಪ್ರೆಸ್ ನಿಲುಗಡೆಗೆ ರೈಲ್ವೆ ಇಲಾಖೆ ಅಸ್ತು

**ಮೈಸೂರು ಮತ್ತು ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣಗಳ ನಡುವೆ ಸಂಚರಿಸುವ ಜನಪ್ರಿಯ ಒಡೆಯರ್ ಎಕ್ಸ್‌ಪ್ರೆಸ್ (ರೈಲು ಸಂಖ್ಯೆ: 12613/12614) ಇನ್ಮುಂದೆ ರಾಮನಗರ ರೈಲು ನಿಲ್ದಾಣದಲ್ಲಿಯೂ ನಿಲುಗಡೆಗೊಳ್ಳಲಿದ್ದು, ಈ ಕುರಿತು ರೈಲ್ವೆ ಮಂಡಳಿಯು ಅಧಿಕೃತ ಆದೇಶ ಹೊರಡಿಸಿದೆ.**

ನೈರುತ್ಯ ರೈಲ್ವೆಯ ಪ್ರಸ್ತಾವನೆಯನ್ನು ಪುರಸ್ಕರಿಸಿರುವ ರೈಲ್ವೆ ಸಚಿವಾಲಯವು, ರಾಮನಗರ ನಿಲ್ದಾಣದಲ್ಲಿಈ ರೈಲಿನ ನಿಲುಗಡೆಗೆ ಪ್ರಾಯೋಗಿಕ ಆಧಾರದ ಮೇಲೆ ಅನುಮೋದನೆ ನೀಡಿದೆ. ಈ ನಿಲುಗಡೆಯು ಶೀಘ್ರದಲ್ಲಿಯೇ ಜಾರಿಗೆ ಬರಲಿದೆ. ಈ ನಿಲ್ದಾಣದಲ್ಲಿನ ಟಿಕೆಟ್ ಮಾರಾಟದ ಪ್ರಮಾಣವನ್ನು ರೈಲ್ವೆ ಇಲಾಖೆಯು ಸೂಕ್ಷ್ಮವಾಗಿ ಗಮನಿಸಿ, ಅದರ ಆಧಾರದ ಮೇಲೆ ಮುಂದಿನ ನಿರ್ಧಾರ ಕೈಗೊಳ್ಳಲಿದ್ದು, ಈ ಬದಲಾವಣೆಯ ಕುರಿತು ಸಾರ್ವಜನಿಕರಿಗೆ ಹೆಚ್ಚಿನ ಮಾಹಿತಿ ನೀಡಲು ವ್ಯಾಪಕ ಪ್ರಚಾರ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಆದೇಶದಲ್ಲಿ ಸೂಚಿಸಲಾಗಿದೆ.

## ಅಡುಗೆ ಅನಿಲ ಹಂಚಿಕೆಯಲ್ಲಿ ದಕ್ಷಿಣ ಭಾರತಕ್ಕೆ ಮೋಸ

• ಉದಯವಾಹಿನಿ, ಬೆಂಗಳೂರು

ಹಾರ್ಮುಝ್ ಜಲಸಂಧಿ ದಾಟಿ ಎರಡು ಹಡಗುಗಳು ದೇಶಕ್ಕೆ ಬಂದಿವೆ. ಅದರಲ್ಲಿ ಒಂದನ್ನು ದಕ್ಷಿಣ ಭಾರತದ ರಾಜ್ಯಗಳಾದ ಕರ್ನಾಟಕ, ತಮಿಳುನಾಡಿಗೆ ಕಳುಹಿಸಬಹುದಿತ್ತಲ್ಲವೇ ಗುಜರಾತಿಗೆ ಏಕೆ ಹೋದವು. ಈಗ ಕೇರಳ, ತಮಿಳುನಾಡಿನಲ್ಲಿ ಚುನಾವಣೆಗಳಿವೆ. ದಕ್ಷಿಣದ ರಾಜ್ಯಗಳಲ್ಲಿ ಅವರ ಪ್ರಭಾವ ಇಲ್ಲ ಎನ್ನುವ ಕಾರಣಕ್ಕೆ ದಕ್ಷಿಣ ಭಾರತವನ್ನು ಕೆಟ್ಟ ದೃಷ್ಟಿಯಿಂದ ನೋಡುತ್ತಿದ್ದಾರೆ ಎಂದು ಕೇಂದ್ರ ಸರಕಾರದ ವಿರುದ್ಧ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಿಡಿಗಾರಿದರು. ಈ ಹಿಂದೆ ಎಲ್ಲ ಪೆಟ್ರೋಲ್ ಬಂಕ್‌ಗಳಲ್ಲಿ ಮುಸಲ್ಮಾನ ಹೆಣ್ಣುಮಗಳು ಗ್ಯಾಸ್ ನೀಡಿದ್ದಕ್ಕೆ ಧನ್ಯವಾದ ಹೇಳುತ್ತಿರುವ ಹೋರ್ಡಿಂಗ್ ಇರುತ್ತಿತ್ತು. ಈಗ ಏಕೆ ಅದನ್ನೆಲ್ಲಾ ತೆಗೆದು ಹಾಕಿದ್ದಾರೆ. ಕೇಂದ್ರ ಸರಕಾರ ಪ್ರತಿದಿನ ಗ್ರಾಹಕರ ಪಿಕ್ ಪಾಕೆಟ್ ಮಾಡುತ್ತಿದೆ ಎಂದು ದೂರಿದರು. 2014ರ ಮೇ 26 ರಿಂದ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಾಗುತ್ತಾ ಹೋಯಿತು. ಪೆಟ್ರೋಲ್ 71 ರೂ. ಡೀಸೆಲ್ ಅನ್ನು 56 ರೂಪಾಯಿಗೆ ನೀಡಲಾಗುತ್ತಿತ್ತು. ಈಗ 103 ರೂಪಾಯಿ ಆಗಿದೆ.

ಕಚ್ಚಾ ತೈಲಬೆಲೆ ಕಡಿಮೆ ಇದ್ದರೂ ನಮ್ಮಲ್ಲಿ ಬೆಲೆ ಹೆಚ್ಚಳಕ್ಕೆ ಏನು ಕಾರಣ ಎಂದು ಅವರು ಪ್ರಶ್ನಿಸಿದರು. ಕೇಂದ್ರ ಸರಕಾರ ಇಂಧನ ತೈಲದ ಮೇಲಿನ ವಿಶೇಷ ಹೆಚ್ಚುವರಿ ಅಬಕಾರಿ ಸುಂಕ ಇಳಿಕೆ ಮಾಡಿರುವ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, ಭಾರತ ಸರಕಾರ ನಮ್ಮನ್ನು ಕೊಲೆ ಮಾಡುತ್ತಿದೆ. ಚುನಾವಣೆಗಾಗಿ ತೈಲ ಬೆಲೆ ಕಡಿಮೆ ಮಾಡಿದ್ದಾರೆ.

## ಬಯಲು ಸೀಮೆಗೆ ಕೃಷ್ಣಾ ನದಿ ನೀರು ಕೊಡಿ: ಲೋಕಸಭೆಯಲ್ಲಿ ಪ್ರಸ್ತಾಪ

• ಉದಯವಾಹಿನಿ, ನವದೆಹಲಿ

ಚಿಕ್ಕಬಳ್ಳಾಪುರ ಸೇರಿದಂತೆ ಬಯಲುಸೀಮೆ ಜಿಲ್ಲೆಗಳಿಗೆ ಕೆ.ಸಿ.ವ್ಯಾಲಿ ಮತ್ತು ಎಚ್.ಎನ್.ವ್ಯಾಲಿ ಯೋಜನೆಯಡಿ ಮೂರು ಹಂತಗಳಲ್ಲಿ ಸಂಸ್ಕರಿಸಿದ ನೀರನ್ನು ಪೂರೈಸಲು ಕ್ರಮ ವಹಿಸಬೇಕು ಎಂದು ಚಿಕ್ಕಬಳ್ಳಾಪುರ ಸಂಸದ ಡಾ.ಕೆ. ಸುಧಾಕರ್ ಒತ್ತಾಯಿಸಿದರು. 'ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಕೋಲಾರ ಸೇರಿದಂತೆ ಬಯಲುಸೀಮೆ ಜಿಲ್ಲೆಗಳಿಗೆ ಶಾಶ್ವತ ನೀರಾವರಿ ಯೋಜನೆ ಕಲ್ಪಿಸಲು ನಾನು 2007ರಿಂದಲೂ ಪ್ರಯತ್ನ ಮಾಡುತ್ತಿದ್ದೇನೆ. ಈ ಹಿಂದೆ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಈ ಭಾಗಕ್ಕೆ ಕೆ.ಸಿ.ವ್ಯಾಲಿ ಮತ್ತು ಎಚ್.ಎನ್.ವ್ಯಾಲಿ ಯೋಜನೆಗಳಲ್ಲಿ ಮೂರನೇ ಹಂತದಲ್ಲಿ ಸಂಸ್ಕರಣೆ ಮಾಡಿದ ನೀರನ್ನು ಹರಿಸುವ ಯೋಜನೆಯನ್ನು ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿತ್ತು. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ಹಿಂದಿನ ಅನೇಕ ಉತ್ತಮ ಯೋಜನೆ ರದ್ದು ಮಾಡಿದೆ. ಅದೇ ರೀತಿ ಮೂರನೇ ಹಂತದ ಸಂಸ್ಕರಣೆಯ ಯೋಜನೆಯನ್ನು ಕೂಡ ರದ್ದು ಮಾಡಿದೆ' ಎಂದು ಆರೋಪಿಸಿದರು. ಬಯಲುಸೀಮೆಗೆ ಈಗಾಗಲೇ ಪೂರೈಕೆಯಾಗುತ್ತಿರುವ ದ್ವಿತೀಯ ಹಂತದ ಸಂಸ್ಕರಣೆಯ ನೀರನ್ನು ಕೆಲವು ಸಂಸ್ಥೆಗಳು ಪರೀಕ್ಷೆ ಮಾಡಿದ್ದು, ಈ ನೀರು ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂದು ವರದಿ ನೀಡಿವೆ.

## ಪೆಟ್ರೋಲ್ ಸೆಸ್ ಇಳಿಕೆ: ಸಾಧಕ ಬಾಧಕ ನೋಡಿ ತೀರ್ಮಾನ

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರಕಾರ ಪೆಟ್ರೋಲ್ ಮೇಲಿನ ಸೆಸ್ ಇಳಿಕೆ ವಿಚಾರ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಧಕ-ಬಾಧಕ ನೋಡಿ ತೀರ್ಮಾನ ಮಾಡುತ್ತಾರೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದ್ದಾರೆ. ಪೆಟ್ರೋಲ್ ಮೇಲಿನ ಸೆಸ್ ಇಳಿಕೆ ವಿಚಾರ ಸಚಿವ ಸಂಪುಟದಲ್ಲಿ ಪ್ರಸ್ತಾಪಿಸಿದರೆ ಚರ್ಚೆ ಮಾಡುತ್ತೇವೆ. ಇಲ್ಲವೇ ಮುಖ್ಯಮಂತ್ರಿ ಒಬ್ಬರೇ ತೀರ್ಮಾನ ಮಾಡಬಹುದು. ಈ ಸಂಬಂಧ ಅವರೇ ಮಾಹಿತಿ ನೀಡಲಿದ್ದಾರೆ ಎಂದು ತಿಳಿಸಿದರು. ಒಳಮೀಸಲಾತಿ ವಿಚಾರವಾಗಿ ಮಾತನಾಡಿದ ಅವರು, ಎಲ್ಲಾ ಸಮುದಾಯಗಳ ಬೇಡಿಕೆ ಇದ್ದು, ನ್ಯಾಯ ಸಿಗಬೇಕೆಂದು ಹೋರಾಟ ಕೈಗೊಂಡಿದ್ದಾರೆ. ಆದರೆ, ಸರಕಾರ ಕಾನೂನು ಚೌಕಟ್ಟಿನಲ್ಲಿ ತೀರ್ಮಾನಿಸುತ್ತದೆ. ಸಾಮಾಜಿಕ ನ್ಯಾಯ ಒದಗಿಸುವ ಕೆಲಸ ಮಾಡುತ್ತದೆ ಎಂದು ಉಲ್ಲೇಖಿಸಿದರು.




**ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದ ಹಿನ್ನೆಲೆಯಲ್ಲಿ ದೇಶದಲ್ಲಿ ಇಂಧನ ಬೆಲೆ ಏರಿಕೆಯ ಬಗ್ಗೆ ಹೆಚ್ಚುತ್ತಿರುವ ಕಳವಳಗಳ ಮಧ್ಯೆ, ಕೇಂದ್ರ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಎರಡರ ಮೇಲಿನ ಹೆಚ್ಚುವರಿ ಅಬಕಾರಿ ಸುಂಕವನ್ನು 10 ರೂ. ಇಳಿಸಿದೆ. ಹೊರಡಿಸಲಾದ ಗೆಜೆಟ್ ಅಧಿಸೂಚನೆಯ ಪ್ರಕಾರ, ಪೆಟ್ರೋಲ್ ಮೇಲಿನ ಹೆಚ್ಚುವರಿ ಅಬಕಾರಿ ಸುಂಕವನ್ನು ಲೀಟರ್‌ಗೆ 13 ರೂ.ನಿಂದ 3 ರೂ.ಗೆ ಇಳಿಸಲಾಗಿದೆ. ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಲೀಟರ್‌ಗೆ 10 ರೂ.ನಿಂದ 0 ರೂ.ಗೆ ಇಳಿಸಲಾಗಿದೆ.**

# ಬೇಡ ಭಯಭೀತ ಇಂಧನ ಸುಂಕ ಭಾರಿ ಕಡಿತ

**ಪೆಟ್ರೋಲ್ ಮೇಲಿನ ಅಬಕಾರಿ ಸುಂಕ 10ರೂ. ಕಡಿತ**

**ಡೀಸೆಲ್ ಸುಂಕ ಶೂನ್ಯ!**

• ಉದಯವಾಹಿನಿ, ನವದೆಹಲಿ

ಇರಾನ್ ಜೊತೆಗಿನ ಯುಎಸ್-ಇಸ್ರೇಲ್ ಸಂಘರ್ಷ ಮತ್ತು ಅದರ ಪರಿಣಾಮವಾಗಿ ಇರಾನ್ ಹಾರ್ಮುಜ್ ಜಲಸಂಧಿಯನ್ನು ಮುಚ್ಚಿದ್ದರಿಂದ ಉಂಟಾದ ಜಾಗತಿಕ ಇಂಧನ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಎರಡರ ಮೇಲಿನ ಹೆಚ್ಚುವರಿ ಅಬಕಾರಿ ಸುಂಕವನ್ನು ಕೇಂದ್ರ ಕಡಿತಗೊಳಿಸಿದೆ.

**ಪೆಟ್ರೋಲ್, ಡೀಸೆಲ್ ಚಿಲ್ಲರೆ ಬೆಲೆಗಳು ಬದಲಿಲ್ಲ:** ಅಬಕಾರಿ ಸುಂಕ ಕಡಿತ ನಿರ್ಧಾರ ಕಚ್ಚಾ ತೈಲ ಬೆಲೆ ಏರಿಕೆಯಿಂದಾಗಿ ಮಾರುಕಟ್ಟೆಯಲ್ಲಿ ನಷ್ಟ ಎದುರಿಸುತ್ತಿದ್ದ ತೈಲ ಕಂಪನಿಗಳಿಗೆ ರಿಲೀಫ್ ನೀಡುವ ನಿರೀಕ್ಷೆ ಇದೆ. ಜಾಗತಿಕ ಅನಿಶ್ಚಿತತೆಯ ಈ ಸಂದರ್ಭದಲ್ಲಿ ಇಂಧನ ಬೆಲೆಗಳನ್ನು ನಿಯಂತ್ರಣದಲ್ಲಿಡಲು ಮತ್ತು ಗ್ರಾಹಕರಿಗೆ ಪರಿಹಾರ ಒದಗಿಸಲು ಇದೊಂದು ಮಹತ್ವದ ಕ್ರಮವೆಂದು ಪರಿಗಣಿಸಲಾಗುತ್ತಿದೆ. ಆದರೆ, ಪೆಟ್ರೋಲ್ ಮತ್ತು ಡೀಸೆಲ್‌ನ ಚಿಲ್ಲರೆ ಬೆಲೆಗಳಲ್ಲಿ ಸದ್ಯ ಯಾವುದೇ ಬದಲಾವಣೆ ಆಗಿಲ್ಲ.

1. **ಪೆಟ್ರೋಲ್, ಡೀಸೆಲ್ ಮೇಲಿನ ಅಬಕಾರಿ ಸುಂಕ ಭಾರೀ ಕಡಿತ ಮಾಡಿದ ಕೇಂದ್ರ; ಆದರೂ ಜನರಿಗೆ ಲಾಭ ಇಲ್ಲ**
2. **ಬಂಕ್‌ಗಳಲ್ಲಿ ಬಂದ್ ಬೋರ್ಡ್ -ಬೆಂಗಳೂರಿನಲ್ಲಿ ಪೆಟ್ರೋಲ್ ಸಂಕಷ್ಟ!**
3. **ಪೆಟ್ರೋಲ್, ಡೀಸೆಲ್ ಚಿಲ್ಲರೆ ಬೆಲೆಗಳು ಬದಲಿಲ್ಲ**

ಪ್ರಧಾನಿ ನರೇಂದ್ರ ಮೋದಿ ಅವರ ಬದ್ಧತೆಯನ್ನು ಶ್ಲಾಘಿಸಿರುವ ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ, ಜಾಗತಿಕ ಕಚ್ಚಾ ತೈಲ ಬೆಲೆ ಏರಿಕೆಯ ಪರಿಣಾಮವನ್ನು ನಿಭಾಯಿಸಲು ಕೇಂದ್ರ ಸರ್ಕಾರ ಗ್ರಾಹಕರ ಮೇಲೆ ಸಂಪೂರ್ಣ ಹೊರೆ ಹಾಕುವ ಬದಲು ತೆರಿಗೆ ಕಡಿತಗೊಳಿಸಲು ನಿರ್ಧರಿಸಿದೆ. ಈ ಕ್ರಮದಿಂದ ತೈಲ ಕಂಪನಿಗಳ ನಷ್ಟ ತಗ್ಗಿಸುವುದು ಮತ್ತು ದೇಶೀಯ ಇಂಧನ ಬೆಲೆಗಳನ್ನು ಸ್ಥಿರವಾಗಿಡಲು ನೆರವಾಗುತ್ತದೆ. ಅತ್ಯಂತ ಸಕಾಲಿಕ, ದಿಟ್ಟ ಮತ್ತು ದೂರದೃಷ್ಟಿಯ ನಿರ್ಧಾರಕ್ಕಾಗಿ ನಾನು ಪ್ರಧಾನಿ ಮೋದಿ ಮತ್ತು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಅವರು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಎಕ್ಸ್ ಪೋಸ್ಟ್‌ನಲ್ಲಿ, ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಕೇಂದ್ರ ಅಬಕಾರಿ ಸುಂಕ ಕಡಿತವು ಗ್ರಾಹಕರಿಗೆ ಬೆಲೆ ಏರಿಕೆಯಿಂದ ರಕ್ಷಣೆ ನೀಡುತ್ತದೆ. ಪ್ರಧಾನಿ ಮೋದಿ ಅವರು ನಾಗರಿಕರನ್ನು ಪೂರೈಕೆಯ ಏರಿಳಿತಗಳು ಮತ್ತು ಅಗತ್ಯ ವಸ್ತುಗಳ ವೆಚ್ಚಗಳಿಂದ ರಕ್ಷಿಸುವ ನಿರ್ಧಾರ ಕೈಗೊಂಡಿದ್ದಾರೆ ಎಂದು ತಿಳಿಸಿದ್ದಾರೆ.

**ಕೇಂದ್ರದ ನಿರ್ಧಾರ ಶ್ಲಾಘಿಸಿದ ಹೆಚ್‌ಡಿಕೆ:** ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ನಡುವೆ ಜಾಗತಿಕ ಕಚ್ಚಾ ತೈಲ ಬೆಲೆಗಳು ಏರುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ಗೌರವಾನ್ವಿತ ಪ್ರಧಾನಮಂತ್ರಿಗಳಾದ ಮೋದಿ ಅವರ ನೇತೃತ್ವದಲ್ಲಿ ಭಾರತ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ವಿಶೇಷ ಹೆಚ್ಚುವರಿ ಅಬಕಾರಿ ಸುಂಕವನ್ನು ಲೀಟರ್‌ಗೆ 10ರಷ್ಟು ಕಡಿಮೆ ಮಾಡಲು ನಿರ್ಧರಿಸಿದೆ. ಇದರ ಜತೆಗೆ ದೇಶೀಯ ತೈಲದ ಸಾಕಷ್ಟು ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಪೂರೈಕೆಯಲ್ಲಿ ಸ್ಥಿರತೆಯನ್ನು ಕಾಪಾಡಿಕೊಳ್ಳಲು ಸರ್ಕಾರವು ಡೀಸೆಲ್ ಮೇಲೆ ಲೀಟರ್‌ಗೆ 21.5 ಮತ್ತು ವಿಮಾನಯಾನ ಇಂಧನದ ಮೇಲೆ ಲೀಟರ್‌ಗೆ 29.5ರಷ್ಟು ಸುಂಕ ವಿಧಿಸಿದೆ.

**ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಇಳಿಕೆಯು ಕೇವಲ ವಾಹನ ಸವಾರರಿಗೆ ಮಾತ್ರವಲ್ಲದೆ, ಇಡೀ ಆರ್ಥಿಕತೆಯ ಮೇಲೆ ಸಕಾರಾತ್ಮಕ ಪ್ರಭಾವ**

**ಆರ್ಥಿಕತೆಯ ಮೇಲೆ ಪ್ರಭಾವ**

**ಬೀರಲಿದೆ. ಡೀಸೆಲ್ ಬೆಲೆ ಇಳಿಕೆಯಾದಾಗ ಲಾರಿ ಮತ್ತು ಟೆಂಪೋಗಳ ಸಾಗಣೆ ವೆಚ್ಚ ಕಡಿಮೆಯಾಗುತ್ತದೆ. ಇದರಿಂದ ತರಕಾರಿ, ಹಾಲು ಮತ್ತು ಇತರ ದಿನಬಳಕೆಯ ವಸ್ತುಗಳ ಬೆಲೆ ಕೂಡ ಇಳಿಕೆಯಾಗಲು ದಾರಿಯಾಗುತ್ತದೆ. ಕೃಷಿ ಕ್ಷೇತ್ರದಲ್ಲಿ ಪಂಪ್ ಸೆಟ್ ಮತ್ತು ಟ್ರ್ಯಾಕ್ಟರ್ ಬಳಸುವ ರೈತರಿಗೂ ಇದು ದೊಡ್ಡ ಸಹಾಯವಾಗಲಿದೆ.**



### ಖಾಸಗಿ ತೈಲ ಕಂಪನಿಗಳಿಂದ ಬೆಲೆ ಹೆಚ್ಚಳ

**ಸರ್ಕಾರ ಈ ಸುಂಕ ಕಡಿತ ಘೋಷಿಸುವ ಒಂದು ದಿನ ಮೊದಲು, ದೇಶದ ಅತಿದೊಡ್ಡ ಖಾಸಗಿ ಇಂಧನ ಮಾರಾಟ ಕಂಪನಿಯಾದ 'ನಯಾರಾ ಎನರ್ಜಿ' ಪೆಟ್ರೋಲ್ ಬೆಲೆಯನ್ನು 5.3 ರೂಪಾಯಿ ಹಾಗೂ ಡೀಸೆಲ್ ಬೆಲೆಯನ್ನು 3ರೂಪಾಯಿನಷ್ಟು ಹೆಚ್ಚಿಸಿತ್ತು. ರಷ್ಯಾದ ರೋಸ್‌ನೆಫ್ಟ್ ಬೆಂಬಲಿತ ಈ ಕಂಪನಿಯು ಭಾರತದ ಮಾರುಕಟ್ಟೆಯಲ್ಲಿ ಶೇ. 8.4 ರಷ್ಟು ಪಾಲನ್ನು ಹೊಂದಿದೆ.**

ಗುರಿ ಹೊಂದಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ಸಾಕಷ್ಟು ದಾಸ್ತಾನಿದೆ, ಭಯ ಬೇಡ- ಕೇಂದ್ರದ ಮನವಿ: ನಿನ್ನೆ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ, ದೇಶದ ಪೆಟ್ರೋಲಿಯಂ ಮತ್ತು ಎಲ್‌ಪಿಜಿ ಪೂರೈಕೆ ಸಂಪೂರ್ಣವಾಗಿ ಸುರಕ್ಷಿತವಾಗಿದೆ ಮತ್ತು ನಿಯಂತ್ರಣದಲ್ಲಿದೆ. ಎಲ್ಲಿಯೂ ಪೆಟ್ರೋಲ್, ಡೀಸೆಲ್ ಅಥವಾ ಎಲ್‌ಪಿಜಿ ಕೊರತೆ ಇಲ್ಲ. ಸದ್ಯದ ಬೇಡಿಕೆ ಪೂರೈಸಲು ಪೂರೈಕೆ ಸರಪಳಿಗಳು ಸೂಕ್ತ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಜನರು ಭಯಭೀತರಾಗಬಾರದು ಎಂದು ಮನವಿ ಮಾಡಿತ್ತು. ದೇಶದ ಎಲ್ಲೆಡೆಯ ಪೆಟ್ರೋಲ್ ಪಂಪ್‌ಗಳಲ್ಲಿ ಸಾಕಷ್ಟು ಪೆಟ್ರೋಲ್ ಮತ್ತು ಡೀಸೆಲ್ ದಾಸ್ತಾನಿದೆ. ಎಲ್ಲಾ ಸಂಸ್ಕರಣಾಗಾರಗಳು ನಿರಂತರ ಪೂರೈಕೆಯನ್ನು ಕಾಯ್ದುಕೊಳ್ಳಲು ಹೆಚ್ಚಿನ ಸಾಮರ್ಥ್ಯದಲ್ಲಿ ಕೆಲಸ ಮಾಡುತ್ತಿವೆ. ಸಾಕಷ್ಟು ಕಚ್ಚಾ ದಾಸ್ತಾನು ಕೂಡಾ ಇದೆ. ಬೇಡಿಕೆ ಪೂರೈಸಲು ದೇಶೀಯ ಎಲ್‌ಪಿಜಿ ಉತ್ಪಾದನೆಯನ್ನೂ ಹೆಚ್ಚಿಸಲಾಗುತ್ತಿದೆ ಎಂದು ಸಚಿವಾಲಯ ಸ್ಪಷ್ಟಪಡಿಸಿತ್ತು.

### ಲಾಕ್‌ಡೌನ್ ಪ್ರಸ್ತಾಪವಿಲ್ಲ

**ದೇಶದಲ್ಲಿ ಎಲ್‌ಪಿಜಿ ಕೊರತೆಯಾಗಿರುವುದರಿಂದ ಲಾಕ್‌ಡೌನ್ ಜಾರಿಯಾಗಲಿದೆ ಎಂಬ ವರದಿಗಳನ್ನು ತಳ್ಳಿ ಹಾಕಿರುವ ಕೇಂದ್ರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ಸಚಿವ ಹರ್‌ದೀಪ್ ಸಿಂಗ್ ಪುರಿ ದೇಶದಲ್ಲಿ ಲಾಕ್‌ಡೌನ್ ಜಾರಿಯಾಗಲಿದೆ ಎಂಬುದು ಶುದ್ಧ ಸುಳ್ಳು. ಅಂತಹ ಯಾವುದೇ ಪ್ರಸ್ತಾವನೆಗಳು ಕೇಂದ್ರ ಸರ್ಕಾರದ ಮುಂದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.ಈ ಬಗ್ಗೆ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ತೈಲ, ಇಂಧನ ಹಾಗೂ ಇತರ ಅಗತ್ಯ ಸರಕುಗಳ ಸರಬರಾಜನ್ನು ಖಾತ್ರಿಪಡಿಸಿಕೊಳ್ಳಲು ಪ್ರಧಾನಿ ಮೋದಿ ಅವರ ನಾಯಕತ್ವದಲ್ಲಿ ಅಗತ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಯಾವುದೇ ಸವಾಲುಗಳನ್ನು ಎದುರಿಸಲು ಸಂಪೂರ್ಣ ಸಜ್ಜಾಗಿದ್ದೇವೆ ಎಂದಿದ್ದಾರೆ. ಇಂತಹ ಜಾಗತಿಕ ಅನಿಶ್ಚಿತತೆ ಎದುರಾದಾಗ ಭಾರತ ಈ ಹಿಂದೆಯೂ ಪುಟಿದೇಳುವ ಸಾಮರ್ಥ್ಯವನ್ನು ಪ್ರದರ್ಶಿಸಿದೆ. ಅದೇ ರೀತಿ ಅಗತ್ಯಕ್ಕೆ ತಕ್ಕಂತೆ ಪೂರ್ವ ಸಿದ್ಧತೆ ಮತ್ತು ಸಂಘಟನಾತ್ಮಕವಾಗಿ ಭಾರತ ಕಾರ್ಯನಿರ್ವಹಿಸುವುದನ್ನು ಮುಂದುವರೆಸುತ್ತದೆ ಎಂದು ಅವರು ತಿಳಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಬೇಜವಾಬ್ದಾರಿ ಹಾಗೂ ಸಮಸ್ಯೆ ಸೃಷ್ಟಿಸುವಂತಹ ವದಂತಿಗಳನ್ನುಯಾರೂ ಹರಡಬಾರದು. ಕೇಂದ್ರ ಸಚಿವರು ಹರ್‌ದೀಪ್ ಸಿಂಗ್ ಪುರಿ ಲಾಕ್‌ಡೌನ್ ಪ್ರಶ್ನೆಯೇ ಇಲ್ಲ ಎಂದಿದ್ದಾರೆ. ಲಾಕ್‌ಡೌನ್ ಪ್ರಶ್ನೆಯೇ ಇಲ್ಲ ಎಂದು ಪುನರುಚ್ಚರಿಸಿದರು.**

ಈ ವ್ಯೂಹಾತ್ಮಕ ನಿರ್ಣಯಗಳು ಅಂತಾರಾಷ್ಟ್ರೀಯ ಬೆಲೆ ಏರಿಳಿತದಿಂದ ರಾಷ್ಟ್ರದ ನಾಗರಿಕರನ್ನು ರಕ್ಷಿಸುವುದು, ಹಣದುಬ್ಬರದ ಒತ್ತಡಗಳನ್ನು ಕಡಿಮೆ ಮಾಡುವುದು ಸೇರಿದಂತೆ ವಿಶಾಲ ದೃಷ್ಟಿಕೋನದಲ್ಲಿ ಆರ್ಥಿಕತೆಯನ್ನು ರಕ್ಷಿಸುವ

ಕೇಂದ್ರ ಸರ್ಕಾರವು ಅಬಕಾರಿ ಸುಂಕವನ್ನು ಇಳಿಸಿರುವ ಬೆನ್ನಲ್ಲೇ, ರಾಜ್ಯ ಸರ್ಕಾರಗಳೂ ಸಹ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ವಿಧಿಸುವ ವ್ಯಾಟ್ ಅಥವಾ ಮಾರಾಟ ತೆರಿಗೆಯನ್ನು ಕಡಿತಗೊಳಿಸಬೇಕು ಎಂದು ಕೇಂದ್ರವು ಮನವಿ ಮಾಡಿದೆ.

## 16 ಸಕ್ಕರೆ ಕಾರ್ಖಾನೆಗಳಿಗೆ ರಿಕವರಿ ಸರ್ಟಿಫಿಕೇಟ್ ಜಾರಿ

• ಉದಯವಾಹಿನಿ, ಬೆಂಗಳೂರು

ಕಬ್ಬು ಪೂರೈಕೆ ಮಾಡಿದ ರೈತರಿಗೆ ನಿಯಮಾನುಸಾರ ಬಿಲ್ ಪಾವತಿ ಮಾಡದ 16 ಸಕ್ಕರೆ ಕಾರ್ಖಾನೆಗಳಿಗೆ ರಿಕವರಿ ಸರ್ಟಿಫಿಕೇಟ್ (ವಸೂಲಾತಿ ದೃಢೀಕರಣ ಪತ್ರ) ಜಾರಿ ಮಾಡಲಾಗಿದೆ.

ರೈತರಿಗೆ ಕೊಡಬೇಕಾದ ಕಬ್ಬಿನ ಬಿಲ್ ಬಾಕಿಯನ್ನು ಕಂದಾಯ ಬಾಕಿ ಎಂದು ಪರಿಗಣಿಸಿ ಶೇ 15ರಷ್ಟು ಬಡ್ಡಿಯೊಂದಿಗೆ ರೈತರಿಗೆ ಕೊಡಿಸಬೇಕು ಎಂದು ಕಬ್ಬು ಅಭಿವೃದ್ಧಿ ಆಯುಕ್ತ ಹಾಗೂ ಸಕ್ಕರೆ ನಿರ್ದೇಶಕ ಗೋವಿಂದರೆಡ್ಡಿ ಅವರು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ರಾಜ್ಯದಲ್ಲಿ ಈ ಹಂಗಾಮಿನಲ್ಲಿ ಒಟ್ಟು 81 ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಸಿದ್ದು, ನಾಲ್ಕು ಸಹಕಾರಿ



ಸೇರಿದಂತೆ ಒಟ್ಟು 16 ಸಕ್ಕರೆ ಕಾರ್ಖಾನೆಗಳು ನಿಯಮಾನುಸಾರ ಕಬ್ಬಿನ ಬಿಲ್ ಪಾವತಿ ಮಾಡದ ಕಾರಣ ರಿಕವರಿ ಸರ್ಟಿಫಿಕೇಟ್ ಜಾರಿ ಮಾಡಲಾಗಿದೆ . ಕೆಲವು ಸಕ್ಕರೆ ಕಾರ್ಖಾನೆಗಳು ಕಬ್ಬಿನ ಬಿಲ್ ಬಾಕಿ ಉಳಿಸಿಕೊಂಡಿದ್ದು, ಅಂತಹ ಕಾರ್ಖಾನೆಗಳಿಗೆ ಬಾಕಿಯನ್ನು ತಕ್ಷಣ ಪಾವತಿ ಮಾಡಬೇಕು ಎಂದು ನೋಟಿಸ್ ಜಾರಿ ಮಾಡಲಾಗಿತ್ತು. ನೋಟಿಸ್ ನೀಡಿದ ನಂತರವೂ ಕೆಲವು ಕಾರ್ಖಾನೆಗಳು ಬಾಕಿ ಉಳಿಸಿಕೊಂಡ ಹಿನ್ನೆಲೆಯಲ್ಲಿ ರಿಕವರಿ ಸರ್ಟಿಫಿಕೇಟ್ ಜಾರಿ ಮಾಡಲಾಗಿದೆ ಎಂದು ಆಯುಕ್ತರು ತಿಳಿಸಿದ್ದಾರೆ.

ಕಳೆದ ಹಂಗಾಮಿಗೆ ಹೋಲಿಕೆ ಮಾಡಿದರೆ ಕಾರ್ಖಾನೆಗಳು ಘೋಷಿಸಿದ ದರದಂತೆ ಪ್ರತಿ ಟನ್ ಕಬ್ಬಿಗೆ 250 ರಿಂದ 300 ಹೆಚ್ಚಳವಾಗಿದೆ. ಕಬ್ಬಿನ ಬಿಲ್ ಪಾವತಿಯನ್ನು ಹೋಲಿಕೆ ಮಾಡಿದರೆ ಕಳೆದ ಹಂಗಾಮಿಗಿಂತ 4,709.89 ಕೋಟಿ ಹೆಚ್ಚಳವಾಗಲಿದೆ. ಕಬ್ಬಿನ ಬಿಲ್ ಪಾವತಿಯಲ್ಲಿ ಇತರ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಕರ್ನಾಟಕ ಮೊದಲ ಸ್ಥಾನದಲ್ಲಿದೆ. 2025-26 ನೇ ಹಂಗಾಮಿನ ಅಂತ್ಯಕ್ಕೆ ಸುಮಾರು 574 ಲಕ್ಷ ಮೆಟ್ರಿಕ್ ಟನ್ ಕಬ್ಬು ನುರಿಸಿ ಸುಮಾರು 23,250 ಕೋಟಿಯನ್ನು ಕಬ್ಬು ಪೂರೈಕೆ ಮಾಡಿದ ರೈತರಿಗೆ ಪಾವತಿಸುವ ಅಂದಾಜು ಇದೆ ಎಂದು ಆಯುಕ್ತರು ವಿವರಿಸಿದ್ದಾರೆ.

**300 ಕೋಟಿ ಬಿಡುಗಡೆ:** ರಾಜ್ಯ ಸರ್ಕಾರ ಘೋಷಣೆ ಮಾಡಿದಂತೆ ಎಫ್‌ಆರ್‌ಪಿ ಮೇಲೆ ಪ್ರತಿ ಟನ್ ಕಬ್ಬಿಗೆ 50 ಆರ್ಥಿಕ ನೆರವನ್ನು ಕಬ್ಬು ಪೂರೈಕೆ ಮಾಡಿದ ರೈತರಿಗೆ ನೀಡಲು ರಾಜ್ಯ ಸರ್ಕಾರ 300 ಕೋಟಿ ಬಿಡುಗಡೆ ಮಾಡಿದೆ.

## 80 ಸಾವಿರ ಸಂಬಳ, ಲಕ್ಷಾಂತರ ಭತ್ಯೆ ಇದ್ದರೂ ಮುಗಿಯದ 'ಉಚಿತ'ದ ಹಪಾಹಪಿ

■ ಶಾಸಕರ ಬೇಡಿಕೆಗೆ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಮಣಿಯುತ್ತಾ ■ ಸಾರ್ವಜನಿಕ ವಲಯದಲ್ಲಿ ಆಕ್ರೋಶ

• ಉದಯವಾಹಿನಿ, ಬೆಂಗಳೂರು

ನಮಗೆ ಐಪಿಎಲ್ ಟಿಕೆಟ್ ಉಚಿತ ಬೇಕು. ಸರದಿ ಸಾಲಿನಲ್ಲಿ ಜನಸಾಮಾನ್ಯರ ರೀತಿಯಲ್ಲಿ ಕಾಯಲು ಸಾಧ್ಯವಿಲ್ಲ. ಅಷ್ಟೇ ಅಲ್ಲ, ಕ್ರಿಕೆಟ್ ವೀಕ್ಷಣೆ ಮಾಡಲು ಕ್ರೀಡಾಂಗಣಕ್ಕೆ ಹೋದಾಗ ನಮಗೆ ಗೌರವ ನೀಡಬೇಕು. ಇದು ನಾವು ಮತ ಹಾಕಿ ಆರಿಸಿ ವಿಧಾನಸಭೆಗೆ ಕಳಿಸಿದ ಶಾಸಕರ ಬೇಡಿಕೆಯಾಗಿದೆ. ಗುರುವಾರ ವಿಧಾನಸಭೆಯಲ್ಲಿ ಆಡಳಿತ- ವಿಪಕ್ಷ ಶಾಸಕರು ಸ್ಪೀಕರ್ ಯು.ಟಿ ಖಾದರ್ ಮುಂದಿಟ್ಟ ಈ ವಿಚಿತ್ರ ಬೇಡಿಕೆ ಸಾಕಷ್ಟು ಚರ್ಚೆಗೆ ಎಡೆಮಾಡಿಕೊಡುತ್ತಿದೆ.

ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆ ಶಿವಕುಮಾರ್, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸೇರಿದಂತೆ ಪ್ರಮುಖ ರಾಜಕಾರಣಿಗಳಿಗೆ ಕ್ರಿಕೆಟ್ ನೋಡುವ ಆಸಕ್ತಿ ಇದೆ.

ಸಿಎಂ ಕ್ರಿಕೆಟ್ ನೋಡಲು ಹೋದಾಗ ಅವರ ಜೊತೆಗೆ ಶಾಸಕರು, ಪರಿಷತ್ ಸದಸ್ಯರು ಸಾಮಾನ್ಯವಾಗಿ ತೆರಳುತ್ತಾರೆ. ಪ್ರತಿ ಕ್ರಿಕೆಟ್ ಪಂದ್ಯಾಟದ ಸಂದರ್ಭದಲ್ಲಿ ಶಾಸಕರಿಗೆ ಒಂದು ಅಥವಾ ಎರಡು ವಿಐಪಿ ಟಿಕೆಟ್ ಉಚಿತ ನೀಡಲಾಗುತ್ತದೆ. ಕೆಲವು ಶಾಸಕರು ಕ್ರಿಕೆಟ್ ವೀಕ್ಷಿಸಲು ಹೋದರೆ ಬಹುತೇಕ ಸಂದರ್ಭದಲ್ಲಿ ವಿಐಪಿ ಟಿಕೆಟ್‌ಗಳು ಅವರ ಆಪ್ತರ ಪಾಲಾಗುತ್ತದೆ.

**ಆಸನ ಸಾಮರ್ಥ್ಯ 28,000!:** ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಒಟ್ಟು ಆಸನ ಸಾಮರ್ಥ್ಯ 35 ಸಾವಿರ ಇದೆ. ಒಟ್ಟು ಟಿಕೆಟ್‌ಗಳ ಪೈಕಿ ಶೇ 80 ರಷ್ಟು ಆನ್‌ಲೈನ್‌ನಲ್ಲಿ ಮಾರಾಟ ಆಗುತ್ತದೆ.



ಕೇವಲ ಶೇ. 20ರಷ್ಟು ಟಿಕೆಟ್ ಮಾತ್ರ ಕೌಂಟರ್‌ನಲ್ಲಿ ಮಾರಾಟ ಮಾಡಲಾಗುತ್ತದೆ. ಪಂದ್ಯಾಟ ನಡೆಯುವ ಮೂರು ದಿನಗಳ ಮುಂಚಿತವಾಗಿ ಟಿಕೆಟ್ ಮಾರಾಟಕ್ಕೆ ಲಭ್ಯವಿರುತ್ತದೆ. ಆರ್‌ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಕಾಲ್ತುಳಿತ ದುರಂತದ ಬಳಿಕ ವೀಕ್ಷಕರ ಆಸನ ಸಾಮರ್ಥ್ಯವನ್ನು 28,000 ಕ್ಕೆ ಸೀಮಿತಗೊಳಿಸಲಾಗಿದೆ. ಸಾಮಾನ್ಯವಾಗಿ ಟಿಕೆಟ್ ದರ 2,300 ರಿಂದ ಆರಂಭಗೊಂಡು 65,000 ವರೆಗೆ ಇರುತ್ತದೆ.

### ಶಾಸಕರಿಗೆ ಟಿಕೆಟ್ ಕೊಳ್ಳುವ ಸಾಮರ್ಥ್ಯ ಇಲ್ಲವೇ

**ನಮ್ಮ ಜನಪ್ರತಿನಿಧಿಗಳಾದ ಶಾಸಕರಿಗೆ ಸರ್ಕಾರ ಎಲ್ಲಾ ರೀತಿಯ ಸೌಲಭ್ಯಗಳನ್ನು ವೈಯಕ್ತಿಕವಾಗಿ ನೀಡುತ್ತದೆ. ಶಾಸಕರ ವೇತನವನ್ನು 40 ಸಾವಿರದಿಂದ 80 ಸಾವಿರಕ್ಕೆ ಏರಿಕೆ ಮಾಡಲಾಗಿದೆ. ಪಿಂಚಣಿ ಮೊತ್ತ 75,000 ಇದೆ. ಕ್ಷೇತ್ರ ಪ್ರವಾಸ ಭತ್ಯೆ 80,000 ಇದೆ. ರೈಲು, ವಿಮಾನ ಟಿಕೆಟ್‌ಗಾಗಿ ವಾರ್ಷಿಕವಾಗಿ 3.50 ಲಕ್ಷ ನಿಗದಿ ಮಾಡಲಾಗಿದೆ. ಅಲ್ಲದೆ ವೈದ್ಯಕೀಯ ವೆಚ್ಚವನ್ನು ನೀಡಲಾಗುತ್ತದೆ. ವಿಪಕ್ಷ ನಾಯಕರ ವೇತನ 80,000 ಇದ್ದರೆ, ಆತಿಥ್ಯ ಭತ್ಯೆ 3 ಲಕ್ಷ ಇದೆ. ಸಭಾಧ್ಯಕ್ಷರು ಹಾಗೂ ಸಭಾಪತಿಗಳ ವೇತನ1.25 ಲಕ್ಷ ಇದೆ. ಇವರ ಆತಿಥ್ಯಭತ್ಯೆಗಾಗಿ 5 ಲಕ್ಷ ಪ್ರತಿ ತಿಂಗಳು ನೀಡಲಾಗುತ್ತದೆ. ಇನ್ನು ಮುಖ್ಯಮಂತ್ರಿಗಳ ವೇತನ 1.50 ಲಕ್ಷ ಇದ್ದರೆ ಸಚಿವರ ವೇತನ 1.25 ಲಕ್ಷ ಇದೆ. ಮುಖ್ಯಮಂತ್ರಿ, ಸಚಿವರಿಗೆ ಆತಿಥ್ಯಭತ್ಯೆಗೆಂದು 5 ಲಕ್ಷ ನೀಡಲಾಗುತ್ತದೆ. ಸಚಿವರಿಗೆ ಮನೆ ಬಾಡಿಗೆ ಭತ್ಯೆ 2.50 ಲಕ್ಷ ಇದೆ. ಇಷ್ಟೆಲ್ಲಾ ಸೌಲಭ್ಯ ಇದ್ದರು ಐಪಿಎಲ್ ಟಿಕೆಟ್ ಉಚಿತವಾಗಿ ನೀಡಬೇಕು.**

ಆದರೆ ವಿಐಪಿ ಟಿಕೆಟ್ ಉಚಿತವಾಗಿ ನೀಡಲಾಗುತ್ತದೆ.

**ಶಾಸಕರಿಗೆ ಉಚಿತ ಟಿಕೆಟ್ ಕಡ್ಡಾಯವಲ್ಲ:** ಹಾಗಂತ ಶಾಸಕರಿಗೆ ಕೆಎಸ್‌ಸಿಎನಿಂದ ಉಚಿತವಾಗಿ ಟಿಕೆಟ್ ಕೊಡಲೇಬೇಕು ಎಂಬುವುದು ಕಡ್ಡಾಯವಲ್ಲ. ಸಾಮಾನ್ಯವಾಗಿ ರಾಜಕಾರಣಿಗಳು, ಜನಪ್ರತಿನಿಧಿಗಳು ಹಾಗೂ ಸರ್ಕಾರ ಹಾಗೂ ಕ್ರಿಕೆಟ್ ಸಂಸ್ಥೆಗಳ ನಡುವೆ ಉತ್ತಮ ಬಾಂಧವ್ಯ ಇರುತ್ತದೆ.


ಕೆಲವು ರಾಜಕಾರಣಿಗಳು ಕೆಎಸ್‌ಸಿಎ ಸದಸ್ಯರಾಗಿರುತ್ತಾರೆ. ಸ್ವತಃ ಡಿಸಿಎಂ ಡಿಕೆ ಶಿವಕುಮಾರ್ ಕೂಡಾ ಕೆಎಸ್‌ಸಿಎ ಸದಸ್ಯರಾಗಿದ್ದಾರೆ. ಹೀಗಾಗಿ ರಾಜಕಾರಣಿಗಳು, ಹಿರಿಯ ಅಧಿಕಾರಿಗಳಿಗೆ ಉಚಿತವಾಗಿ ವಿಐಪಿ ಟಿಕೆಟ್ ನೀಡುವುದು ಸಂಪ್ರದಾಯವಾಗಿ ಬಂದಿದೆ. ಬದಲಾಗಿ ಇದು ಕಡ್ಡಾಯವಲ್ಲ.

**ವೆಂಕಟೇಶ್ ಪ್ರಸಾದ್ ಜೊತೆ ಡಿಸಿಎಂ ಚರ್ಚೆ:** ಶಾಸಕರಿಗೆ ಐಪಿಎಲ್ ಸೇರಿದಂತೆ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿಗಳ ಟಿಕೆಟ್ ವಿತರಣೆ ಸಂಬಂಧ ವಿಧಾನಸಭೆಯಲ್ಲಿ ನಡೆದ ಚರ್ಚೆಯ ಬೆನ್ನಲ್ಲೇ ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಅಧ್ಯಕ್ಷ ವೆಂಕಟೇಶ್ ಪ್ರಸಾದ್, ಕಾರ್ಯದರ್ಶಿ ವಿನಯ್ ಮತ್ತಿತರರ ಜತೆ ಡಿಸಿಎಂ ಡಿಕೆ ಶಿವಕುಮಾರ್ ಅವರು ಚರ್ಚೆ ನಡೆಸಿದ್ದಾರೆ. ಶುಕ್ರವಾರ ವಿಧಾನಸೌಧದ ಕಚೇರಿಯಲ್ಲಿ ಭೇಟಿ ಮಾಡಿ ವಿಧಾನಸಭೆ ಸ್ಪೀಕರ್ ಯು ಟಿ ಖಾದರ್ ಅವರು ನೀಡಿದ ಸೂಚನೆಯನ್ನು ಡಿಸಿಎಂ ಡಿ ಕೆ ಶಿವಕುಮಾರ್ ಅವರು ವೆಂಕಟೇಶ್ ಪ್ರಸಾದ್ ಗಮನಕ್ಕೆ ತಂದಿದ್ದಾರೆ.

**ಈ ದಿನದ ದರ** ಪೆಟ್ರೋಲ್: 102.96 ₹/L ಡೀಸೆಲ್ : 90.99 ₹/L ಬಂಗಾರ: ₹14,471/Gram24ct ₹13,265/Gram22ct ಬೆಳ್ಳಿ: ₹240.00/Gram

ಅಂತರಾಳದಿಂದ...
EDITORIAL

# ಜೆಜೆಎಂ: ಅನುದಾನ ಬಳಕೆ ಸಮಸ್ಯೆ ನೆಪ ಹೇಳಲಾಗದ ಆಡಳಿತ ವೈಫಲ್ಯ



ರಾಜ್ಯಗಳಿಗೆ ಅನುದಾನ ನೀಡುವುದರಲ್ಲಿ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಅನುಸರಿಸುತ್ತಿದ್ದು, ಕರ್ನಾಟಕಕ್ಕೆ ಅನ್ಯಾಯ ಎಸಗುತ್ತಿದೆ ಎಂದು ಸಿಎಂ ಸಿದ್ದರಾಮಯ್ಯ ಅವರು ಅನೇಕ ಸಂದರ್ಭಗಳಲ್ಲಿ ದೂರಿದ್ದಾರೆ. ಆದರೆ, ವಿಧಾನಸಭೆಯಲ್ಲಿ ಮಂಡಿಸಲಾದ ಮಹಾಲೇಖಪಾಲರ ವರದಿ (ಸಿಎಜಿ) ಬೇರೆಯದೇ ಕಥೆಯನ್ನು ಹೇಳುತ್ತಿದೆ. 'ಜಲಜೀವನ್ ಮಿಷನ್' (ಜೆಜೆಎಂ) ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಖರ್ಚು ಮಾಡಲು ರಾಜ್ಯ ಸರ್ಕಾರ ಹೆಣಗಾಡುತ್ತಿದೆ. ಈ ಯೋಜನೆಯ ಅನುಷ್ಠಾನದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮುಖ್ಯ ಪಾತ್ರವಹಿಸುವುದರಿಂದ, ಸಚಿವ ಪ್ರಿಯಾಂಕ್ ಖರ್ಗೆ ಅವರು ಈ ಬಗ್ಗೆ ಗಮನಹರಿಸಬೇಕಾಗಿದೆ. ನೀರು ಆಯ್ಕೆಗೆ ಸಂಬಂಧಿಸಿದ ಈ ಯೋಜನೆಯು ಕಲ್ಯಾಣ ಕಾರ್ಯಕ್ರಮವಾಗಿರದೆ, ಮೂಲಭೂತ ಹಕ್ಕಾಗಿದೆ. ಹಾಗಾಗಿಯೇ, ಪ್ರತಿ ಮನೆಗೂ ನಳದ ನೀರಿನ ಸಂಪರ್ಕ ಕಲ್ಪಿಸುವ 'ಜೆಜೆಎಂ'ನ ಸಾರ್ವತ್ರಿಕ ಯೋಜನೆಯು ಮೂಲಸೌಕರ್ಯ ಕಲ್ಪಿಸುವ ಗುರಿಯಷ್ಟೇ ಆಗಿರದೆ, ಸಾಮಾಜಿಕ ಒಪ್ಪಂದದ ಬದ್ಧತೆಯಾಗಿದೆ. 2019 ಮತ್ತು 2024ರ ನಡುವಿನ ಬಿಜೆಪಿ ಮತ್ತು ಕಾಂಗ್ರೆಸ್ ಆಡಳಿತದಲ್ಲಿ ಕೇಂದ್ರದಿಂದ ಹಂಚಿಕೆಯಾಗಿದ್ದ 24,819 ಕೋಟಿಯಲ್ಲಿ, ರಾಜ್ಯ ಪಡೆದುಕೊಂಡಿರುವುದು ಶೇ 45ರಷ್ಟು ಮೊತ್ತವನ್ನು ಮಾತ್ರ. ಅನುದಾನವನ್ನು ಬಳಕೆ ಮಾಡಿಕೊಂಡಿದ್ದಕ್ಕೆ ಸಂಬಂಧಿಸಿದ ಪ್ರಮಾಣಪತ್ರಗಳನ್ನು ಸರಿಯಾದ ಸಮಯಕ್ಕೆ ಸಲ್ಲಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿರುವುದೇ ಪೂರ್ಣ ಅನುದಾನ ದೊರೆಯದಿರಲು ಕಾರಣ. ಆಡಳಿತ ಯಂತ್ರದಲ್ಲಿನ ಈ ಸಮಸ್ಯೆಯು ಪಕ್ಷಾತೀತ ಎನ್ನುವುದು ಗಮನಾರ್ಹ. ಅನುದಾನದ ಅಸಮರ್ಪಕ ಬಳಕೆಯ ಪರಿಣಾಮಗಳು ಕಣ್ಣಿಗೆ ಕಾಣಿಸುವಂತಿವೆ. 2024ರ ಕೊನೆಯ ವೇಳೆಗೆ ಮನೆಗಳಿಗೆ ನೀರಿನ ಸಂಪರ್ಕ ಕಲ್ಪಿಸುವ ತನ್ನ ಗುರಿಯಲ್ಲಿ ಶೇ 66ರಷ್ಟನ್ನು ಸಾಧಿಸಲಷ್ಟೇ ರಾಜ್ಯ ಯಶಸ್ವಿಯಾಗಿದೆ. ಟೆಂಡರ್ ಪ್ರಕ್ರಿಯೆಯಲ್ಲಿನ ವಿಳಂಬ, ಭೂಮಿಯನ್ನು ಸ್ವಾಧೀನಕ್ಕೆ ಪಡೆಯದೆ ಮಂಜೂರು ಮಾಡಿದ ಯೋಜನೆಗಳು ಹಾಗೂ ಖರ್ಚು ಮಾಡಿದ ನಂತರವೂ ಅಪೂರ್ಣವಾಗಿ ಉಳಿದಿರುವ ಕೆಲಸಗಳು ವ್ಯವಸ್ಥೆಯ ವೈಫಲ್ಯಕ್ಕೆ ನಿದರ್ಶನದಂತಿವೆ. ಸುಸ್ಥಿರತೆ ಮತ್ತು ಗುಣಮಟ್ಟದ ಬಗ್ಗೆಯೂ ಪ್ರಶ್ನೆಗಳು ಉಳಿದಿವೆ. ಅಂತರ್ಜಲದ ಮೇಲಿನ ರಾಜ್ಯದ ಅವಲಂಬನೆ ಮುಂದು ವರಿದಿದೆ. ಆದರೆ, ನೀರಿನ ಗುಣಮಟ್ಟದ ಮೇಲ್ವಿಚಾರಣೆಯ ವೆಚ್ಚವು ಲೆಕ್ಕಪರಿಶೋಧನಾ ಅವಧಿಯಲ್ಲಿ ತೀವ್ರವಾಗಿ ಕುಸಿದಿದೆ. ಅಪೂರ್ಣ ಕಾಮಗಾರಿಗಳ ನಡುವೆಯೂ ಗ್ರಾಮಗಳಲ್ಲಿ ಯೋಜನೆಯು ಸಂಪೂರ್ಣವಾಗಿ ಅನುಷ್ಠಾನಗೊಂಡಿದೆ ಎನ್ನುವ ಘೋಷಿತ ವರದಿಗಳು ಯೋಜನೆಯ ವಿಶ್ವಾಸಾರ್ಹತೆಯನ್ನು ಮತ್ತಷ್ಟು ಕುಗ್ಗಿಸುವಂತಿವೆ. 3,100ಕ್ಕೂ ಹೆಚ್ಚಿನ ಹಳ್ಳಿಗಳಿಗೆ ರಾಸಾಯನಿಕಗಳು ಬೆರೆತು ಕಲುಷಿತಗೊಂಡ ನೀರಿನ ಸರಬರಾಜು ಆಗುತ್ತಿದೆ ಎನ್ನುವ ಇತ್ತೀಚಿನ ವರದಿಗಳು ಸಿಎಜಿಯ ವರದಿಯನ್ನು ಬಲಪಡಿಸುವಂತಿವೆ. ಪರೀಕ್ಷೆಗೆ ಒಳಗಾದ ಸುಮಾರು ಶೇ 10ರಷ್ಟು ಮಾದರಿಗಳಲ್ಲಿ ಮಾಲಿನ್ಯಕಾರಕ ಅಂಶಗಳು ಪತ್ತೆಯಾಗಿವೆ. ಇಂಥ ಪರೀಕ್ಷೆಗಳು ರೋಗ ಹರಡಿದ ನಂತರ ನಡೆಯುತ್ತವೆಯೇ ಹೊರತು, ಅವುಗಳನ್ನು ತಡೆಗಟ್ಟುವ ಮುನ್ನೆಚ್ಚರಿಕೆಯಾಗಿ ಅಲ್ಲ ಎನ್ನುವುದು ಸಾರ್ವಜನಿಕ ಆರೋಗ್ಯದ ಮೇಲ್ವಿಚಾರಣೆಗೆ ಸಂಬಂಧಿಸಿದಂತೆ ಇರುವ ಸಮಸ್ಯೆಯನ್ನು ಬಹಿರಂಗಪಡಿಸುತ್ತದೆ. ಇಷ್ಟೆಲ್ಲ ಸಮಸ್ಯೆಗಳ ನಡುವೆಯೂ. ಜಲಜೀವನ್ ಮಿಷನ್ ಯೋಜನೆಯ ಇಲ್ಲಿಯವರೆಗಿನ ಅನುಷ್ಠಾನದಿಂದ ಅನೇಕ ಸಕಾರಾತ್ಮಕ ಬೆಳವಣಿಗೆಗಳು ಆಗಿರುವುದನ್ನೂ ಗಮನಿಸಬೇಕು. ಮನೆಗಳಿಗೆ ನಳದ ಸಂಪರ್ಕದಿಂದಾಗಿ ಗ್ರಾಮೀಣ ಮಹಿಳೆಯರ ದೈನಂದಿನ ಶ್ರಮವು ಸ್ವಲ್ಪವಾದರೂ ಹಗುರವಾಗಿದೆ. ಶಾಲೆಯಿಂದ ಹೊರಗುಳಿಯುವ ಬಾಲಕಿಯರ ಸಂಖ್ಯೆಯಲ್ಲಿ ಇಳಿಕೆಯಾಗಿದೆ. ಈ ವಿದ್ಯಮಾನಗಳು, ಯೋಜನೆ ಪರಿಣಾಮಕಾರಿಯಾಗಿ ಅನುಷ್ಠಾನಗೊಂಡಲ್ಲಿ ಸಾಮಾಜಿಕವಾಗಿ ಏನೆಲ್ಲ ಯಶಸ್ಸು ಸಾಧ್ಯವಾಗಬಹುದು ಎನ್ನುವುದನ್ನು ಸೂಚಿಸುವಂತೆಯೇ, ಕಳಪೆ ನಿರ್ವಹಣೆಯಿಂದಾಗಿ ಏನೆಲ್ಲ ಕಳೆದುಕೊಳ್ಳುತ್ತಿದ್ದೇವೆ ಎನ್ನುವುದರ ಸಂಕೇತವೂ ಆಗಿವೆ. 'ಜೆಜೆಎಂ' ಯೋಜನೆಯ ಅನುಷ್ಠಾನದಲ್ಲಿನ ವೈಫಲ್ಯವು ಆರ್ಥಿಕ ಶಿಸ್ತಿನ ಕೊರತೆಯನ್ನು ಎತ್ತಿ ತೋರಿಸುತ್ತಿದೆ. ಆರ್ಥಿಕ ವರ್ಷದ ಕೊನೆಯ ತಿಂಗಳಲ್ಲಿ ಹೆಚ್ಚು ಹಣ ಖರ್ಚು ಮಾಡುವುದರಲ್ಲಿ ('ಮಾರ್ಚ್ ರಶ್') ರಾಜ್ಯದ ದಾಖಲೆ ಉತ್ತಮವಾಗಿದೆ.

ಶೇ. 40ರಷ್ಟು ಬಂಡವಾಳ ವೆಚ್ಚವನ್ನು ಮಾರ್ಚ್ ತಿಂಗಳವರೆಗೂ ಮುಂದೂಡುವುದು ತರಾತುರಿಯ ವೆಚ್ಚವನ್ನು ಪ್ರೋತ್ಸಾಹಿಸುವಂತಿದೆ. ಈ ನೀತಿಯಲ್ಲಿ ತುರ್ತು ತಿದ್ದುಪಡಿ ಆಗಬೇಕಾಗಿದೆ. ಫಲಿತಾಂಶ ಆಧರಿಸಿದ ಬಜೆಟ್ ಅನ್ನು ಸರ್ಕಾರ ಸಾಂಸ್ಕೃತಿಕರಣಗೊಳಿಸಬೇಕಾಗಿದೆ. ಹಾಗೆಯೇ ವೆಚ್ಚದ ಬದಲಾಗಿ ನಿಗದಿತ ಮಾನದಂಡಗಳಿಗೆ ನಿಲುಕುವಂತೆ ಅನುದಾನಗಳನ್ನು ಹೊಂದಾಣಿಕೆ ಮಾಡಬೇಕಾಗಿದೆ. ಲಭ್ಯ ಅನುದಾನದ ಸಮರ್ಪಕ ಬಳಕೆ ಮಾಡಿಕೊಂಡಾಗಷ್ಟೇ, ಅನುದಾನ ಹಂಚಿಕೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ತಾರತಮ್ಯ ಕುರಿತ ರಾಜ್ಯ ಸರ್ಕಾರದ ದೂರುಗಳಿಗೆ ಬಲ ಬರುತ್ತದೆ. ಕುಡಿಯುವ ನೀರಿನಂತಹ ಮೂಲಸೌಕರ್ಯದ ವಿಷಯದಲ್ಲಿನ ವೈಫಲ್ಯಕ್ಕೆ ಯಾವುದೇ ನೆಪ ಸಮರ್ಥನೆ ಆಗದು.

# ಅನಾವರಣಗೊಳ್ಳದ ಅಂತರಂಗ: ಪಬ್ಲಿಕ್, ಪ್ರೈವೇಟ್, ಸೀಕ್ರೆಟ್



ಜಗತ್ತಿನ ಅತಿದೊಡ್ಡ ರಹಸ್ಯ ಯಾವುದು ಎಂದು ಕೇಳಿದರೆ, ಬಹುಶಃ ಅದು 'ಮನುಷ್ಯನ ಮನಸ್ಸು' ಎನ್ನಬಹುದು. ಪ್ರತಿಯೊಬ್ಬ ಮನುಷ್ಯನೂ ತನ್ನ ಅಸ್ತಿತ್ವದ ಒಳಗೆ ಮೂರು ವಿಭಿನ್ನ ಲೋಕಗಳನ್ನು ಸೃಷ್ಟಿಸಿಕೊಂಡಿರುತ್ತಾನೆ. ಜಪಾನಿ ಗಾದೆಯೊಂದು ಹೇಳುವಂತೆ, ಮನುಷ್ಯನಿಗೆ ಮೂರು ಮುಖಗಳಿವೆ; ಒಂದು ಜಗತ್ತಿಗೆ ತೋರಿಸಲು, ಇನ್ನೊಂದು ಆಪ್ತರಿಗೆ ಮಾತ್ರ ಸೀಮಿತವಾದುದು, ಮತ್ತೊಂದು ಯಾರಿಗೂ ತಿಳಿಯದ ತನ್ನೊಳಗೆ ಮಾತ್ರ ಹುದುಗಿರುವ ಸತ್ಯ. ಇಂದಿನ ಡಿಜಿಟಲ್ ಯುಗದಲ್ಲಿ ಈ ಮೂರು ಮುಖಗಳ ನಡುವಿನ ಅಂತರ ಹೆಚ್ಚಾಗುತ್ತಿದ್ದು, ನಮ್ಮ ಅಸಲಿ ವ್ಯಕ್ತಿತ್ವ ಯಾವುದು ಎಂಬ ಗೊಂದಲ ಮೂಡುವುದು ಸಹಜ. ಮೊದಲ ಮುಖ 'ಸಾರ್ವಜನಿಕ' ಇದು ಸಮಾಜಕ್ಕೆ, ಕಛೇರಿಗೆ ಅಥವಾ ಸಾಮಾಜಿಕ ಜಾಲತಾಣಗಳಿಗೆ ಉಣಬಡಿಸುವ ಚಿತ್ರಣ. ಇಲ್ಲಿ ಆದರ್ಶವಂತರು, ಹಸನ್ಮುಖಿಗಳು ಮತ್ತು ಯಶಸ್ವಿ ವ್ಯಕ್ತಿಗಳು. ಫೇಸ್‌ಬುಕ್ ಅಥವಾ ಇನ್‌ಸ್ಟಾಗ್ರಾಮ್‌ನಲ್ಲಿ ಹಂಚಿಕೊಳ್ಳುವ ಫೋಟೋಗಳು ಬದುಕಿನ ಕೇವಲ 10% ಸಂಭ್ರಮವನ್ನು ಮಾತ್ರ ಪ್ರತಿನಿಧಿಸುತ್ತವೆ. ಇಲ್ಲಿ ನೋವುಗಳಿಗೆ ಜಾಗವಿಲ್ಲ, ವೈಫಲ್ಯಗಳಿಗೆ ಸ್ಥಾನವಿಲ್ಲ. ಇದು ಕೇವಲ ಇತರರ ಮೆಚ್ಚುಗೆಗಾಗಿ ಸಿದ್ಧಪಡಿಸಿಕೊಂಡಿರುವ ಒಂದು ಪ್ರದರ್ಶನ ಮಳಿಗೆಯಂತೆ. ಈ ಮುಖ ಸಮಾಜದಲ್ಲಿ ಗೌರವ ತಂದುಕೊಡಬಹುದು, ಆದರೆ ಇದು ಸಂಪೂರ್ಣ ಸತ್ಯವಲ್ಲ.



-ಡಾ.ಸುಧಾಕರ.ಜಿ.ಲಕ್ಕವಳ್ಳಿ.

ಎರಡನೆಯದು 'ಖಾಸಗಿ' ಮುಖ. ಇದು ಮನೆಮಂದಿಗೆ, ಆಪ್ತ ಸ್ನೇಹಿತರಿಗೆ, ಸಂಗಾತಿಗೆ ಮಾತ್ರ ತಿಳಿಯುವ ಲೋಕ ಇಲ್ಲಿ ಮುಖವಾಡವನ್ನು ಸ್ವಲ್ಪ ಸಡಿಲಗೊಳಿಸುತ್ತೇವೆ.ಸೋಲುಗಳಿಗೆ ಮರುಗುತ್ತೇವೆ, ಸಿಟ್ಟು ಮಾಡಿಕೊಳ್ಳುತ್ತೇವೆ, ಸಣ್ಣಪುಟ್ಟ ಆಸೆಗಳನ್ನು ಹಂಚಿಕೊಳ್ಳುತ್ತೇವೆ. ಬದುಕಿನ ಹೋರಾಟಗಳು ಇಲ್ಲಿ ಅನಾವರಣಗೊಳ್ಳುತ್ತವೆ.ಆದರೂ, ಇಲ್ಲಿಯೂ ಕೂಡ ಸಂಪೂರ್ಣವಾಗಿ ತೆರೆದುಕೊಳ್ಳುವುದಿಲ್ಲ. ಪ್ರೀತಿಪಾತ್ರರು ಎಲ್ಲಿ ಜಡ್ಜ್ ಮಾಡುತ್ತಾರೋ ಎಂಬ ಭಯದಿಂದ ಕೆಲವು ವಿಷಯಗಳನ್ನು ಇಲ್ಲಿಯೂ ಮರೆಮಾಚುತ್ತೇವೆ. ಇದು ಮನೆಯ ಒಳಗಿನ ಅಂಗಳದಂತೆ, ಇಲ್ಲಿ ಕೆಲವು ನಿರ್ಬಂಧಗಳಿದ್ದೇ ಇರುತ್ತವೆ.

ಮೂರನೆಯದು ಅತ್ಯಂತ ಗಾಢವಾದ 'ರಹಸ್ಯ'ಮುಖ. ಈ ಲೋಕದ ಏಕೈಕ ಪ್ರಜೆ ಎಂದರೆ ಅದು ನಾವು ಮಾತ್ರ. ಇಲ್ಲಿ ನಮ್ಮ ಅತಿರೇಕದ ಕಲ್ಪನೆಗಳು, ಯಾರಿಗೂ ಹೇಳಲಾಗದ ಪಾಪಪ್ರಜ್ಞೆಗಳು, ನೋವುಗಳು ಮತ್ತು ಈ ಜಗತ್ತು ಒಪ್ಪದ ಆಸೆಗಳು ಅಡಗಿರುತ್ತವೆ. ನಮ್ಮೊಳಗಿನ ಕತ್ತಲೆ ಮತ್ತು ಬೆಳಕು ಎರಡೂ ಇಲ್ಲಿಯೇ ಇರುವುದು. ಈ ಮುಖವನ್ನು ನಾವು ಕನ್ನಡಿಯಲ್ಲಿ ನಮ್ಮ ಕಣ್ಣುಗಳನ್ನು ದಿಟ್ಟಿಸಿ ನೋಡಿದಾಗ ಮಾತ್ರ ಕಾಣಬಲ್ಲೆವು. ಮನುಷ್ಯನ ನಿಜವಾದ ವ್ಯಕ್ತಿತ್ವ ನಿರ್ಧಾರವಾಗುವುದು ಇಲ್ಲಿಯೇ. ನಾವು ಯಾರೂ ನೋಡದಿದ್ದಾಗ ಹೇಗೆ ವರ್ತಿಸುತ್ತೇವೆಯೋ, ಅದುವೇ ನಮ್ಮ ನಿಜವಾದ ಅಸ್ತಿತ್ವ. ಇಂದಿನ ಆಧುನಿಕ ಬದುಕಿನಲ್ಲಿ ಮನುಷ್ಯ ತನ್ನ 'ಪಬ್ಲಿಕ್' ಮುಖವನ್ನು ವೈಭವೀಕರಿಸುವ ಭರಾಟೆಯಲ್ಲಿ ತನ್ನ 'ಸೀಕ್ರೆಟ್' ಮುಖದ ನೆಮ್ಮದಿಯನ್ನು ಕಳೆದುಕೊಳ್ಳುತ್ತಿದ್ದಾನೆ.

ಬೇರೆಯವರು ಏನಂದುಕೊಳ್ಳುತ್ತಾರೆ ಎಂಬ ಭಯದಲ್ಲಿ ತನ್ನ ಅಂತರಂಗದ ದನಿಯನ್ನು ಹತ್ತಿಕ್ಕುತ್ತಿದ್ದಾನೆ. ನೆಮ್ಮದಿಯ ಬದುಕು ಎಂದರೆ ಈ ಮೂರು ಮುಖಗಳ ನಡುವೆ ಸಮತೋಲನ ಕಾಯ್ದುಕೊಳ್ಳುವುದು. ನಮ್ಮ ಸಾರ್ವಜನಿಕ ಮುಖ ಅತಿಯಾದ ಸುಳ್ಳಿನಿಂದ ಕೂಡಿರಬಾರದು ಮತ್ತು ನಮ್ಮ ರಹಸ್ಯ ಮುಖ ಅತಿಯಾದ ಕೊಳೆಯಿಂದ ಕೂಡಿರಬಾರದು. **ಒಮ್ಮೆ ಕಣ್ಣು ಮುಚ್ಚಿ ಯೋಚಿಸಿ;** ಇಂದು ನೀವು ಜಗತ್ತಿಗೆ ತೋರಿಸಿದ ಮುಖಕ್ಕೂ, ನಿಮ್ಮ ಒಳಮನಸ್ಸಿನ ಭಾವಕ್ಕೂ ಎಷ್ಟು ಅಂತರವಿದೆ ಆ ಅಂತರ ಕಡಿಮೆಯಾದಷ್ಟೂ ನಿಮ್ಮ ಬದುಕು ಹೆಚ್ಚು ಪಾರದರ್ಶಕ, ಸಾರ್ಥಕವಾಗುತ್ತದೆ. ನಿಮ್ಮೊಳಗಿನ ಈ ಮೂರು ಲೋಕಗಳನ್ನು ಅರ್ಥಮಾಡಿಕೊಂಡಾಗ ಮಾತ್ರ, ನೀವು ನಿಮ್ಮನ್ನು ಪೂರ್ಣವಾಗಿ ಪ್ರೀತಿಸಲು ಸಾಧ್ಯ.

• ಉದಯವಾಹಿನಿ, ವಿಶೇಷ



# ನಾನು ಮರವಾಗಿದ್ದರೆ? ಪ್ರಕೃತಿಯ ಹೃದಯದ ಧ್ವನಿ

''ನಾನು ಮರವಾಗಿದ್ದರೆ?'' ಎಂಬ ಕಲ್ಪನೆ ನನ್ನ ಮನಸ್ಸಿನಲ್ಲಿ ಮೂಡಿದಾಗ, ಅದು ಕೇವಲ ಒಂದು ಕನಸಲ್ಲ; ಅದು ಪ್ರಕೃತಿಯೊಂದಿಗಿನ ನನ್ನ ಆತ್ಮೀಯ ಸಂಬಂಧದ ಅಭಿವ್ಯಕ್ತಿ. ಮರಗಳು ಮಾತಾಡುವುದಿಲ್ಲ, ಆದರೆ ಅವುಗಳ ಮೌನದಲ್ಲೇ ಸಾವಿರ ಕಥೆಗಳಿವೆ. ನಾನು ಒಂದು ಮರವಾಗಿದ್ದರೆ, ನನ್ನ ಜೀವನದ ಪ್ರತಿಯೊಂದು ಕ್ಷಣವೂ ಇತರರಿಗಾಗಿ ಸಮರ್ಪಿತವಾಗಿರುತ್ತಿತ್ತು. ನಾನು ಒಂದು ಹಸಿರು ನೆರಳು ನೀಡುವ ದೊಡ್ಡ ಮರವಾಗಿರುತ್ತಿದ್ದೆ. ಬೇಸಿಗೆಯ ಉರಿಯುವ ಬಿಸಿಲಿನಲ್ಲಿ, ನನ್ನ ನೆರಳಿನಲ್ಲಿ ವಿಶ್ರಾಂತಿ ಪಡೆಯುವ ಜನರನ್ನು ನೋಡಿ ನನಗೆ ಅಪಾರ ಸಂತೋಷವಾಗುತ್ತಿತ್ತು. ದಾರಿಹೋಕರು, ಕಾರ್ಮಿಕರು, ವಿದ್ಯಾರ್ಥಿಗಳು ಯಾರೇ ಆಗಿರಲಿ, ನನ್ನ ನೆರಳಿನಲ್ಲಿ ಕುಳಿತು ಕ್ಷಣಕಾಲ ಶಾಂತಿಯನ್ನು ಅನುಭವಿಸಿದರೆ, ಅದು ನನ್ನ ಜೀವನದ ಉದ್ದೇಶವೇ ಆಗಿರುತ್ತಿತ್ತು. ಮಳೆಯ ಕಾಲದಲ್ಲಿ, ನನ್ನ ಎಲೆಗಳ ಮೇಲೆ ಬಿದ್ದ ಮಳೆಯ ಹನಿಗಳು ಸಂಗೀತದಂತೆ ಕೇಳಿಸುತ್ತಿದ್ದವು. ಹನಿಗಳ ಆಟದಲ್ಲಿ ನಾನು ಆನಂದಿಸುತ್ತಿದ್ದೆ. ನನ್ನ ಬೇರುಗಳು ಭೂಮಿಯನ್ನು ಬಲವಾಗಿ ಹಿಡಿದುಕೊಂಡು, ಮಣ್ಣಿನ ಕೊಚ್ಚು ಹೋಗುವುದನ್ನು ತಡೆಯುತ್ತವೆ. ನಾನು ಕೇವಲ ಒಂದು ಮರವಾಗಿರದೇ, ಭೂಮಿಯ ರಕ್ಷಕನಾಗಿರುತ್ತಿದ್ದೆ.






ನಾನು ಮರವಾಗಿದ್ದರೆ, ಪಕ್ಷಿಗಳಿಗೆ ಮನೆ ಆಗುತ್ತಿದ್ದೆ. ಚಿಲಿಪಿಲಿ ಹಾಡುವ ಹಕ್ಕಿಗಳು ನನ್ನ ಕೊಂಬೆಗಳ ಮೇಲೆ ಗೂಡು ಕಟ್ಟಿಕೊಂಡು ತಮ್ಮ ಜೀವನವನ್ನು ನಡೆಸುತ್ತಿದ್ದವು. ಬೆಳಗಿನ ಜಾವ ಅವರ ಕಲರವ ನನ್ನ ದಿನವನ್ನು ಆರಂಭಿಸುತ್ತಿತ್ತು. ಹಕ್ಕಿಗಳ ಸಂತೋಷವೇ ನನ್ನ ಸಂತೋಷವಾಗುತ್ತಿತ್ತು. ನಾನು ಅವರಿಗೆ ಆಶ್ರಯ ನೀಡುವ ಮೂಲಕ ಪ್ರಕೃತಿಯ ಒಂದು ಮಹತ್ವದ ಭಾಗವಾಗಿರುತ್ತಿದ್ದೆ. ಮನುಷ್ಯರಿಗೆ ನಾನು ಉಸಿರಾಗಿರುತ್ತಿದ್ದೆ. ನಾನು ನೀಡುವ ಆಮ್ಲಜನಕ ಅವರ ಬದುಕಿನ ಮೂಲವಾಗಿರುತ್ತದೆ. ಅವರಿಂದ ಹೊರಬರುವ ಕಾರ್ಬನ್ ಡೈಆಕ್ಸೈಡ್ ಅನ್ನು ನಾನು ತೆಗೆದುಕೊಂಡು, ಮತ್ತೆ ಅವರಿಗೆ ಜೀವ ನೀಡುತ್ತಿದ್ದೆ. ಈ ನಿಸ್ವಾರ್ಥ ಸೇವೆಯಲ್ಲೇ ನನ್ನ ಜೀವನದ ಅರ್ಥ ಇರುತ್ತಿತ್ತು. ಪ್ರತಿಫಲದ ನಿರೀಕ್ಷೆಯಿಲ್ಲದೆ ನೀಡುವುದೇ ನನ್ನ ಧರ್ಮವಾಗಿರುತ್ತಿತ್ತು.

ಆದರೆ, ನಾನು ಮರವಾಗಿದ್ದರೆ, ನನಗೆ ನೋವುಗಳೂ ಇರುತ್ತಿದ್ದವು. ಕೆಲವರು ನನ್ನ ಕೊಂಬೆಗಳನ್ನು ಕತ್ತರಿಸುತ್ತಾರೆ, ಕೆಲವರು ನನ್ನನ್ನು ಸಂಪೂರ್ಣವಾಗಿ ಕಡಿದು ಹಾಕುತ್ತಾರೆ. ನನ್ನ ಅಳಲು ಯಾರಿಗೂ ಕೇಳಿಸದು. ನಾನು ಮಾತಾಡಲಾರೆ, ಕಣ್ಣೀರಿಡಲಾರೆ. ಆದರೆ ನನ್ನ ಹೃದಯದಲ್ಲಿ ನೋವು ತುಂಬಿರುತ್ತಿತ್ತು. ''ಪ್ರಕೃತಿಯನ್ನು ಉಳಿಸಿ'' ಎಂಬ ನನ್ನ ಮೌನದ ಕೂಗು ಮಾನವರಿಗೆ ಕೇಳಿಸಲಿ ಎಂದು ನಾನು ಆಶಿಸುತ್ತಿದ್ದೆ. ನಾನು ಮರವಾಗಿದ್ದರೆ, ಮಕ್ಕಳಿಗೆ ಪ್ರೇರಣೆಯಾಗುತ್ತಿದ್ದೆ. ಅವರು ನನ್ನ ನೆರಳಿನಲ್ಲಿ ಆಟವಾಡುತ್ತಾ, ನನ್ನ ಬಗ್ಗೆ ತಿಳಿದುಕೊಳ್ಳುತ್ತಿದ್ದರು.

''ಮರಗಳನ್ನು ಉಳಿಸಬೇಕು'' ಎಂಬ ಅರಿವು ಅವರಲ್ಲಿ ಮೂಡುತ್ತಿದ್ದರೆ, ಅದು ನನ್ನ ಜೀವನದ ದೊಡ್ಡ ಸಾಧನೆ ಆಗುತ್ತಿತ್ತು.

ಸಂಜೆ ವೇಳೆಗೆ, ಸೂರ್ಯಾಸ್ತದ ಹೊಳಪಿನಲ್ಲಿ ನಾನು ಇನ್ನಷ್ಟು ಸುಂದರವಾಗಿ ಕಾಣುತ್ತಿದ್ದೆ. ಗಾಳಿ ಬೀಸಿದಾಗ ನನ್ನ ಎಲೆಗಳು ತೂಗುತ್ತಾ ಒಂದು ರಾಗವನ್ನು ಮೂಡಿಸುತ್ತಿದ್ದವು. ಆ ರಾಗದಲ್ಲಿ ಪ್ರಕೃತಿಯ ಸೌಂದರ್ಯ ಪ್ರತಿಫಲಿಸುತ್ತಿತ್ತು. ನಾನು ಮಾತಾಡದೆ ಇದ್ದರೂ, ನನ್ನ ಅಸ್ತಿತ್ವವೇ ಒಂದು ಸಂದೇಶವಾಗಿರುತ್ತಿತ್ತು?''ನೀವು ಪ್ರಕೃತಿಯನ್ನು ಕಾಪಾಡಿದರೆ, ಪ್ರಕೃತಿ ನಿಮ್ಮನ್ನು ಕಾಪಾಡುತ್ತದೆ.'' ಕೊನೆಯಲ್ಲಿ, ''ನಾನು ಮರವಾಗಿದ್ದರೆ?'' ಎಂಬ ಕಲ್ಪನೆ ನಮಗೆ ಒಂದು ಪಾಠವನ್ನು ಕಲಿಸುತ್ತದೆ. ಮರಗಳು ನಿಸ್ವಾರ್ಥವಾಗಿ ನೀಡುತ್ತವೆ, ಸಹಿಸುತ್ತವೆ, ಬದುಕನ್ನು ಉಳಿಸುತ್ತವೆ. ನಾವು ಕೂಡ ಅವರಂತೆ ಬದುಕಲು ಪ್ರಯತ್ನಿಸಿದರೆ, ಈ ಜಗತ್ತು ಇನ್ನಷ್ಟು ಸುಂದರವಾಗುತ್ತದೆ. ಹೀಗಾಗಿ, ನಾನು ಮರವಾಗಿದ್ದರೆ? ನಾನು ಕೇವಲ ಒಂದು ಸಸ್ಯವಲ್ಲ, ಜೀವಗಳಿಗೆ ಆಶ್ರಯ ನೀಡುವ, ಪ್ರೀತಿಯನ್ನು ಹಂಚುವ, ಪ್ರಕೃತಿಯ ಹೃದಯದ ಧ್ವನಿಯಾಗಿರುತ್ತಿದ್ದೆ.



ವಿಶ್ವಾಸ್.ಡಿ.ಗೌಡ

# ಬೇಸಿಗೆಗೆ ಹಾಲು ಒಡೆಯುವುದನ್ನು ಹೇಗೆ ತಡೆಯುವುದು?

ಬೇಸಿಗೆ ಕಾಲದಲ್ಲಿ ಆಹಾರವು ಬೇಗನೆ ಹಾಳಾಗುವುದು ಒಂದು ದೊಡ್ಡ ಸವಾಲು. ಇದಲ್ಲದೆ, ಹಾಲನ್ನು ಎಚ್ಚರಿಕೆಯಿಂದ ಸಂಗ್ರಹಿಸದಿದ್ದರೆ ಅದು ಹಾಳಾಗುತ್ತದೆ. ತಾಪಮಾನ ಹೆಚ್ಚಾದಂತೆ, ಹಾಲು ಕೆಡುವ ಮತ್ತು ಮೊಸರಾಗುವ ಅಪಾಯ ಹೆಚ್ಚಾಗುತ್ತದೆ. ವಿಜ್ಞಾನದ ಪ್ರಕಾರ, ಶಾಖವು ಬ್ಯಾಕ್ಟೀರಿಯಾದ ಬೆಳವಣಿಗೆಯನ್ನು ವೇಗಗೊಳಿಸುತ್ತದೆ. ಕೆಲವು ಪ್ರಮುಖ ಅಂಶಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳುವ ಮೂಲಕ, ನೀವು ಹಾಲು ಮೊಸರಾಗುವುದನ್ನು ತಡೆಯಬಹುದು. ಹಾಲು ಕೆಡುವುದನ್ನು ತಡೆಯಲು ಈ ಸಾಂಪ್ರದಾಯಿಕ ವಿಧಾನವನ್ನು ಬಳಸಬಹುದು.




**ಹಾಲನ್ನು ಸರಿಯಾಗಿ ಮತ್ತು ಸರಿಯಾದ ಸಮಯದಲ್ಲಿ ಕುದಿಸಿ:** ನೀವು ಹಾಲನ್ನು ಮನೆಗೆ ತಂದ ತಕ್ಷಣ ಕುದಿಸಬೇಕು. ಕುದಿಸುವುದರಿಂದ ಸಾಗಣೆ ಮತ್ತು ನಿರ್ವಹಣೆ ಪ್ರಕ್ರಿಯೆಯಲ್ಲಿ ವೃದ್ಧಿಯಾಗಬಹುದಾದ ಬ್ಯಾಕ್ಟೀರಿಯಾಗಳು ಸಾಯುತ್ತವೆ. ಬೇಸಿಗೆಯಲ್ಲಿ, ಹಾಲನ್ನು ದಿನಕ್ಕೆ ಎರಡು ಬಾರಿ ಅಂದರೆ ಬೆಳಿಗ್ಗೆ ಒಮ್ಮೆ ಮತ್ತು ಸಂಜೆ ಒಮ್ಮೆ ಕುದಿಸುವುದು ಉತ್ತಮ. ಹೆಚ್ಚುವರಿಯಾಗಿ, ಹಾಲು ತಣ್ಣಗಾದ ತಕ್ಷಣ ರೆಫ್ರಿಜರೇಟರ್‌ನಲ್ಲಿ ಇಡುವುದನ್ನು ಖಚಿತಪಡಿಸಿಕೊಳ್ಳಿ.

**ರೆಫ್ರಿಜರೇಟರ್‌ನಲ್ಲಿ ಸಂಗ್ರಹಿಸಿ:** ಹಾಲು ಕೋಣೆಯ ಉಷ್ಣಾಂಶಕ್ಕೆ ತಣ್ಣಗಾದ ನಂತರ ರೆಫ್ರಿಜರೇಟರ್‌ನಲ್ಲಿ ಇಡುವುದು ಅತ್ಯಗತ್ಯ ಈ ಬಗ್ಗೆ ಅಧ್ಯಯನದಲ್ಲೂ ತಿಳಿಸಲಾಗಿದೆ. ಹಾಲನ್ನು ದೀರ್ಘಕಾಲದವರೆಗೆ ಬೆಚ್ಚಗಿನ ತಾಪಮಾನದಲ್ಲಿ ಬಿಡುವುದರಿಂದ ಅದು ಬೇಗನೆ ಹೆಪ್ಪುಗಟ್ಟಲು ಕಾರಣವಾಗಬಹುದು. ಬೇಸಿಗೆಯಲ್ಲಿ, ರೆಫ್ರಿಜರೇಟರ್ ಬಾಗಿಲಿನಲ್ಲಿ ಹಾಲನ್ನು ಸಂಗ್ರಹಿಸುವ ಬದಲು, ಅದನ್ನು ರೆಫ್ರಿಜರೇಟರ್‌ನ ಅತ್ಯಂತ ತಂಪಾದ ವಿಭಾಗದಲ್ಲಿ ಇಡಬೇಕು, ಏಕೆಂದರೆ ತಾಪಮಾನವು ಬಾಗಿಲಿನ ಪ್ರದೇಶದಲ್ಲಿ ಏರಿಳಿತಗೊಳ್ಳುತ್ತದೆ.

**ರೆಫ್ರಿಜರೇಟರ್‌ನಿಂದ ಪದೇ ಪದೇ ತೆಗೆಯುವುದನ್ನು ತಪ್ಪಿಸಿ:** ಹಾಲನ್ನು ರೆಫ್ರಿಜರೇಟರ್ ಒಳಗೆ ಮತ್ತು ಹೊರಗೆ ಇಡುವುದು ಅದರ ತಾಪಮಾನದಲ್ಲಿ ತ್ವರಿತ ಏರಿಳಿತಗಳಿಗೆ ಕಾರಣವಾಗುತ್ತದೆ, ಇದರಿಂದಾಗಿ ಬ್ಯಾಕ್ಟೀರಿಯಾದ ಬೆಳವಣಿಗೆಯ ಅಪಾಯ ಹೆಚ್ಚಾಗುತ್ತದೆ. ಹಾಲನ್ನು ಸಣ್ಣ ಭಾಗಗಳಲ್ಲಿ ಸಂಗ್ರಹಿಸಿ ಇದರಿಂದ ನೀವು ಅಗತ್ಯವಿರುವಷ್ಟು ಮಾತ್ರ ಹೊರತೆಗೆಯಬಹುದು. ಹೆಚ್ಚುವರಿಯಾಗಿ, ಹಾಲು ಕುದಿಸುವಾಗ, ಅದನ್ನು ಸ್ಥಿರವಾದ ತಾಪಮಾನದಲ್ಲಿ ಕುದಿಯಲು ಬಿಡಿ.

# ರಾಮಾಯಣ



ಅಂಗದಾದಿಗಳು ಪ್ರಾಯೋಪವೇಶಕ್ಕೆ ಕುಳಿತದ್ದು

• ಹಿಂದಿನ ಸಂಚಿಕೆಯಿಂದ 121ನೆಯ ಅಧ್ಯಾಯ


ಶ್ರೀರಾಮನು ವನವಾಸಕ್ಕೆ ಬಂದ ಕಾರಣ, ದಶರಥರಾಜನ ಮರಣ, ಜನಸ್ಥಾನದಲ್ಲಿ ಶ್ರೀರಾಮನು ಹದಿನಾಲ್ಕು ಸಾವಿರ ಮಂದಿ ರಾಕ್ಷಸರನ್ನು ಸಂಹರಿಸಿದ ವೃತ್ತಾಂತ, ಸೀತಾಪಹರಣ ವೃತ್ತಾಂತ, ಜಟಾಯುವಿನ ಮರಣದ ಸುದ್ದಿ, ವಾಲಿವಧೆ-ಮೊದಲಾದವುಗಳನ್ನು ಕುರಿತು ಮಾತನಾಡುತ್ತಿದ್ದರು. ಶ್ರೀರಾಮನ ಉಗ್ರವಾದ ಕೋಪಪರಾಕ್ರಮಗಳನ್ನು ಸ್ಮರಿಸಿಕೊಂಡ ಕೂಡಲೇ ಆ ಕಪಿಗಳಿಗೆ ಬಹಳ ಭಯವಾಯಿತು. ಹೀಗೆ ಆ ಕಪಿಗಳ ಮಾತು, ಕೂಗು, ಹಾಹಾಕಾರಗಳಿಂದ ಪರ್ವತದ ತಪ್ಪಲೆಲ್ಲವೂ ಪ್ರತಿಧ್ವನಿಗಳಿಂದ ತುಂಬಿಹೋಯಿತು. ಗುಡುಗುವ ಮೋಡಗಳಿಂದ ತುಂಬಿದ ಆಕಾಶದಂತೆ ಕೋಲಾಹಲ ಧ್ವನಿಯು ಎಲ್ಲೆಲ್ಲಿಯೂ ಮೊಳಗಿತು.

## ಸಂಪಾತಿಯು ಜಟಾಯುವಿನ ವೃತ್ತಾಂತವನ್ನು ಕೇಳಿದ್ದು

ಈ ರೀತಿ ಅಂಗದನೇ ಮೊದಲಾದ ಕಪಿನಾಯಕರು ಸಮುದ್ರತೀರದಲ್ಲಿದ್ದ ವಿಂಧ್ಯಪರ್ವತವ ತಪ್ಪಲಲ್ಲಿ ಪ್ರಾಯೋಪವೇಶದಿಂದ ಶರೀರತ್ಯಾಗವನ್ನು ಮಾಡಬೇಕೆಂದು ಕುಳಿತಿದ್ದ ಸಮಯದಲ್ಲಿ, ಜಟಾಯುವಿನ ಅಣ್ಣನಾಗಿ ಮಹಾಪರಾಕ್ರಮಿಯಾಗಿ ಸ್ಥಿರಜೀವಿಯಾದ ಸಂಪಾತಿ ಎಂಬ ಗೃಧ್ರರಾಜನು ಆ ಪರ್ವತದ ಕೋಡುಗಲ್ಲಿನಿಂದಿಳಿದು ಆ ಕಪಿನಾಯಕರು ಪ್ರಾಯೋಪವೇಶಕ್ಕೆ ಕುಳಿತಿದ್ದ ಸ್ಥಳಕ್ಕೆ ಬಂದನು. ಆತನು ಕಪಿಗಳನ್ನು ನೋಡಿ ಹರ್ಷದಿಂದ ಗಟ್ಟಿಯಾಗಿ ಹೇಳಿಕೊಂಡನು ಬ್ರಹ್ಮದೇವನು ತಾನು ಸೃಷ್ಟಿಸಿದ ಪ್ರಾಣಿಗಳಿಗೆ ಕಲ್ಪಿಸಿದ ಆಹಾರವನ್ನು ತಾನೇ ಕೊಡಿಸಿ ಕೊಡುವನು. ಆದ್ದರಿಂದ ಈ ಕಪಿಗಳು ನನ್ನ ಭಕ್ಷಣಕ್ಕೆ ಒದಗಿ ಬಂದರು. ನನಗೆ ಬಹುಕಾಲದಿಂದ ಆಹಾರವಿಲ್ಲದಿತ್ತು. ಈಗ ಈ ಕಪಿಗಳ ಸಾಲಿನಲ್ಲಿ ಒಬ್ಬೊಬ್ಬರನ್ನಾಗಿ ತಿನ್ನುತ್ತ ಹೋಗುತ್ತೇನೆ. ಮನಸ್ಸಿನಲ್ಲಿ ಪಕ್ಷಿರಾಜನಾದ ಸಂಪಾತಿಯ ಆ ಮಾತನ್ನು ಕೇಳಿ ಅಂಗದಕುಮಾರನು ಭಯಪಟ್ಟು ಹನುಮಂತನನ್ನು ಕುರಿತು ಹೀಗೆಂದನು ಹನುಮಂತ, ಸಾಕ್ಷಾತ್ ಯಮನೇ ಈ ಹದ್ದಿನ ರೂಪದಿಂದ ನಮ್ಮೆಲ್ಲರನ್ನೂ ನಾಶಮಾಡಬೇಕೆಂದು ಈ ಸ್ಥಳಕ್ಕೆ ಬಂದಿದ್ದಾನೆ! ಅಕಟಕಟಾ! ಮರಣವಂತೂ ತಪ್ಪದು. ನಾವು ಸುಗ್ರೀವನ ಕಾರ್ಯವನ್ನೂ ಸಲ್ಲಿಸಲಿಲ್ಲ ಶ್ರೀರಾಮನ ಕಾರ್ಯವನ್ನೂ ಮಾಡಲಿಲ್ಲ. ಇಷ್ಟು ಮಂದಿ ಕಪಿನಾಯಕರಿಗೂ ಒಂದೇ ಬಾರಿ ಮೃತ್ಯುವು ಬಂದಿತು. ಸೀತೆಗೆ ಉಪಕಾರವನ್ನು ಮಾಡುವುದಕ್ಕಾಗಿ ಗೃಧ್ರರಾಜನಾದ ಜಟಾಯುವು ದೇಹವನ್ನು ಬಿಟು ಕೃತಾರ್ಥನಾದನು. ನಮ್ಮಂತೆ ಶ್ರೀರಾಮನಿಗೋಸ್ಕರ ಪ್ರಾಣವನ್ನು ಬಿಟ್ಟು ಧನ್ಯತೆಯನ್ನು ಪಡೆಯುತ್ತವೆ. ಜಟಾಯುವು ರಾವಣನೊಡನೆ ಯುದ್ಧ ಮಾಡಿ ಶ್ರೀರಾಮನ ಪ್ರೀತ್ಯರ್ಥವಾಗಿ ತನ್ನ ದೇಹವನ್ನರ್ಪಿಸಿದನು. ನಾವೂ ಶ್ರೀರಾಮನ ಕಾರ್ಯನಿಮಿತ್ತವಾಗಿ ಹೊರಬಂದು ನಮ್ಮ ಕೈಲಾದಷ್ಟೂ ವನಾಂತರಗಳಲ್ಲಿ ಸಂಚರಿಸಿ ಸೀತಾದೇವಿಯನ್ನು ಕಾಣದೆ ಹೋದೆವು, ಜಟಾಯುವು ರಣರಂಗದಲ್ಲಿ ರಾವಣನಿಂದ ಗಾಯಪಡೆದು ಶರೀರವನ್ನು ಬಿಟ್ಟು ಸುಗ್ರೀವನ ಭಯವಿಲ್ಲದೆ ಸದ್ಗತಿಯನ್ನೋದಿದನು. ನಾವು ಬಂದ ಕಾರ್ಯವು ಕೈಗೂಡಲಿಲ್ಲ, ಸುಗ್ರೀವನ ಭಯವು ತಪ್ಪಲಿಲ್ಲ. ಶ್ರೀರಾಮನ ವನವಾಸದಿಂದ ದಶರಥರಾಯನು ಸ್ವರ್ಗಸ್ಥನಾದನು. ರಾವಣನು ಸೀತಾದೇವಿಯನ್ನಪಹರಿಸಿಕೊಂಡು ಹೋದನು. ಸೀತಾದೇವಿಯ ನಿಮಿತ್ತವಾಗಿ ಜಟಾಯುವು ಸ್ವರ್ಗಸ್ಥನಾದನು. ಹೀಗಿರುವಲ್ಲಿ ಶ್ರೀರಾಮನ ಕಾರ್ಯನಿಮಿತ್ತವಾಗಿ ಬಂದ ನಮ್ಮಂಥ ಕಪಿನಾಯಕರಿಗೆ ಜೀವದ ಮೇಲಣ ಆಸೆಯೇನು ದಶರಥರಾಯನು ಕೈಕೇಯಾ ದೇವಿಗೆ ವರವನ್ನು ಕೊಟ್ಟಿದ್ದರಿಂದ ಶ್ರೀರಾಮ ಲಕ್ಷ್ಮಣ ಸೀತಾದೇವಿಯರಿಗೆ ವನವಾಸವಾಯಿತು ಶ್ರೀರಾಮನ ಕೋಪದಿಂದ ಅನೇಕ ರಾಕ್ಷಸರೂ ನಾಶವಾದರು ಎಂದು ಹಂಬಲಿಸುತ್ತ ನುಡಿದನು.


ಮುಂದುವರಿಯುವುದು...

# ನಿಮ್ಮ ಹಲ್ಲುಗಳ ರಕ್ಷಣೆಗೆ ಟಿಪ್ಸ್



ಆರೋಗ್ಯಕರ ನಗು ಎನ್ನುವುದು ಕೇವಲ ಬಾಹ್ಯ ಸೌಂದರ್ಯಕ್ಕೆ ಸೀಮಿತವಲ್ಲ. ಅದು ನಮ್ಮ ಒಟ್ಟಾರೆ ಯೋಗಕ್ಷೇಮ, ಆತ್ಮವಿಶ್ವಾಸ ಮತ್ತು ಜೀವನದ ಗುಣಮಟ್ಟದ ಪ್ರತಿಬಿಂಬವಾಗಿದೆ. ಇಂದು ದಂತ ವೈದ್ಯಕೀಯವು ಸಾಂಪ್ರದಾಯಿಕ 'ಡ್ರಿಲ್-ಅಂಡ್-ಫಿಲ್' ವಿಧಾನಕ್ಕಿಂತ ಬಹಳ ಮುಂದೆ ಸಾಗಿದೆ. ಆಧುನಿಕ ತಂತ್ರಜ್ಞಾನಗಳು ಮತ್ತು ಸುಧಾರಿತ ವಿಧಾನಗಳು, ಚಿಕಿತ್ಸೆಗಳನ್ನು ಹಿಂದಿನ ಚಿಕಿತ್ಸಾ ವಿಧಾನಗಳಿಗಿಂತ ಹೆಚ್ಚು ಆರಾಮದಾಯಕ, ನಿಖರ ಮತ್ತು ಆಕರ್ಷಕವಾಗಿಸುತ್ತಿವೆ.

**ರೂಟ್ ಕೆನಾಲ್ ಚಿಕಿತ್ಸೆಯ ಮೂಲಕ ಹಲ್ಲುಗಳ ರಕ್ಷಣೆ:** ಅನೇಕರಿಗೆ 'ರೂಟ್ ಕೆನಾಲ್' ಎನ್ನುವ ಪದವೇ ಭಯ ಹುಟ್ಟಿಸುತ್ತದೆ. ಆದರೆ ಆಧುನಿಕ ರೂಟ್ ಕೆನಾಲ್ ಚಿಕಿತ್ಸೆಯು ಹುಳುಕು ಹಲ್ಲು, ಸೋಂಕಿನಿಂದ ಹಾನಿಗೊಳಗಾದ ಹಲ್ಲನ್ನು ಉಳಿಸಲು ಬಳಸುವ ಅತ್ಯಂತ ಪರಿಣಾಮಕಾರಿ ವಿಧಾನವಾಗಿದೆ. ಸುಧಾರಿತ ಉಪಕರಣಗಳು, ಸುಧಾರಿತ ಇಮೇಜಿಂಗ್, ಉತ್ತಮ ಅರಿವಳಿಕೆ (ಅನಸ್ತೇಶಿಯಾ) ವಿಧಾನಗಳು, ರೂಟ್ ಕೆನಾಲ್ ಚಿಕಿತ್ಸೆಯನ್ನು ಈಗ ಹಿಂದಿನ ಕಾಲಕ್ಕಿಂತ ಹೆಚ್ಚು ಆರಾಮದಾಯಕ ಮತ್ತು ದಕ್ಷವಾಗಿಸಿವೆ. ಹಲ್ಲನ್ನು ಕೀಳುವ ಬದಲು, ದಂತವೈದ್ಯರು ಒಳಗಿನ ಕಾಲುವೆಯನ್ನು ಅಂದರೆ ರೂಟ್ ಅನ್ನು ಎಚ್ಚರಿಕೆಯಿಂದ ಸ್ವಚ್ಛಗೊಳಿಸಿ, ಸೋಂಕುರಹಿತಗೊಳಿಸಿ, ನಂತರ ಅದನ್ನು ಸೀಲ್ ಮಾಡುತ್ತಾರೆ ಮತ್ತು ಕ್ರೌನ್ (ಹೊರಕವಚ) ಮೂಲಕ ಹಲ್ಲನ್ನು ಪುನಃರಚಿಸುತ್ತಾರೆ. ಇದರಿಂದಾಗಿ ಹಲ್ಲು ನೈಸರ್ಗಿಕವಾಗಿ ಕಾಣಿಸುವುದಲ್ಲದೆ, ಸಂಪೂರ್ಣವಾಗಿ ಮೊದಲಿನಂತೆ ಕಾರ್ಯನಿರ್ವಹಿಸುತ್ತದೆ ಮತ್ತು ಹಲವು ವರ್ಷಗಳ ಕಾಲ ಬಾಳಿಕೆ ಬರುತ್ತದೆ.



**ದಂತ ಗಾಯಗಳ ನಿರ್ವಹಣೆ:** ಅಪಘಾತಗಳಾದಾಗ, ಕ್ರೀಡಾ ಸಮಯದಲ್ಲಿ ಬಿದ್ದಾಗ ಅಥವಾ ಆಕಸ್ಮಿಕವಾಗಿ ಬಿದ್ದಾಗ ಹಲ್ಲು ಉದುರಬಹುದು ಅಥವಾ ಮುರಿಯಬಹುದು. ತಕ್ಷಣದ ಕ್ರಮ ಮತ್ತು ವೃತ್ತಿಪರ ಆರೈಕೆಯು ಹಲ್ಲನ್ನು ಉಳಿಸಲು ಮತ್ತು ಅದರ ಕಾರ್ಯವನ್ನು ಸರಿ ಮಾಡಲು ಸಹಾಯ ಮಾಡುತ್ತದೆ.

ಆಧುನಿಕ ದಂತವೈದ್ಯಕೀಯವು ಇಂತಹ ಗಾಯಗಳನ್ನು ನಿರ್ವಹಿಸಲು ಹಲ್ಲನ್ನು ಮತ್ತೆ ಜೋಡಿಸುವುದು, ಸ್ಪ್ಲಿಂಟಿಂಗ್ ಮತ್ತು ಹಾನಿಗೊಳಗಾದ ಅಂಗಾಂಶಗಳ ಗುಣಪಡಿಸುವಿಕೆಯನ್ನು ಉತ್ತೇಜಿಸುವ ಪುನರ್ ಉತ್ಪಾದಕ ವಿಧಾನಗಳನ್ನು ಒಳಗೊಂಡಂತೆ ವಿಶೇಷ ತಂತ್ರಗಳನ್ನು ಬಳಸುತ್ತದೆ. ಬಿದ್ದ ಹಲ್ಲನ್ನು ಹೇಗೆ ಸಂಗ್ರಹಿಸಬೇಕು ಮತ್ತು ಕಾಪಾಡಬೇಕು ಎನ್ನುವ ಸಾರ್ವಜನಿಕ ಜಾಗೃತಿಯು ಅತ್ಯಗತ್ಯ. ಇದರಿಂದಾಗಿ ತಕ್ಷಣದ ದಂತ ಆರೈಕೆಯಿಂದ ಹಲ್ಲನ್ನು ಉಳಿಸಿಕೊಳ್ಳುವ ಸಾಧ್ಯತೆಗಳಿವೆ.

**ಸೌಂದರ್ಯವರ್ಧಕ ದಂತ ವೈದ್ಯಕೀಯ:** ನಮ್ಮ ಸೌಂದರ್ಯ, ಆತ್ಮವಿಶ್ವಾಸವನ್ನು ಹೆಚ್ಚಿಸುವಲ್ಲಿ ನಗು ಪ್ರಮುಖ ಪಾತ್ರ ವಹಿಸುತ್ತದೆ.ಸೌಂದರ್ಯ ವರ್ಧಕ ದಂತವೈದ್ಯಕೀಯವು ಹಲ್ಲುಗಳ ಆರೋಗ್ಯ, ಕಾರ್ಯವನ್ನು ಕಾಪಾಡಿಕೊಳ್ಳುವ ಜೊತೆಗೆ ಅವುಗಳ ನೋಟವನ್ನು ಸುಧಾರಿಸುವತ್ತ ಗಮನಹರಿಸುತ್ತದೆ.

ಹಲ್ಲು ಬೆಳ್ಳಗಾಗಿಸುವುದು, ವೆನಿಯರ್ಸ್, ಸ್ಮೈಲ್ ಡಿಸೈನ್ ಮತ್ತು ಹಲ್ಲನ್ನು ಮರು ರೂಪಿಸುವುದು ಮುಂತಾದವುಗಳು ಜನಪ್ರಿಯ ಚಿಕಿತ್ಸೆಗಳಾಗಿವೆ. ಸರಿಯಾದ ಯೋಜನೆ ಮತ್ತು ಕಲಾತ್ಮಕ ನಿಖರತೆಯೊಂದಿಗೆ, ದಂತವೈದ್ಯರು ಮುಖ ಲಕ್ಷಣದ ಅಗತ್ಯಕ್ಕೆ ತಕ್ಕಂತೆ ಆತ್ಮವಿಶ್ವಾಸವನ್ನು ಹೆಚ್ಚಿಸುವ ನೈಸರ್ಗಿಕವಾದ ನೋಟವನ್ನು ಸೃಷ್ಟಿಸಬಲ್ಲರು.

**ಮಿನಿಮಲಿ ಇನ್ವೇಸಿವ್ ಡೆಂಟಿಸ್ಟ್ರಿ:** ಮಿನಿಮಲಿ ಇನ್ವೇಸಿವ್ ಡೆಂಟಿಸ್ಟ್ರಿ ಎಂದರೆ ಹಲ್ಲು ಸಂರಕ್ಷಕ ದಂತ ಚಿಕಿತ್ಸೆಯಾಗಿದ್ದು, ಈ ಆಧುನಿಕ ದಂತವೈದ್ಯಕೀಯದ ಪ್ರಮುಖ ತತ್ವವೆಂದರೆ ಸಾಧ್ಯವಾದಷ್ಟು ನೈಸರ್ಗಿಕ ಹಲ್ಲಿನ ರಚನೆಯನ್ನು ಹಾಗೆಯೇ ಸಂರಕ್ಷಿಸುವುದು. ಸಮಸ್ಯೆಯಾಗದಂತೆ ತಡೆಗಟ್ಟುವುದು, ದಂತ ಕುಳಿಗಳನ್ನು ಆರಂಭದಲ್ಲೇ ಪತ್ತೆ ಹಚ್ಚುವುದು, ಬಾಂಡಿಂಗ್ ಮಾಡಲು ಬೇಕಾಗುವ ಉತ್ತಮ ವಸ್ತುಗಳ ಬಳಕೆ, ರಿಮಿನರಲೈಸೇಶನ್ ಮತ್ತು ಸಂಪ್ರದಾಯಬದ್ಧ ತಂತ್ರಗಳು ದಂತವೈದ್ಯರಿಗೆ ಕನಿಷ್ಠ ತಯಾರಿಯೊಂದಿಗೆ ಹಲ್ಲುಗಳಿಗೆ ಚಿಕಿತ್ಸೆ ನೀಡಲು ಅವಕಾಶ ಮಾಡಿಕೊಡುತ್ತವೆ. ನ್ಯಾನೋ ಕಾಂಪೋಸಿಟ್‌ಗಳಂತಹ ಅಂಟಿಕೊಳ್ಳುವ ವಸ್ತುಗಳನ್ನು ಬಳಸುವುದು ಹಲ್ಲುಗಳನ್ನು ಬಲಪಡಿಸುವುದಲ್ಲದೆ, ಚಿಕಿತ್ಸೆಯ ಸಮಯವನ್ನು ಕಡಿಮೆ ಮಾಡುತ್ತದೆ ಮತ್ತು ದೀರ್ಘಕಾಲದ ಫಲಿತಾಂಶಗಳನ್ನು ಸುಧಾರಿಸುತ್ತದೆ.

**ಡಿಜಿಟಲ್ ದಂತವೈದ್ಯಕೀಯ:** ತಂತ್ರಜ್ಞಾನದೊಂದಿಗೆ ನಿಖರತೆ ಡಿಜಿಟಲ್ ದಂತವೈದ್ಯಕೀಯದ ಮೂಲಕ ತಂತ್ರಜ್ಞಾನವು ದಂತ ಚಿಕಿತ್ಸಾಲಯಗಳನ್ನು ಬದಲಾಯಿಸುತ್ತಿದೆ. 3ಆ ಇಮೇಜಿಂಗ್, ಇಂಟ್ರಾಓರಲ್ ಸ್ಕ್ಯಾನರ್‌ಗಳು ಮತ್ತು ಕಂಪ್ಯೂಟರ್-ನಿರ್ದೇಶಿತ ಚಿಕಿತ್ಸಾ ಯೋಜನೆಗಳಂತಹ ಸಾಧನಗಳು ನಿಖರತೆ ಮತ್ತು ದಕ್ಷತೆಯನ್ನು ಗಮನಾರ್ಹವಾಗಿ ಸುಧಾರಿಸಿವೆ.



ಡಿಜಿಟಲ್ ಇಂಪ್ರೆಷನ್‌ಗಳು ಸಾಂಪ್ರದಾಯಿಕ ಅಚ್ಚುಗಳ ಸಮಸ್ಯೆಗಳನ್ನು ನಿವಾರಿಸುತ್ತವೆ ಮತ್ತು ಕಂಪ್ಯೂಟರ್-ಸಹಾಯದಿಂದ ತಯಾರಿಸಲಾದ ವಿನ್ಯಾಸಗಳು ಮತ್ತು ಉತ್ಪಾದನೆಗಳಿಂದ ಅತ್ಯಂತ ನಿಖರವಾಗಿ ಕ್ರೌನ್‌ಗಳು ಮತ್ತು ಮರುಸ್ಥಾಪನೆಯನ್ನು ಮಾಡಬಹುದು. ಅನೇಕ ಸಂದರ್ಭಗಳಲ್ಲಿ, ಇದರಿಂದಾಗಿ ರೋಗಿಯ ಚಿಕಿತ್ಸೆಯು ವೇಗವಾಗಿ ಮತ್ತು ಕಡಿಮೆ ಅವಧಿಯಲ್ಲಿ ಮುಗಿಯುತ್ತದೆ.

**ಲೇಸರ್ ದಂತವೈದ್ಯಕೀಯ:** ಸೌಮ್ಯ ಮತ್ತು ಸುಧಾರಿತ ಆರೈಕೆ ಡೆಂಟಲ್ ಲೇಸರ್ ಚಿಕಿತ್ಸಾ ವಿಧಾನವು ಹೆಚ್ಚು ಆರಾಮದಾಯಕ ಮತ್ತು ಕಡಿಮೆ ನೋವಿನಿಂದ ಕೂಡಿರುತ್ತದೆ. ಲೇಸರ್‌ಗಳನ್ನು ಒಸಡುಗಳ ಚಿಕಿತ್ಸೆ, ಕುಳಿ ಪತ್ತೆ, ಮೃದು ಅಂಗಾಂಶಗಳ ಪ್ರಕ್ರಿಯೆಗಳು ಮತ್ತು ಹಲ್ಲು ಬೆಳ್ಳಗಾಗಿಸಲು ಸಹ ಬಳಸಬಹುದು. ಲೇಸರ್ ತಂತ್ರಜ್ಞಾನವು ಅತ್ಯಂತ ನಿಖರವಾಗಿರುವುದರಿಂದ, ಇದು ರಕ್ತಸ್ರಾವ, ಊತ ಮತ್ತು ಚೇತರಿಕೆಯ ಸಮಯವನ್ನು ಕಡಿಮೆ ಮಾಡುತ್ತದೆ. ದಂತ ಚಿಕಿತ್ಸೆಗಳ ಬಗ್ಗೆ ಆತಂಕವಿರುವವರಿಗೆ ಲೇಸರ್ ಚಿಕಿತ್ಸೆಯು ಹೆಚ್ಚು ಶಾಂತ ಮತ್ತು ಸೌಮ್ಯವಾದ ಆಯ್ಕೆಯಾಗಿದೆ.



**ಜೀವನಪರ್ಯಂತ ಸುಂದರ ನಗು:** ಆಧುನಿಕ ದಂತವೈದ್ಯಕೀಯವು ಕೇವಲ ಸಮಸ್ಯೆಗಳನ್ನು ಸರಿಪಡಿಸುವ ಗುರಿಯನ್ನು ಹೊಂದಿರದೆ, ಸಮಸ್ಯೆ ಬರದಂತೆ ತಡೆಯುವುದು, ಸಂರಕ್ಷಣೆ ಮತ್ತು ಜೀವನದ ಗುಣಮಟ್ಟವನ್ನು ಹೆಚ್ಚಿಸುವ ಗುರಿ ಹೊಂದಿದೆ. ಡಿಜಿಟಲ್ ಉಪಕರಣಗಳು, ಲೇಸರ್ ತಂತ್ರಜ್ಞಾನ ಮತ್ತು ಕನಿಷ್ಠ ಆಕ್ರಮಣಕಾರಿ ತಂತ್ರಗಳಂತಹ ಆವಿಷ್ಕಾರಗಳೊಂದಿಗೆ, ಆರೋಗ್ಯಕರ ನಗುವನ್ನು ಕಾಪಾಡಿಕೊಳ್ಳುವುದು ಹಿಂದೆಂದಿಗಿಂತಲೂ ಸುಲಭವಾಗಿದೆ. ನಿಮ್ಮ ನಗುವಿನ ಆರೈಕೆ ಈಗ ಅತ್ಯಾಧುನಿಕವಾಗಿದೆ. ನಿಯಮಿತವಾಗಿ ದಂತವೈದ್ಯರನ್ನು ಭೇಟಿಯಾಗುವುದು, ಜಾಗರೂಕತೆಯಿಂದ ಬಾಯಿಯ ಆರೋಗ್ಯವನ್ನು ಕಾಪಾಡಿಕೊಳ್ಳುವುದು, ಬಾಯಿಯ ನೈರ್ಮಲ್ಯ ಮತ್ತು ಸಕಾಲಿಕ ಚಿಕಿತ್ಸೆಯಂತಹ ಸರಳ ಅಭ್ಯಾಸಗಳು ನಿಮ್ಮ ನಗುವನ್ನು ಮಾತ್ರವಲ್ಲದೆ, ಮುಂಬರುವ ವರ್ಷಗಳಲ್ಲಿ ನಿಮ್ಮ ಒಟ್ಟಾರೆ ಯೋಗಕ್ಷೇಮವನ್ನು ಕಾಪಾಡಲು ಸಹಾಯ ಮಾಡುತ್ತದೆ.



ಭಾರತದ ವಿದೇಶಾಂಗ ನೀತಿಗೆ ಜಾಗತಿಕ ಮನ್ನಣೆ ದೊರೆಯುತ್ತಿದೆ ಎಂಬುದಕ್ಕೆ, ಪಶ್ಚಿಮ ಏಷ್ಯಾದ ಯುದ್ಧ ಸಾಕ್ಷಿ

# ಇರಾನ್ ಗುರುತಿಸಿದ 5 ಫ್ರೆಂಡ್ಲಿ ರಾಷ್ಟ್ರಗಳು: ಭಾರತಕ್ಕೆ ಎಷ್ಟನೇ ಸ್ಥಾನ?

**ಟೆಹ್ರಾನ್;** ಅಮೆರಿಕ ಮತ್ತು ಇಸ್ರೇಲ್ ಸರ್ವನಾಶದ ಗುರಿಯೊಂದಿಗೆ ಯುದ್ಧಭೂಮಿಯಲ್ಲಿ ಹೂಂಕರಿಸುತ್ತಿರುವ ಇರಾನ್, ತನ್ನ ಬ್ಯುಸಿ ಶೆಡ್ಯೂಲ್‌ನಲ್ಲೂ ಐದು ಪ್ರಮುಖ ರಾಷ್ಟ್ರಗಳನ್ನು ತನ್ನ ಮಿತ್ರ ಎಂದು ಘೋಷಿಸಿದೆ. ಇರಾನ್ ಗುರುತಿಸಿದ 5 ಫ್ರೆಂಡ್ಲಿ ನೇಷನ್‌ಗಳ ಪೈಕಿ ಭಾರತವೂ ಒಂದಾಗಿದ್ದು, ಹಾರ್ಮುಜ್ ಜಲಸಂಧಿಯಲ್ಲಿ ತನ್ನ ಹಡಗುಗಳಿಗೆ ಮುಕ್ತ ಸಂಚಾರದ ಅವಕಾಶ ಪಡೆದುಕೊಂಡಿದೆ. ಹೌದು, ಭಾರತಕ್ಕೆ ಹಾರ್ಮುಜ್ ಜಲಸಂಧಿ ತೆರೆದಿರುವುದಾಗಿ ಇರಾನ್ ಘೋಷಣೆ ಮಾಡಿದೆ. ಅಲ್ಲದೇ ಭಾರತವನ್ನು ಇರಾನ್ ತನ್ನ ಘನಿಷ್ಠ ಮಿತ್ರರಾಷ್ಟ್ರ ಎಂದೂ ಗುರುತಿಸಿದೆ. ಈ ಕುರಿತು ಮಾತನಾಡಿರುವ ಇರಾನ್ ವಿದೇಶಾಂಗ ಸಚಿವ ಸೈಯ್ಯದ್ ಅಬ್ಬಾಸ್ ಅರಾಘ್ಚಿ, ಮಿತ್ರರಾಷ್ಟ್ರ ಭಾರತದ ಹಡಗುಗಳು ಹಾರ್ಮುಜ್ ಜಲಸಂಧಿ ಮೂಲಕ ಮುಕ್ತ ಪ್ರಯಾಣ ಮಾಡಬಹುದು. ನಾವು ಭಾರತದ ಜೊತೆಗಿನ ನಮ್ಮ ರಾಜತಾಂತ್ರಿಕ ಸಂಬಂಧವನ್ನು ಪ್ರಾಥಮಿಕ ಆದ್ಯತೆಯ ವಿಷಯವಾಗಿ ಪರಿಗಣಿಸುತ್ತೇವೆ ಎಂದಿದ್ದಾರೆ.

ಮಧ್ಯಪ್ರಾಚ್ಯದ ಸಂಘರ್ಷಮಯ ವಾತಾವರಣದಲ್ಲಿ ಮತ್ತು ಈ ಸಂಘರ್ಷದ ಕೇಂದ್ರಬಿಂದುವಾದ ಇರಾನ್‌ನಿಂದ ಇಂತಹ ಹೇಳಿಕೆ ಹೊರ ಬಿದ್ದಿರುವುದು, ಭಾರತದ ರಾಜತಾಂತ್ರಿಕತೆ ದೊರೆತ ಬೃಹತ್ ವಿಜಯ ಎಂದೇ ವಿಶ್ಲೇಷಿಸಲಾಗುತ್ತಿದೆ. ಮಧ್ಯಪ್ರಾಚ್ಯ ಸಂಘರ್ಷಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ನಿಲುವನ್ನು ದೇಶದ ಪ್ರತಿಪಕ್ಷಗಳು ಪ್ರಶ್ನಿಸುತ್ತಿರುವ ಈ ಸಂದರ್ಭದಲ್ಲಿ, ಇರಾನ್‌ನ ಭಾರತ ಪರವಾದ ಹೇಳಿಕೆ ಜಾಗತಿಕ ಮಹತ್ವವನ್ನು ಪಡೆದುಕೊಂಡಿದೆ.

ಇರಾನ್ ಜೊತೆಗಿನ ನಿರಂತರ ಸಂಪರ್ಕ, ಮಧ್ಯಪ್ರಾಚ್ಯ ಸಂಘರ್ಷಕ್ಕೆ ಸಂಬಂಧಿಸಿದಂತೆ ತಳೆದ ತಟಸ್ಥ ನಿಲುವು ಮತ್ತು ಜಾಗತಿಕ ಶಾಂತಿಗಾಗಿ ತೋರಿದ ಬದ್ಧತೆಯ ಕಾರಣಕ್ಕೆ, ಭಾರತ ವಿಶ್ವ ಮಟ್ಟದಲ್ಲಿ ಪ್ರಶಂಸೆಗೆ ಪಾತ್ರವಾಗಿದೆ. ಭಾರತದ ವಿದೇಶಾಂಗ ನೀತಿಗೆ ಜಾಗತಿಕ ಮನ್ನಣೆ ದೊರೆಯುತ್ತಿದೆ ಎಂಬುದಕ್ಕೆ, ಪಶ್ಚಿಮ ಏಷ್ಯಾದ ಯುದ್ಧ ಸಾಕ್ಷಿ ಒದಗಿಸಿದೆ. ಸಂಘರ್ಷ ನಿಲ್ಲಿಸಿ ಶಾಂತಿ ಮಾತುಕತೆಗೆ ಮುಂದಾಗುವಂತೆ, ಭಾರತವು ಯುದ್ಧದಲ್ಲಿ ನಿರತ ಅಮೆರಿಕ-ಇಸ್ರೇಲ್ ಮತ್ತು ಇರಾನ್‌ಗೆ ಸಲಹೆ ನೀಡಿದೆ. ಭಾರತದ ಈ ನಿಲುವು ಅದರ ಹಿತಾಸಕ್ತಿಗಳಿಗೆ ಪೂರಕವಾಗಿದೆ.

ಕೆಲವೇ ದಿನಗಳ ಹಿಂದೆ ಹಾರ್ಮುಜ್ ಜಲಸಂಧಿಯಲ್ಲಿ ಪಾಕಿಸ್ತಾನದ ಹಡಗುಗಳಿಗೆ ನೋ ಎಂಟ್ರಿ ಎಂದಿದ್ದ ಇರಾನ್, ಈಗ ತನ್ನ ನೆರೆಯ ರಾಷ್ಟ್ರವನ್ನು ತನ್ನ ಗೆಳೆಯರ ಬಳಗೊಂದಿಗೆ ಸೇರಿಸಿಕೊಂಡಿದೆ. ಇದಕ್ಕೆ ಅದರದ್ದೇ ಆದ ರಾಜತಾಂತ್ರಿಕ ಕಾರಣಗಳಿವೆ ಎಂಬುದು ಸತ್ಯ..ಯುದ್ಧ ಆರಂಭವಾದಾಗಿನಿಂದ ಪಾಕಿಸ್ತಾನವು ಇರಾನ್ ಪರ ಹೇಳಿಕೆಗಳನ್ನು ನೀಡುತ್ತಾ ಬಂದಿದೆ. ಅಲ್ಲದೇ ಅಮೆರಿಕದ ಕೋಪಕ್ಕೆ ಗುರಿಯಾಗುವ ಭಯದ ನಡುವೆಯೂ, ಇರಾನ್ ಜೊತೆಗಿನ ತನ್ನ ರಾಜತಾಂತ್ರಿಕ ಸಂಬಂಧವನ್ನು ಪಾಕಿಸ್ತಾನ ಮುಂದುವರೆಸಿಕೊಂಡು ಬಂದಿದೆ. ಇನ್ನು ರಷ್ಯಾ ಬಗ್ಗೆ ಏನೂ ಹೇಳುವುದೇ ಬೇಡ. ಏಕೆಂದರೆ ಮಧ್ಯಪ್ರಾಚ್ಯ ಸಂಘರ್ಷ ಆರಂಭವಾದಾಗಿನಿಂದ ಇರಾನ್ ಪರವಾಗಿ ಅತ್ಯಂತ ಗಟ್ಟಿಯಾಗಿ ಮಾತನಾಡಿದ ರಾಷ್ಟ್ರಗಳ ಪೈಕಿ ರಷ್ಯಾ ಮುಂಚೂಣಿಯಲ್ಲಿದೆ.ಪುಟಿನ್, ಖಮೇನಿ ಹತ್ಯೆಯನ್ನು ಖಂಡಿಸಿದ್ದಲ್ಲದೇ, ನೂತನ ಸರ್ವೋಚ್ಚ ನಾಯಕ ಮೊಜ್ತಬಾ ಅಲಿ ಖಮೇನಿ ಅವರಿಗೆ ಗಟ್ಟಿ ಬೆಂಬಲ ಘೋಷಿಸಿದ್ದಾರೆ.

## ಯಾವ ರಾಷ್ಟ್ರಗಳಿಗೆ ಮುಚ್ಚಿದೆ?

**ಭಾರತ ಮತ್ತು ಇತರೆ ಮಿತ್ರ ರಾಷ್ಟ್ರಗಳಿಗೆ ಹಾರ್ಮುಜ್ ಜಲಸಂಧಿಯನ್ನು ಮುಕ್ತವಾಗಿರಿಸಿರುವ ಇರಾನ್, ಅದೇ ಸಮಯದಲ್ಲಿ ತನ್ನ ಶತ್ರು ರಾಷ್ಟ್ರಗಳಿಗೆ ಮಾತ್ರ ಕಠಿಣ ಎಚ್ಚರಿಕೆ ರವಾನಿಸಿದೆ. ಅಮೆರಿಕ, ಇಸ್ರೇಲ್ ಮತ್ತು ಪ್ರಸ್ತುತ ಬಿಕ್ಕಟ್ಟಿನಲ್ಲಿ ಅವುಗಳಿಗೆ ಬೆಂಬಲ ನೀಡುತ್ತಿರುವ ಕೆಲವು ಗಲ್ಫ್ ಮತ್ತು ಯುರೋಪಿಯನ್ ರಾಷ್ಟ್ರಗಳ ಹಡಗುಗಳಿಗೆ, ಈ ಮಾರ್ಗದಲ್ಲಿ ಎಂಟ್ರಿಯೇ ಇಲ್ಲ ಎಂದು ಇರಾನ್ ಖಡಕ್ ಆಗಿ ವಾರ್ನಿಂಗ್ ಕೊಟ್ಟಿದೆ. ಇರಾನ್ ಹಾರ್ಮುಜ್ ಜಲಸಂಧಿಯಲ್ಲಿ ವಾಟರ್ ಮೈನ್ಸ್‌ಗಳನ್ನು ಇಳಿಬಿಟ್ಟಿದೆ ಎಂಬ ಮಾತುಗಳು ಕೇಳಿಬರುತ್ತಿವೆ.**

## ಇರಾನ ಮಿತ್ರರಾಷ್ಟ್ರಗಳ ಪಟ್ಟಿ:

**ಆದರೆ ಇರಾನ್ ಕೇವಲ ಭಾರತವನ್ನು ಮಾತ್ರ ತನ್ನ ಘನಿಷ್ಠ ಮಿತ್ರ ರಾಷ್ಟ್ರ ಎಂದು ಕರೆದಿಲ್ಲ ಮತ್ತು ಭಾರತಕ್ಕೆ ಮಾತ್ರ ಹಾರ್ಮುಜ್ ಜಲಸಂಧಿಯನ್ನು ತೆರೆದಿಲ್ಲ. ಬದಲಿಗೆ ಭಾರತದ ಜೊತೆಗೆ ಇತರ ನಾಲ್ಕು ರಾಷ್ಟ್ರಗಳನ್ನು ಇರಾನ್ ತನ್ನ ಮಿತ್ರರಾಷ್ಟ್ರಗಳ ಪಟ್ಟಿಗೆ ಸೇರಿಸಿದೆ. ಇರಾನ್ ವಿದೇಶಾಂಗ ಸಚಿವ ಸೈಯ್ಯದ್ ಅಬ್ಬಾಸ್ ಅರಾಘ್ಚಿ ಹೇಳಿದಂತೆ, ಭಾರತ, ಚೀನಾ, ರಷ್ಯಾ, ಪಾಕಿಸ್ತಾನ ಮತ್ತು ಬಾಂಗ್ಲಾದೇಶಗಳು ಇರಾನ್‌ನ ಸ್ನೇಹಪರ ದೇಶಗಳಾಗಿವೆ. ಅಂದರೆ ಈ ರಾಷ್ಟ್ರಗಳಿಗೂ ಇರಾನ್ ತನ್ನ ನಿಯಂತ್ರಣದಲ್ಲಿರುವ ಹಾರ್ಮುಜ್ ಜಲಸಂಧಿಯನ್ನು ತೆರೆದಿದೆ.**



- ಭಾರತವನ್ನು ಘನಿಷ್ಠ ಮಿತ್ರರಾಷ್ಟ್ರ ಎಂದ ಇರಾನ್.
- ಭಾರತಕ್ಕೆ ಹಾರ್ಮುಜ್ ಜಲಸಂಧಿ ಬಳಕೆಗೆ ಮುಕ್ತ ಅವಕಾಶ.
- ಇರಾನ್ ಗುರುತಿಸಿದ ಇತರ ನಾಲ್ಕು ಮಿತ್ರರಾಷ್ಟ್ರಗಳು ಯಾವುವು?

## ಲಾಭ ನೋಡದ ಭಾರತ

**ರಷ್ಯಾ ಮತ್ತು ಚೀನಾ ತನಗೇಕೆ ಬೆಂಬಲ ನೀಡುತ್ತಿದೆ ಎಂಬುದರ ಸ್ಪಷ್ಟ ಅರಿವು ಇರಾನ್‌ಗಿದೆ. ಹಾಗೆಯೇ ಭಾರತ ಯಾವುದೇ ಲಾಭ-ನಷ್ಟದ ಲೆಕ್ಕಾಚಾರ ಮಾಡದೇ, ಕೇವಲ ತನ್ನ ತೈಲ ಮತ್ತು ಅನಿಲ ಹಿತಾಸಕ್ತಿಯನ್ನಷ್ಟೇ ಖಚಿತಪಡಿಸಿಕೊಳ್ಳುವುದಕ್ಕೆ ಆದ್ಯತೆ ನೀಡಿದೆ ಎಂಬುದೂ ಇರಾನ್‌ಗೆ ಗೊತ್ತಿದೆ. ಇದೇ ಕಾರಣಕ್ಕೆ ತನ್ನ ರಾಜತಾಂತ್ರಿಕ ನೀತಿಗೆ ಅನುಗುಣವಾಗಿ ಭಾರತವೂ ಸೇರಿದಂತೆ ತಾನು ಗುರುತಿಸಿದ ಮಿತ್ರರಾಷ್ಟ್ರಗಳಿಗೆ ಹಾರ್ಮುಜ್ ಜಲಸಂಧಿಯನ್ನು ಮುಕ್ತವಾಗಿ ಬಳಸಿಕೊಳ್ಳಲು ಅವಕಾಶ ನೀಡಿದೆ.**

## ಮಿನಿ ನ್ಯೂಸ್

### ಆಟೋಗೆ ಕಾರು ಡಿಕ್ಕಿ : ಐವರು ಸಾವು

**ಗ್ವಾಲಿಯರ್:** ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ಮುಂಜಾನೆ ಆಟೋ ರಿಕ್ಷಾಗೆ ಕಾರು ಡಿಕ್ಕಿ ಹೊಡೆದು ಸಂಭವಿಸಿದ ಭೀಕರ ಅಪಘಾತದಲ್ಲಿ ಒಂದೇ ಕುಟುಂಬದ ಐವರು ಮೃತಪಟ್ಟಿದ್ದಾರೆ. ಮೃತರನ್ನು ಇಂದ್ರಜೀತ್ ಶಾಕ್ಯ (55), ಅವರ ಪತ್ನಿ ಲೀಲಾ (52), ಶುಭಮ್ ಆಟೋದಲ್ಲಿ ಪ್ರಯಾಣಿಸುತ್ತಿದ್ದ ಕಶ್ಯಪ್ (30), ಅವರ ಪತ್ನಿ ಶಗುನ್ (25) ಹಾಗೂ ಅವರ ಸಂಬಂಧಿ ಪಿಂಕಿ ಕಶ್ಯಪ್ (60) ಎಂದು ಗುರುತಿಸಲಾಗಿದೆ.

ಮುಂಜಾನೆ 3 ಗಂಟೆ ಸುಮಾರಿಗೆ ಪರಶುರಾಮ ಚೌರಾಹಾ ಬಳಿ ದುರ್ಘಟನೆ ಸಂಭವಿಸಿದೆ. ಘಟನೆಯಲ್ಲಿ ಪ್ರಿಯಾಂಶ್ (5), ಆರವ್ (6) ಎಂಬ ಇಬ್ಬರು ಮಕ್ಕಳನ್ನು ಸೇರಿಸಿ ನಾಲ್ವರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.ಅತಿವೇಗ ಹಾಗೂ ಅಜಾಗರೂಕ ಚಾಲನೆಯ ಕಾರಣದಿಂದ ಕಾರನ್ನು ಪೊಲೀಸರು ಹಿಂಬಾಲಿಸುತ್ತಿದ್ದಾಗ ಅದು ಆಟೋ ರಿಕ್ಷಾಗೆ ಡಿಕ್ಕಿ ಹೊಡೆದಿದೆ ಎಂದು ಗೊತ್ತಾಗಿದೆ.

### ಕಾಣೆಯಾಗಿದ್ದ 8 ವರ್ಷದ ಬಾಲಕಿ ಹಿಟ್ಟಿನ ಡಬ್ಬಿಯಲ್ಲಿ ಶವವಾಗಿ ಪತ್ತೆ

**ಆಗ್ರಾ:** ಕಳೆದ ಮೂರು ದಿನದ ಹಿಂದೆ ಕಾಣೆಯಾಗಿದ್ದ 8ವರ್ಷದ ಬಾಲಕಿಯ ಶವವು ಕೋಣೆಯೊಂದರ ಹಿಟ್ಟಿನ ಡಬ್ಬಿಯೊಳಗೆ ಪತ್ತೆಯಾಗಿರುವ ಘಟನೆ ಆಗ್ರಾ ಜಿಲ್ಲೆಯ ತಾಜ್‌ಗಂಜ್ ಪ್ರದೇಶದ ಸಿದ್ಧಾಂತ್ ನಗರದಲ್ಲಿ ನಡೆದಿದೆ. ಬಾಲಕಿ ಮಾ.24ರಂದು ಸಂಜೆ ಸುಮಾರು 4 ಗಂಟೆ ಸುಮಾರಿನಲ್ಲಿ ಕಾಣೆಯಾಗಿದ್ದಳು. ಕುಟುಂಬದವರು ಪೊಲೀಸರಿಗೆ ಮಾಹಿತಿ ನೀಡಿದ ಬಳಿಕ ವ್ಯಾಪಕ ಶೋಧ ಕಾರ್ಯಾಚರಣೆ ಆರಂಭಿಸಲಾಯಿತು.

ಮಗುವನ್ನು ಪತ್ತೆಹಚ್ಚಲು ಎಂಟು ತಂಡಗಳನ್ನು ನಿಯೋಜಿಸಲಾಗಿತ್ತು. ಸುತ್ತಮುತ್ತಲಿನ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ ಅದೇ ಪ್ರದೇಶದಲ್ಲಿ ಅವರ ಮನೆಯ ಬಳಿ ಬಾಲಕಿ ಕಂಡುಬಂದರೂ, ನಂತರದ ಯಾವುದೇ ದೃಶ್ಯಗಳಲ್ಲಿ ಕಂಡುಬಂದಿಲ್ಲ ಎಂದು ನಗರ ಉಪ ಪೊಲೀಸ್ ಆಯುಕ್ತ ಅಲಿ ಅಬ್ಬಾಸ್ ತಿಳಿಸಿದ್ದರೆ.

ಶಂಕೆ ಆಧರಿಸಿ, ಅದೇ ಮನೆಯಲ್ಲಿ ವಾಸಿಸುತ್ತಿದ್ದ ಸುನೀಲ್ ಎಂಬ ವ್ಯಕ್ತಿ ಬಾಡಿಗೆಗೆ ಪಡೆದಿದ್ದ ಕೋಣೆಯ ಬಾಗಿಲು ಮುರಿದು ಪೊಲೀಸರು ಶೋಧ ನಡೆಸಿದರು. ಈ ವೇಳೆ ಕೋಣೆಯೊಳಗಿನ ಹಿಟ್ಟಿನ ಡಬ್ಬಿಯಲ್ಲಿ ಬಾಲಕಿಯ ಶವ ಪತ್ತೆಯಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ಕನಿಷ್ಠ ಮಟ್ಟಕ್ಕೆ ಕುಸಿದ ರೂಪಾಯಿ

**ಮುಂಬೈ:** ಭಾರತೀಯ ಆರ್ಥಿಕತೆಗೆಬಹುದೊಡ್ಡ ಆಘಾತ ಎದುರಾಗಿದ್ದು ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಕುಸಿದಿದೆ. ಇಂದು ಮಾರುಕಟ್ಟೆ ವಹಿವಾಟು ಆರಂಭವಾಗುತ್ತಿದ್ದಂತೆ ಒಂದೇ ದಿನಕುಸಿತ ಕಂಡು ಪ್ರತಿ ಡಾಲರ್‌ಗೆ 94.73 ರೂ.ಗಳ ಕನಿಷ್ಠ ಮಟ್ಟವನ್ನು ತಲುಪಿದೆ. 94.23 ರಷ್ಟಿದ್ದ ರೂಪಾಯಿ, ಏಕಾಏಕಿ ಪಾತಾಳಕ್ಕೆ ಕುಸಿದಿರುವುದು ಹೂಡಿಕೆದಾರರಲ್ಲಿ ತೀವ್ರ ಆತಂಕ ಸೃಷ್ಟಿಸಿದೆ. ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಭೀಕರ ಯುದ್ಧವೇ ನಮ್ಮ ರೂಪಾಯಿಯ ಪಾಲಿಗೆ ಬಹುದೊಡ್ಡ ಶತ್ರುವಾಗಿದೆ. ಗಲ್ಫ್ ಪ್ರದೇಶದಲ್ಲಿ ಉದ್ವಿಗ್ನತೆ ಹೆಚ್ಚುತ್ತಿರುವ ಕಾರಣ ಇಂಧನ ಪೂರೈಕೆಯಲ್ಲಿ ವ್ಯತ್ಯಯವಾಗಬಹುದು ಎಂಬ ಭಯ ಜಾಗತಿಕ ಮಾರುಕಟ್ಟೆಯನ್ನು ನಡುಗಿಸುತ್ತಿದೆ. ಭಾರತವು ಅತಿಹೆಚ್ಚು ತೈಲ ಆಮದು ಮಾಡಿಕೊಳ್ಳುವುದರಿಂದ, ತೈಲ ಬೆಲೆ ಏರಿಕೆಯಾದಾಗ ನಾವು ಹೆಚ್ಚಿನ ಡಾಲರ್‌ಗಳನ್ನು ಪಾವತಿಸಬೇಕಾಗುತ್ತದೆ.

ಇದರಿಂದ ನಮ್ಮ ವಿದೇಶಿ ವಿನಿಮಯ ಮೀಸಲು ಕರಗುತ್ತಿದ್ದು, ರೂಪಾಯಿ ದುರ್ಬಲಗೊಳ್ಳುತ್ತಿದೆ. ಏರಿಕೆ ಕಂಡಿದ್ದ ಷೇರು ಮಾರುಕಟ್ಟೆ ಕೂಡ ಕುಸಿದಿದೆ. ಸೆನ್ಸೆಕ್ಸ್ 1690.23(-2.25%) ಅಂಕ ಕುಸಿತ ಕಂಡಿದ್ದರೆ, ನಿಫ್ಟಿ 486.85(-2.09%) ಅಂಕ ಪತನವಾಗಿದೆ.

### ಗುಜರಾತ್‌ಗೆ ಬಂತು 47,600 ಮೆಟ್ರಿಕ್ ಟನ್ ಎಲ್‌ಪಿಜಿ ಹೊತ್ತ ಹಡಗು

**ಗಾಂಧೀನಗರ:** ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷದ ನಡುವೆ 47,600 ಮೆಟ್ರಿಕ್ ಟನ್ ಎಲ್‌ಪಿಜಿಯನ್ನು ಹೊತ್ತ 'ಜಗ್ ವಸಂತ್' ಹಡಗು ಗುಜರಾತ್‌ನ ವಾಡಿನಾರ್ ಬಂದರಿಗೆ ಆಗಮಿಸಿದೆ.

ಸುಮಾರು ಒಂದು ತಿಂಗಳ ಕಾಲ ಹಾರ್ಮುಜ್ ಜಲಸಂಧಿಯಲ್ಲಿ ಸಿಲುಕಿಕೊಂಡಿದ್ದ ಹಡಗುಗಳ ಪೈಕಿ ಇದು ಒಂದು. ಇದೀಗ ಗುಜರಾತ್‌ನ ವಾಡಿನಾರ್ ಬಂದರಿಗೆ ಆಗಮಿಸಿದ್ದು, ತಡರಾತ್ರಿ 47,600 ಮೆಟ್ರಿಕ್ ಟನ್ ಎಲ್‌ಪಿಜಿಯನ್ನು ಹೊತ್ತುತಂದಿದೆ. ಈ ಮೂಲಕ ದೇಶದಲ್ಲಿ ಉಂಟಾಗುತ್ತಿರುವ ಅನಿಲ ಪೂರೈಕೆ ಒತ್ತಡ ಕಡಿಮೆಯಾಗಲಿದೆ. ಇನ್ನೂ 45,000 ಮೆಟ್ರಿಕ್ ಟನ್ ಎಲ್‌ಪಿಜಿ ಹೊತ್ತ 2ನೇ ಎಲ್‌ಪಿಜಿ ಟ್ಯಾಂಕರ್ ಪೈನ್ ಗ್ಯಾಸ್ ಶೀಘ್ರದಲ್ಲೇ ನವ ಮಂಗಳೂರು ಬಂದರಿಗೆ ಆಗಮಿಸಲಿದೆ. ಈ ಹಡಗು ಬಂದ ಬಳಿಕ 92,000 ಮೆಟ್ರಿಕ್ ಟನ್‌ಗಳಿಗಿಂತ ಅಧಿಕ ಎಲ್‌ಪಿಜಿ ಸಂಗ್ರಹವಾಗಲಿದೆ. ಇದು ಸರಿಸುಮಾರು ದೇಶದ ಜನರಿಗೆ ಒಂದು ದಿನದ ಅಡಿಗೆ ಅನಿಲ ಬಳಕೆಗೆ ಸಮನಾಗಿದೆ.

ಕಳೆದ ಹತ್ತು ದಿನಗಳಲ್ಲಿ ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋದ ಎರಡು ದೊಡ್ಡ ಎಲ್‌ಪಿಜಿ ಟ್ಯಾಂಕರ್‌ಗಳು ಈಗಾಗಲೇ ಭಾರತಕ್ಕೆ ಬಂದಿವೆ. ಜಗ್ ವಸಂತ್‌ಗಿಂತ ಮೊದಲು, ಎಲ್‌ಪಿಜಿ ಟ್ಯಾಂಕರ್‌ಗಳಾದ ಶಿವಾಲಿಕ್ ಮತ್ತು ನಂದಾ ದೇವಿ ಕಾಂಡ್ಲಾ ಬಂದರಿಗೆ ಆಗಮಿಸಿವೆ.


# ಮಾ.30ರಂದು ಸಿಎಂ ಸ್ಥಾನಕ್ಕೆ ನಿತೀಶ್ ರಾಜಿನಾಮೆ?

**ಪಾಟ್ನಾ:** ಹೊಸ ಬೆಳವಣಿಗೆಯಲ್ಲಿ ರಾಷ್ಟ ರಾಜಕಾರಣಕ್ಕೆ ಮರಳಿ ರಾಜ್ಯಸಭೆಗೆ ಆಯ್ಕೆಯಾಗಿರುವ ನಿತೀಶ್ ಕುಮಾರ್ ಅವರು ಮಾರ್ಚ್ 30ರಂದು ಬಿಹಾರ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವ ಸಾಧ್ಯತೆ ಇದೆ.

ಕಳೆದ ಮಾರ್ಚ್ 16 ರಂದು ನಡೆದ ರಾಜ್ಯಸಭಾ ಚುನಾವಣೆಯಲ್ಲಿ ನಿತೀಶ್ ಕುಮಾರ್ ಗೆಲುವು ಸಾಧಿಸಿದ್ದರು. ಒಬ್ಬ ವ್ಯಕ್ತಿಯು ಏಕಕಾಲದಲ್ಲಿ ಎರಡು ಸದನಗಳ ಸದಸ್ಯತ್ವವನ್ನು ಹೊಂದಲು ಸಾಧ್ಯವಿಲ್ಲ,14 ದಿನಗಳಲ್ಲಿ ಒಂದು ಸ್ಥಾನವನ್ನು ತ್ಯಜಿಸುವುದು ಕಡ್ಡಾಯ ಹಾಗಾಗಿ ತಮ್ಮ ಸಿಎಂ ಸ್ಥಾನವನ್ನು ತ್ಯಜಿಸುವುದು ಅನಿವಾರ್ಯ.

ಎರಡು ದಶಕಗಳ ಕಾಲ ಬಿಹಾರದ ಅಧಿಕಾರದ ಚುಕ್ಕಾಣಿ ಹಿಡಿದಿರುವ ನಿತೀಶ್, ಕೇಂದ್ರ ರಾಜಕೀಯಕ್ಕೆ ಮರಳಲು ನಿರ್ಧರಿಸಿದ್ದಾರೆ. ರಾಜ್ಯಸಭೆಗೆ ಹೋಗುತ್ತಿರುವಾಗ, ಬಿಹಾರದಲ್ಲಿ ತಮ್ಮ ರಾಜಕೀಯ ಹಿಡಿತವನ್ನು ಹಾಗೇ ಉಳಿಸಿಕೊಳ್ಳಲು ಬಿಹಾರದ ವಿವಿಧ ಜಿಲ್ಲೆಗಳಿಗೆ ಪ್ರಯಾಣಿಸುತ್ತಿದ್ದಾರೆ ಮತ್ತು ಅಭಿವೃದ್ಧಿ ಯೋಜನೆಗಳನ್ನು ತ್ವರಿತಗತಿಯಲ್ಲಿ ಉದ್ಘಾಟಿಸುತ್ತಿದ್ದಾರೆ. ಮುಖ್ಯಮಂತ್ರಿ ನಿತೀಶ್ ಕುಮಾರ್ ರಾಜೀನಾಮೆ ನೀಡಿದ ನಂತರ, ಬಿಹಾರದಲ್ಲಿ ಬಿಜೆಪಿ ನೇತೃತ್ವದ ಹೊಸ ಸರ್ಕಾರ ರಚನೆಯಾದರೆ, ನಿತೀಶ್ ಕುಮಾರ್ ತಮ ರಾಜಕೀಯ ಪ್ರಯಾಣದಲ್ಲಿ ಹೊಸ ಅಧ್ಯಾಯ ಆರಂಭಿಸಲಿದ್ದಾರೆ.

21 ವರ್ಷಗಳ ಹಿಂದೆ ಸಂಸತ್ ಸದಸ್ಯರಾಗಿ ಸೇವೆ ಸಲ್ಲಿಸುತ್ತಿರುವಾಗ ಬಿಹಾರದ ಮುಖ್ಯಮಂತ್ರಿಯಾದರು ಮತ್ತು ಈಗ ರಾಜ್ಯಸಭೆಗಾಗಿ ತಮ್ಮ ಸ್ಥಾನವನ್ನು ತ್ಯಜಿಸಿದ್ದರು. ಜಾಣೆಯಿಂದ ತಮ ಪುತ್ರ ನಿಶಾಂತ್ ಅವರ ರಾಜಕೀಯ ವೃತ್ತಿಜೀವನವನ್ನು ಪ್ರಾರಂಭಿಸುವುದರ ಜೊತೆಗೆ ಬಿಹಾರದಾದ್ಯಂತ ವಿವಿಧ ಜಿಲ್ಲೆಗಳಲ್ಲಿ ಪ್ರವಾಸ ಮಾಡುತ್ತಾ ತಮ ಚಾಪು ವೃದ್ಧಿಸಿದ್ದಾರೆ. ಬಿಜೆಪಿ ಬಿಹಾರದ ಮುಖ್ಯಮಂತ್ರಿಯಾದರೆ, ಜೆಡಿಯು ಉಪಮುಖ್ಯಮಂತ್ರಿ ಸ್ಥಾನವನ್ನು ನಿತೀಶ್ ಕುಮಾರ್ ಅವರ ಪುತ್ರ ನಿಶಾಂತ್ ಅಲಂಕರಿಸಲಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ.



# ನೇಪಾಳದ ಪ್ರಧಾನಿಯಾಗಿ ಬಲೆಂದ್ರ ಶಾ-ಬಾಲೆನ್ ನೇಮಕ

**ಕಠ್ಮಂಡು:** ನೇಪಾಳದ ಪ್ರಧಾನಿಯಾಗಿ ಬಲೆಂದ್ರ ಶಾ-ಬಾಲೆನ್ ಅವರನ್ನು ನೇಮಕ ಮಾಡಲಾಗಿದೆ. ಇದರಿಂದ ಹಿಮಾಲಯ ರಾಷ್ಟ್ರದ ಇತಿಹಾಸದಲ್ಲೇ ಅತಿ ಕಿರಿಯ ವಯಸ್ಸಿನಲ್ಲಿ ಪ್ರಧಾನಿಯಾದ ನಾಯಕ ಎಂಬ ದಾಖಲೆಯನ್ನು ಬಾಲೆನ್ ನಿರ್ಮಿಸಿದ್ದಾರೆ.

ರಾಷ್ಟ್ರಪತಿ ರಾಮಚಂದ್ರ ಪೌಡೆಲ್ ಅವರು ನೇಪಾಳ ಸಂವಿಧಾನದ ವಿಧಿ 76(1) ಅನ್ವಯ ರಾಷ್ಟ್ರೀಯ ಸ್ವತಂತ್ರ ಪಾರ್ಟಿ (ಆರ್‌ಎಸ್‌ಪಿ) ಸಂಸದೀಯ ಪಕ್ಷದ ನಾಯಕ ಬಾಲೆನ್ ಅವರನ್ನು ಪ್ರಧಾನಿಯಾಗಿ ನೇಮಕ ಮಾಡಿರುವುದಾಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

35 ವರ್ಷದ ರ್ಯಾಪರ್‌ನಿಂದ ರಾಜಕಾರಣಿಯಾಗಿ ಹೊರಹೊಮಿದ ಬಾಲೆನ್, ಮಧೇಶ್ ಪ್ರದೇಶದಿಂದ ಪ್ರಧಾನಿಯಾದ ಮೊದಲ ವ್ಯಕ್ತಿಯಾಗಿದ್ದಾರೆ. ಮಧ್ಯಾಹ್ನ 12.34ಕ್ಕೆ ರಾಷ್ಟ್ರಪತಿ ಭವನ ಶೀತಲ್ ನಿವಾಸ್‌ನಲ್ಲಿ ಪ್ರಮಾಣವಚನ ಸ್ವೀಕಾರಿಸಿದ್ದಾರೆ.

ರಾಷ್ಟ್ರಪತಿ ಪೌಡೆಲ್ ಅವರು ಪದಗ್ರಹಣ ಹಾಗೂ ಗೌಪ್ಯತಾ ಪ್ರಮಾಣವಚನ ಬೋಧಿಸಲಿದ್ದಾರೆ ಎಂದು ರಾಷ್ಟ್ರಪತಿ ಮಾಧ್ಯಮ ಸಲಹೆಗಾರ ಕಿರಣ್ ಪೋಖರೆಲ್ ತಿಳಿಸಿದ್ದಾರೆ.

ಪ್ರಮಾಣವಚನ ಸಮಾರಂಭದಲ್ಲಿ ಹಿಂದೂ ಹಾಗೂ ಬೌದ್ಧ ಧಾರ್ಮಿಕ ಪರಂಪರೆಗಳ ಸಂಯೋಜನೆ ಕಾಣಿಸಿಕೊಳ್ಳಲಿದೆ. 7 ಬ್ರಾಹ್ಮಣರಿಂದ ಶಂಖನಾದ, 108 ಹಿಂದೂ ವಟುಗಳಿಂದ ವೇದಮಂತ್ರ ಪಠಣ (ಸ್ವಸ್ತಿ ಬಚನ್) ಹಾಗೂ 107 ಲಾಮಾಗಳಿಂದ ಬೌದ್ಧ ಧರ್ಮಗ್ರಂಥ ಪಠಣ (ಮಂಗಳ ಬಚನ್) ಸೇರಿದಂತೆ ವಿಶೇಷ ಧಾರ್ಮಿಕ ವಿಧಿವಿಧಾನಗಳು ನಡೆಯಲಿವೆ ಎಂದು ಮೂಲಗಳು ತಿಳಿಸಿವೆ. ಬಾಲೆನ್ 15 ರಿಂದ 18 ಸಚಿವರನ್ನು ಒಳಗೊಂಡ ಸಣ್ಣ ಸಚಿವ ಸಂಪುಟ ರಚಿಸುವ ಸಾಧ್ಯತೆ ಇದೆ.

ಕಳೆದ ವರ್ಷ ನಡೆದ ಜನರೇಶನ್-ಜೆನ್‌ಜಿ ಪ್ರತಿಭಟನೆಗಳ ನಂತರ ನಡೆದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಪಾರಂಪರಿಕ ರಾಜಕೀಯ ಪಕ್ಷಗಳನ್ನು ಹಿಂದಿಕ್ಕಿ ಬಾಲೆನ್ ಹಾಗೂ ಅವರ ಆರ್‌ಎಸ್‌ಪಿ ಪಕ್ಷ ಭಾರೀ ಗೆಲುವು ಸಾಧಿಸಿ, ಸರ್ಕಾರ ರಚಿಸುವ ಅವಕಾಶ ಪಡೆದುಕೊಂಡಿದೆ.

275 ಸದಸ್ಯರ ಪ್ರತಿನಿಧಿ ಸಭೆಯಲ್ಲಿ ಆರ್‌ಎಸ್‌ಪಿ 182 ಸ್ಥಾನಗಳನ್ನು ಗೆದ್ದು ಸ್ಪಷ್ಟ ಬಹುಮತ ಸಾಧಿಸಿದೆ. ಈ ಸಭೆಯಲ್ಲಿ 165 ಸದಸ್ಯರು ನೇರ ಮತದಾನದ ಮೂಲಕ ಹಾಗೂ 110 ಸದಸ್ಯರು ಅನುಪಾತಾತಕ ಮತದಾನದ ಮೂಲಕ ಆಯ್ಕೆಯಾಗುತ್ತಾರೆ. ನಿನ್ನೆ ನೂತನವಾಗಿ ಆಯ್ಕೆಯಾದ ಎಲ್ಲಾ ಸದಸ್ಯರೂ ಪ್ರಮಾಣವಚನ ಸ್ವೀಕರಿಸಿದ್ದರು. ಕಠಂಡು ಮಾಜಿ ಮೇಯರ್ ಆಗಿದ್ದ ಬಾಲೆನ್, ಝಾಪಾ 5 ಕ್ಷೇತ್ರದಲ್ಲಿ ನಾಲ್ಕು ಬಾರಿ ಪ್ರಧಾನಿಯಾಗಿದ್ದ ಕೆ.ಪಿ. ಶರ್ಮಾ ಒಲಿ ಅವರನ್ನು ಭಾರೀ ಮತಾಂತರದಿಂದ ಸೋಲಿಸಿದ್ದಾರೆ.



# ನಮ್ಮನ್ನೇನು ಕತಾರ್ ಅನ್ಕೊಂಡ್ರಾ, ಹುಷಾರ್ ಇಸ್ರೇಲ್‌ಗೆ ಪಾಕಿಸ್ತಾನದ ಎಚ್ಚರಿಕೆ

**ಇಸ್ಲಾಮಾಬಾದ್ :** ಇರಾನ್ ಮತ್ತು ಅಮೆರಿಕದ ಮಧ್ಯೆ ಮಾತುಕತೆಗೆ ಮಧ್ಯಸ್ಥಿಕೆಯ ವೇದಿಕೆಯಾಗಿ ಪಾಕಿಸ್ತಾನ ಜವಾಬ್ದಾರಿ ವಹಿಸಿಕೊಳ್ಳಬಹುದು ಎನ್ನುವ ಹೊತ್ತಿನಲ್ಲಿ, ಪಾಕಿಸ್ತಾನವು, ಇಸ್ರೇಲ್ ದೇಶಕ್ಕೆ ಖಡಕ್ ಎಚ್ಚರಿಕೆಯನ್ನು ನೀಡಿದೆ. ನಮ್ಮ ತಂಟೆಗೆ ಬಂದರೆ ಹುಷಾರ್ ಎನ್ನುವ ಎಚ್ಚರಿಕೆಯನ್ನು ನೀಡಿದೆ. ಇದಕ್ಕೆ ಕಾರಣ, ಟೆಹ್ರಾನ್‌ನಲ್ಲಿರುವ ದೂತಾವಾಸ ಕಚೇರಿ ಬಳಿ ನಡೆದ ದಾಳಿ.

ಇರಾನ್‌ನ ಟೆಹ್ರಾನ್ ನಗರದ ಮೇಲೆ ಅಮೆರಿಕ ಮತ್ತು ಇಸ್ರೇಲ್ ಜಂಟಿ ದಾಳಿಯನ್ನು ನಡೆಸಿತ್ತು. ಅದರಲ್ಲಿ ಒಂದು ದಾಳಿ, ಪಾಕಿಸ್ತಾನದ ರಾಯಭಾರ ಕಚೇರಿ ಬಳಿ ನಡೆದಿತ್ತು. ಇದಕ್ಕೆ, ಪಾಕಿಸ್ತಾನವು ತೀಕ್ಷ್ಣ ಎಚ್ಚರಿಕೆಯನ್ನು ಇಸ್ರೇಲ್‌ಗೆ ನೀಡಿದೆ. ನಮ್ಮನ್ನೇನು ಕತಾರ್ ಅಂದುಕೊಂಡ್ರಾ ಎಂದು ಎಚ್ಚರಿಸಿದೆ.

**ಪಾಕಿಸ್ತಾನ ಎಚ್ಚರಿಕೆಗೆ ಕಾರಣವೇನು?:** ನಮ್ಮ ಅಧಿಕಾರಿಗಳು ಅಥವಾ ಕಚೇರಿಯ ಮೇಲೆ ದಾಳಿ ಮಾಡಿದರೆ ನಾವು ಸುಮ್ಮನಿರುವುದಿಲ್ಲ. ಅದು ಇರಾನ್ ಆಗಲಿ, ಪ್ರಪಂಚದ ಯಾವುದೇ ಭಾಗದಲ್ಲಾದರೂ ಬೆದರಿಕೆ ಎದುರಾದರೆ, ಮುಟ್ಟಿ ನೋಡುವಂತಹ ತಿರುಗೇಟನ್ನು ನೀಡಲಾಗುವುದು ಎಂದು ಪಾಕಿಸ್ತಾನ ಎಚ್ಚರಿಕೆಯನ್ನು ನೀಡಿದೆ. ಈ ಎಚ್ಚರಿಕೆ, ಇಸ್ರೇಲ್ ನಡೆಸಿದ ದಾಳಿಯ ಬೆನ್ನಲ್ಲೇ ಬಂದಿದೆ. ಪಾಕಿಸ್ತಾನ ಸರ್ಕಾರದ ಭಾಗವಾಗಿರುವ ಪಾಕಿಸ್ತಾನ ಸ್ಟ್ರಾಟೆಜಿಕ್ ಪೋರಂ ಈ ಎಚ್ಚರಿಕೆಯನ್ನು ನೀಡಿದೆ.

**ಟೆಹ್ರಾನ್ ಮಧ್ಯ ಭಾಗದಲ್ಲಿ ನಡೆದ ವೈಮಾನಿಕ ದಾಳಿ:** ಇಸ್ರೇಲ್ ದೇಶ ಒಂದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಪಾಕಿಸ್ತಾನವು ಕತಾರ್ ಅಲ್ಲ, ನಮ್ಮ ಅಧಿಕಾರಿಗಳ ಮೇಲೆ, ರಾಜತಾಂತ್ರಿಕ ಕಚೇರಿಗೆ ಯಾವುದೇ ಹಾನಿ ಸಂಭವಿಸಿದ್ದೇ ಆದಲ್ಲಿ, ನಾವು ಅವರಿಗೆ ಸರಿಯಾದ ಪಾಠವನ್ನು ಕಲಿಸುತ್ತೇವೆ. ಇದಕ್ಕೆ ವಿಶ್ವದ ಯಾವುದೇ ದೇಶ ಹೊರತಾಗಿಲ್ಲ ಎಂದು ಪಾಕಿಸ್ತಾನ ಸ್ಟ್ರಾಟೆಜಿಕ್ ಪೋರಂ ಹೇಳಿಕೆಯನ್ನು ನೀಡಿದೆ.

ಇಸ್ರೇಲ್ ಮತ್ತು ಅಮೆರಿಕವು ಜಂಟಿಯಾಗಿ ಟೆಹ್ರಾನ್‌ನ ಮಧ್ಯ ಭಾಗದಲ್ಲಿ ವೈಮಾನಿಕ ದಾಳಿಯನ್ನು ನಡೆಸಿದ್ದವು.ಇದರ ಜೊತೆಗೆ, ಪಾಕಿಸ್ತಾನದ ರಾಯಭಾರಿ ನಿವಾಸ ಮತ್ತು ಟೆಹ್ರಾನ್‌ನಲ್ಲಿರುವ ಪಾಕಿಸ್ತಾನಿ ರಾಯಭಾರ ಕಚೇರಿಯ ಸಮೀಪವಿರುವ ಪ್ರದೇಶಗಳ ಮೇಲೂ ದಾಳಿ ನಡೆದಿತ್ತು.

ಈ ದಾಳಿಯಲ್ಲಿ, ಸುತ್ತಮುತ್ತಲಿನ ಹಲವು ಕಟ್ಟಡಗಳು ನಾಶವಾಗಿದ್ದವು. ಆದರೆ, ಪಾಕ್ ರಾಯಭಾರ ಕಚೇರಿ ಅಥವಾ ಪಾಕಿಸ್ತಾನದ ರಾಜತಾಂತ್ರಿಕ ಸಿಬ್ಬಂದಿಗಳಿಗೆ ಯಾವುದೇ ಹಾನಿಯಾಗಿಲ್ಲ. ಈ ಹಿನ್ನಲೆಯಲ್ಲಿ, ಪಾಕಿಸ್ತಾನವು ಇಸ್ರೇಲ್ ದೇಶಕ್ಕೆ ಮಾತ್ರ ಎಚ್ಚರಿಸಿದೆ, ಅಮೆರಿಕಗೆ ವಾರ್ನ್ ಮಾಡಲು ಹೋಗಲಿಲ್ಲ. ಪಾಕಿಸ್ತಾನದ ಎಚ್ಚರಿಕೆಗೆ ಇಸ್ರೇಲ್, ಪ್ರತಿಕ್ರಿಯೆ ಇನ್ನೂ ಬಂದಿಲ್ಲ.

**ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗಡುವು ವಿಸ್ತರಣೆ:** ಇರಾನ್ ದೇಶದ ಮನವಿಯ ಮೇರೆಗೆ ಗಡುವನ್ನು ಮತ್ತೆ ವಿಸ್ತರಿಸಲಾಗಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಇರಾನ್ ಜೊತೆಗೆ ಮಾತುಕತೆಗಳು ನಡೆಯುತ್ತಿವೆ, ನಕಲಿ ಸುದ್ದಿಗಳನ್ನು ನಂಬಲು ಹೋಗಬೇಡಿ. ಕೆಲವರು ತಪ್ಪು ಹೇಳಿಕೆಯನ್ನು ನೀಡುತ್ತಿದ್ದಾರೆ ಆದರೂ ಚರ್ಚೆಗಳು ಸಕಾರಾತ್ಮಕವಾಗಿ ಸಾಗುತ್ತಿದೆ. ಅಮೆರಿಕದ ಗಡುವು ಏಪ್ರಿಲ್ ಆರರವರೆಗೆ ಮುಂದುವರಿದಿದೆ. ಆದರೆ, ಯುಎಸ್ ಹೇಳಿಕೆಯನ್ನು ಇರಾನ್ ನಿರಾಕರಿಸಿದೆ. ಹೊರ್ಮುಜ್ ಜಲಸಂಧಿ ಮಿತ್ರರಾಷ್ಟ್ರಕ್ಕೆ ಮುಕ್ತವಾಗಿದೆ ಎಂದು ಇರಾನ್ ಹೇಳಿದೆ.



**ಪಾಕಿಸ್ತಾನದ ದೂತಾವಾಸ ಕಚೇರಿಯ ಬಳಿ, ಇಸ್ರೇಲ್ ದಾಳಿ**

- ಭಾರೀ ಕುತೂಹಲಕ್ಕೆ ಕಾರಣವಾದ ಇಸ್ರೇಲ್ ದೇಶಕ್ಕೆ ಪಾಕಿಸ್ತಾನ ಕೊಟ್ಟ ಎಚ್ಚರಿಕೆ - ಏನಾಯಿತು?
- ಇಸ್ರೇಲ್‌ಗೆ ಪಾಕಿಸ್ತಾನದ ಖಡಕ್ ಎಚ್ಚರಿಕೆ, ನಮ್ಮನೇನು ಕತಾರ್ ಅನ್ಕೊಂಡ್ರಾ ಎಂದು ಎಚ್ಚರಿಕೆ
- ಪಾಕಿಸ್ತಾನದ ದೂತಾವಾಸ ಕಚೇರಿಯ ಬಳಿ, ಇಸ್ರೇಲ್ ದಾಳಿ, ಪಾಕಿಸ್ತಾನದ ಎಚ್ಚರಿಕೆ


# ರೈತರಿಗೆ ಅಗತ್ಯವಿರುವಷ್ಟು ರಸಗೊಬ್ಬರ ಸಂಗ್ರಹ ಲಭ್ಯ

**ನವದೆಹಲಿ:** ಪಶ್ಚಿಮ ಏಷ್ಯಾದ ಯುದ್ಧ ಪರಿಸ್ಥಿತಿಯ ನಡುವೆಯೂ ದೇಶದಲ್ಲಿ ರೈತರಿಗೆ ಅಗತ್ಯವಿರುವಷ್ಟು ರಸಗೊಬ್ಬರ ಸಂಗ್ರಹ ಲಭ್ಯವಿದ್ದು, ಆತಂಕ ಪಡುವ ಅಗತ್ಯವಿಲ್ಲ ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಜೆ.ಪಿ. ನಡ್ಡಾ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಕೇಳಲಾದ ಪೂರಕ ಪ್ರಶ್ನೆಗೆ ಉತ್ತರಿಸಿದ ಅವರು, ಪಶ್ಚಿಮ ಏಷ್ಯಾ ಯುದ್ಧದ ಹಿನ್ನೆಲೆ ರಸಗೊಬ್ಬರ ಲಭ್ಯತೆ ಕುರಿತು ಸರ್ಕಾರ ಕೈಗೊಂಡ ಕ್ರಮಗಳ ಬಗ್ಗೆ ವಿವರಿಸಿದರು. ರಾಜ್ಯಗಳ ಕೃಷಿ ಸಚಿವರೊಂದಿಗೆ ಮಾತುಕತೆ ನಡೆಸಿ ರಸಗೊಬ್ಬರ ಸಂಗ್ರಹ ಸ್ಥಿತಿಯ ಕುರಿತು ಮಾಹಿತಿ ನೀಡಿದ್ದೇನೆ ಎಂದು ಹೇಳಿದರು. ರೈತರಿಗೆ ಬೇಕಾದಾಗ ರಸಗೊಬ್ಬರ ಲಭ್ಯವಾಗುವಂತೆ ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಂಡಿದೆ. ದೇಶದಲ್ಲಿ ಸಾಕಷ್ಟು ಸಂಗ್ರಹವಿದ್ದು ಯಾವುದೇ ರೀತಿಯ ಭಯ ಅಥವಾ ಆತಂಕಕ್ಕೆ ಕಾರಣವಿಲ್ಲ ಎಂದು ನಡ್ಡಾ ಭರವಸೆ ನೀಡಿದ್ದಾರೆ. ಮುಂಗಾರು ಹಂಗಾಮಿಗೆ ಸಂಬಂಧಿಸಿದಂತೆ ರಸಗೊಬ್ಬರ ಆಮದು ಮಾಡಿಕೊಳ್ಳಲು ಕೇಂದ್ರ ಸರ್ಕಾರ ಹೊಸ ಮಾರುಕಟ್ಟೆಗಳ ನಿಗದಿ ಮಾಡಿಕೊಂಡಿದೆಯೇ ಎಂದು ಕಾಂಗ್ರೆಸ್ ಸದಸ್ಯ ಮನೀಷ್ ತಿವಾರಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಮುಂಗಾರಿಗೆ ಬೇಕಾದಷ್ಟು ಸಂಗ್ರಹ ಈಗಾಗಲೇ ಲಭ್ಯವಿದೆ ಎಂದಿದ್ದಾರೆ.

ಇದಲ್ಲದೆ, ರಸಗೊಬ್ಬರ ಉತ್ಪಾದನೆಗೆ ಅಗತ್ಯವಾದ ಕಚ್ಚಾ ವಸ್ತುಗಳಿಗಾಗಿ ಹೊಸ ಮಾರುಕಟ್ಟೆಗಳು ಹಾಗೂ ಪರ್ಯಾಯ ಮೂಲಗಳನ್ನು ಹುಡುಕುವ ದಿಕ್ಕಿನಲ್ಲಿ ಸರ್ಕಾರ ಕಾರ್ಯತಂತ್ರ ರೂಪಿಸಿದೆ ಎಂದು ತಿಳಿಸಿದ್ದಾರೆ.

ಹಡಗು ಸಂಚಾರ ವ್ಯತ್ಯಯ ಮತ್ತು ಪಶ್ಚಿಮ ಏಷ್ಯಾ ಯುದ್ಧದ ಪರಿಣಾಮ ರಸಗೊಬ್ಬರ ಆಮದು ಕುರಿತು ಆತಂಕಗಳು ವ್ಯಕ್ತವಾಗಿವೆ. ಭಾರತವು ರಸಗೊಬ್ಬರಗಳ ಪ್ರಮುಖ ಆಮದುದಾರ ರಾಷ್ಟ್ರಗಳಲ್ಲಿ ಒಂದಾಗಿದೆ.



## ಹಾರ್ಮುಜ್ ಮೂಲಕ ಹೋದ ತೈಲ ಟ್ಯಾಂಕರ್‌ಗೆ ಬೆಂಕಿ

**ಟೆಹ್ರಾನ್:** ಭಾರತ ಸೇರಿದಂತೆ ಇರಾನ್‌ನ 5 ಸ್ನೇಹಿತ ರಾಷ್ಟ್ರಗಳಿಗೆ ಹಾರ್ಮುಜ್ ಜಲಸಂಧಿಯನ್ನು ಪ್ರವೇಶಿಸಲು ಇರಾನ್ ಅನುಮತಿ ನೀಡಿದೆ. ಚೀನಾ, ರಷ್ಯಾ, ಪಾಕಿಸ್ತಾನ, ಇರಾಕ್ ಮತ್ತು ಭಾರತದ ಎರಡು ಹಡಗುಗಳು ಕೆಲವು ರಾತ್ರಿಗಳ ಹಿಂದೆ ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋಗಿವೆ. ಅಮೆರಿಕ, ಇಸ್ರೇಲ್ , ಕೆಲವು ಗಲ್ಫ್ ರಾಷ್ಟ್ರಗಳ ಹಡಗುಗಳಿಗೆ ಹಾರ್ಮುಜ್ ಜಲಸಂಧಿಯ ಮೂಲಕ ಸಾಗಲು ಅನುಮತಿ ನೀಡಲಾಗುವುದಿಲ್ಲ. ಅನುಮತಿ ಇಲ್ಲದೆ ಹಾರ್ಮುಜ್ ಮೂಲಕ ಹಾದುಹೋದ ಹಡಗಿಗೆ ಬೆಂಕಿ ಹಚ್ಚಿರುವ ಘಟನೆ ನಡೆದಿದೆ.



ಹಾದುಹೋದ ಹಡಗಿಗೆ ಬೆಂಕಿ ಹಚ್ಚಿರುವ ಘಟನೆ ನಡೆದಿದೆ.

# ಇರಾನ್ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಸಲಿಂಗಕಾಮಿ: ಟ್ರಂಪ್

- ಇರಾನ್ ಮೇಲೆ ಸೇನಾ ಕಾರ್ಯಾಚರಣೆ, ಆರ್ಥಿಕ ದಿಗ್ಬಂಧನಗಳ ಮೂಲಕ ನಿರಂತರವಾಗಿ ಒತ್ತಡ ಹೇರುತ್ತಿರುವ ಅಮೆರಿಕ

**ವಾಷಿಂಗ್ಟನ್ ಡಿಸಿ:** ಅಮೆರಿಕ ಮತ್ತು ಇರಾನ್ ನಡುವಿನ ಯುದ್ಧ ಈಗ ರಣರಂಗದಿಂದ ವೈಯಕ್ತಿಕ ಕೆಸರೆರಚಾಟದ ಹಂತಕ್ಕೆ ತಲುಪಿದೆ. ಕ್ಷಿಪಣಿಗಳಿಗಿಂತಲೂ ಈಗ ವದಂತಿಗಳು, ಸ್ಫೋಟಕ ಹೇಳಿಕೆಗಳೇ ಅಮೆರಿಕದ ದೊಡ್ಡ ಅಸ್ತ್ರವಾಗಿ ಮಾರ್ಪಟ್ಟಿವೆ. ಯುದ್ಧಭೂಮಿಯಲ್ಲಿ ಇರಾನ್ ಸರ್ವೋಚ್ಚ ನಾಯಕ ಮೊಜ್ತಬಾ ಅಲಿ ಖಮೇನಿ ಅವರನ್ನೂ ಇನ್ನೂ ಸೋಲಿಸಲಾಗದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಈಗ ಇರಾನ್ ಆಡಳಿತದ ಚುಕ್ಕಾಣಿ ಹಿಡಿದ ವ್ಯಕ್ತಿಯ ವಿರುದ್ಧ ವೈಯಕ್ತಿಕ ದಾಳಿಗಳನ್ನು ಆರಂಭಿಸಿದ್ದಾರೆ.

ಇರಾನ್ ಮೇಲೆ ಸೇನಾ ಕಾರ್ಯಾಚರಣೆ, ಆರ್ಥಿಕ ದಿಗ್ಬಂಧನಗಳ ಮೂಲಕ ನಿರಂತರವಾಗಿ ಒತ್ತಡ ಹೇರುತ್ತಿರುವ ಅಮೆರಿಕ, ಇದೀಗ ಇರಾನ್‌ನ ಸರ್ವೋಚ್ಚ ನಾಯಕನ ಇಮೇಜ್ ಡ್ಯಾಮೇಜ್ ಮಾಡುವ ತಂತ್ರಕ್ಕೆ ಕೈಹಾಕಿದಂತಿದೆ. ಅಮೆರಿಕದ ಗುಪ್ತಚರ ಸಂಸ್ಥೆ ಸಿಐಎ ಇತ್ತೀಚೆಗೆ ಶ್ವೇತಭವನದಲ್ಲಿ ಡೊನಾಲ್ಡ್ ಟ್ರಂಪ್ ಅವರಿಗೆ ಒಂದು ಮಹತ್ವದ ಬ್ರೀಫಿಂಗ್ ನೀಡಿತ್ತು. ಆ ಬ್ರೀಫಿಂಗ್‌ನಲ್ಲಿ, ಇರಾನ್‌ನ ಹೊಸ ಸುಪ್ರೀಂ ಲೀಡರ್ ಮೊಜ್ತಬಾ ಖಮೇನಿ ಸಲಿಂಗಕಾಮಿ ಎಂದು ಅದು ಪ್ರತಿಪಾದಿಸಿದೆ.

ಈ ಕುರಿತು ಫಾಕ್ಸ್ ನ್ಯೂಸ್ ಜೊತೆ ಮಾತನಾಡುತ್ತಾ ಡೊನಾಲ್ಡ್ ಟ್ರಂಪ್ ಅವರು, ಇರಾನ್ ಸರ್ವೋಚ್ಚ ನಾಯಕ ಮೊಜ್ತಬಾ ಅಲಿ ಖಮೇನಿ ಓರ್ವ ಸಲಿಂಗಕಾಮಿ ಎಂದು ಸಿಐಎ ನನಗೆ ತಿಳಿಸಿದೆ ಎಂದು ಸ್ಫೋಟಕ ಹೇಳಿಕೆ ನೀಡಿದ್ದಾರೆ. ಆದರೆ ಅಮೆರಿಕ ಅಧ್ಯಕ್ಷರ ಈ ಹೇಳಿಕೆ ಅನೇಕರ ಕಣ್ಣು ಕೆಂಪಾಗಿಸಿದೆ. ಈ ಹಿಂದೆ ಮೊಜ್ತಬಾ ಸಾವನ್ನಪ್ಪಿದ್ದಾರೆ ಎಂದು ಟ್ರಂಪ್ ಪ್ರತಿಪಾದನೆ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಈ ಬಗ್ಗೆ ವರದಿ ಪ್ರಕಟಿಸಿರುವ ನ್ಯೂಯಾರ್ಕ್ ಪೋಸ್ಟ್, ಸಿಐಎ ವರಿದ ನೋಡಿ ಆಶ್ಚರ್ಯಚಕಿತರಾದ ಡೊನಾಲ್ಡ್ ಟ್ರಂಪ್, ಸುದೀರ್ಘ ಅವಧಿಗೆ ನಗುತ್ತಲೇ ಇದ್ದರು ಎಂದಜ ಹೇಳಿದೆ. ಆದರೆ ಮೊಜ್ತಬಾ ಖಮೇನಿ ಸಲಿಂಗಕಾಮಿ ಎಂಬ ಅಮೆರಿಕದ ಪ್ರತಿಪಾದನೆಗೆ ಇರಾನ್ ಇದುವರೆಗೂ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಆದರೆ ವೈಯಕ್ತಿಕ ತೇಜೋವಧೆ ಸಲ್ಲ ಎಂದು ಇರಾನ್‌ನ ಕೆಲವು ಅಧಿಕಾರಿಗಳು ಅಮೆರಿಕಕ್ಕೆ ಖಡಕ್ ಎಚ್ಚರಿಕೆ ಕೊಟ್ಟಿದ್ದಾರೆ ಎನ್ನಲಾಗಿದೆ. ಕಳೆದ ಫೆ.28ರಂದು ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಜಂಟಿ ಸೇನಾ ಕಾರ್ಯಾಚರಣೆಯಲ್ಲಿ ಇರಾನ್ ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಹತ್ಯೆಗೀಡಾಗಿದ್ದರು. ಈ ಜಂಟಿ ದಾಳಿಯಲ್ಲಿ ಮೊಜ್ತಬಾ ಖಮೇನಿ ಕಾಲು ಕಟ್ ಆಗಿದೆ ಎಂದು ವರದಿ ಆಗಿತ್ತು. ಆದರೆ ಆ ಬಳಿಕ ಇರಾನ್ ಮೊಜ್ತಬಾ ಸುರಕ್ಷಿತವಾಗಿರುವ ಬಗ್ಗೆ ಸ್ಪಷ್ಟನೆ ನೀಡಿತ್ತು.

ಮೊಜ್ತಬಾ ಖಮೇನಿ ಅವರ ಖಾಸಗಿ ಜೀವನದ ಬಗ್ಗೆ ಗುಸುಗುಸು ಕೇಳಿಬರುತ್ತಿರುವುದು ಇದೇ ಮೊದಲೇನಲ್ಲ. 2008ರಲ್ಲಿ ಅಮೆರಿಕದ ಡಿಪ್ಲೊಮ್ಯಾಟಿಕ್ ಕೇಬಲ್ ಮಾಹಿತಿಯೊಂದನ್ನು ವಿಕಿಲೀಕ್ಸ್ ಬಹಿರಂಗಪಡಿಸಿತ್ತು. ಅದರಲ್ಲಿ ಮೊಜ್ತಬಾ ಖಮೇನಿ ಅವರ ಮದುವೆ ಮತ್ತು ಅವರ ಆರೋಗ್ಯದ ಬಗ್ಗೆ ಕೆಲವು ಮಹತ್ವದ ವಿಚಾರಗಳನ್ನು ಉಲ್ಲೇಖಿಸಲಾಗಿತ್ತು. ಅಮೆರಿಕದ ಸ್ಟೇಟ್ ಡಿಪಾರ್ಟ್‌ಮೆಂಟ್ ಫೈಲ್ ವರದಿಯಲ್ಲಿ,

ಮೊಜ್ತಬಾ ಖಮೇನಿ ತಮ್ಮ ನಪುಂಸಕತೆಯ ಕಾರಣದಿಂದಾಗಿ, ತಡವಾಗಿ ಅಂದರೆ ತಮ್ಮ 30ನೇ ವಯಸ್ಸಿನಲ್ಲಿ ಮದುವೆಯಾದರು ಎಂದು ಉಲ್ಲೇಖಿಸಲಾಗಿದೆ. ಅಮೆರಿಕ-ಇಸ್ರೇಲ್ ದಾಳಿಯಲ್ಲಿ ಹತ್ಯೆಗೀಡಾದ ವದಂತಿಗಳನ್ನು ದೂರ ಮಾಡಲೆಂದೇ, ಇರಾನ್‌ನ ಸರ್ಕಾರಿ ಸ್ವಾಮ್ಯದ ಮಾಧ್ಯಮಗಳು ಮೊಜ್ತಬಾ ಅಲಿ ಖಮೇನಿ ಮೊದಲ ಸಂದೇಶ ಪ್ರಸಾರ ಮಾಡಿದ್ದವು. ಇದರಲ್ಲಿ ಮೊಜ್ತಬ್ತ ಅಮೆರಿಕ ಮತ್ತು ಇಸ್ರೇಸ್ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದರು.

## ಶಿಕ್ಷಕನೊಂದಿಗೆ ಸಂಬಂಧ?

**ಮೊಜ್ತಬಾ ಖಮೇನಿ ಅವರ ಖಾಸಗಿ ಜೀವನದ ಬಗ್ಗೆ ಹಲವು ಸ್ಫೋಟಕ ಮಾಹಿತಿಗಳನ್ನು ತನ್ನ ವರದಿಯಲ್ಲಿ ಸಿಐಎ ಉಲ್ಲೇಖಿಸಿದೆ. ಬಾಲ್ಯದಲ್ಲಿ ಮೊಜ್ತಬಾ ಖಮೇನಿ ತಮ್ಮ ಶಿಕ್ಷಕನೊಂದಿಗೆ (ಟ್ಯೂಟರ್) ದೀರ್ಘಕಾಲದ ಲೈಂಗಿಕ ಸಂಬಂಧ ಹೊಂದಿದ್ದರು. ಅಷ್ಟೇ ಅಲ್ಲದೆ ತಮ್ಮ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಕೆಲವು ಪುರುಷರ ಮೇಲೆ ಆಕ್ರಮಣಕಾರಿ ಲೈಂಗಿಕ ವರ್ತನೆ ತೋರುತ್ತಿದ್ದರು ಎಂದು ಅಮೆರಿಕದ ಗುಪ್ತಚರ ಇಲಾಖೆ ಪ್ರತಿಪಾದಿಸಿದೆ. ಆದರೆ ಈ ಪ್ರತಿಪಾದನೆಗೆ ಆಧಾರವೇನು ಎಂಬುದನ್ನು ಸಿಐಎ ಸ್ಪಷ್ಟಪಡಿಸಿಲ್ಲ.**




- ಇರಾನ್ ಸರ್ವೋಚ್ಚ ನಾಯಕನ ವಿರುದ್ಧ ವೈಯಕ್ತಿಕ ಟೀಕೆಗೆ ಇಳಿದ ಅಮೆರಿಕ ಅಧ್ಯಕ್ಷ.
- ಮೊಜ್ತಬಾ ಅಲಿ ಖಮೇನಿ ಸಲಿಂಗಿ ಎಂದು ಆರೋಪಿಸಿದ ಡೊನಾಲ್ಡ್ ಟ್ರಂಪ್.
- ಮೊಜ್ತಬಾ ಖಮೇನಿ ಕುರಿತ ಸಿಐಎ ವರದಿಯನ್ನು ಉಲ್ಲೇಖಿಸಿದ ಯುಎಸ್ ಅಧ್ಯಕ್ಷ.



## ಅಮೆರಿಕಕ್ಕೆ ಇದಕ್ಕಿಂತ ದೊಡ್ಡ ಅಸ್ತ್ರ ಬೇರೊಂದಿಲ್ಲ

**ಸಿಐಎ ವರದಿಯಿಂದ ಇರಾನ್ ಆಡಳಿತ ತೀವ್ರ ಮುಜುಗರದ ಸನ್ನಿವೇಶ ಎದುರಿಸುತ್ತಿದೆ. ತನ್ನ ದೇಶದ ಜನರಿಗೆ ಕಠಿಣ ಇಸ್ಲಾಮಿಕ್ ಕಾನೂನುಗಳನ್ನು ಹೇರುವ, ಪಾಶ್ಚಿಮಾತ್ಯ ಸಂಸ್ಕೃತಿಯನ್ನು ವಿರೋಧಿಸುವ ಸುಪ್ರೀಂ ಲೀಡರ್, ತಮ್ಮ ವೈಯಕ್ತಿಕ ಜೀವನದಲ್ಲಿ ಸಲಿಂಗಕಾಮಿಯಾಗಿದ್ದಾರಾ ಎಂಬ ಪ್ರಶ್ನೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಶತ್ರು ದೇಶದ ನಾಯಕನ ವ್ಯಕ್ತಿತ್ವವನ್ನು ನಾಶಪಡಿಸಲು ಅಮೆರಿಕಕ್ಕೆ ಇದಕ್ಕಿಂತ ದೊಡ್ಡ ಅಸ್ತ್ರ ಬೇರೊಂದಿಲ್ಲ ಎಂಬ ಮಾತುಗಳು ಕೇಳಿಬರುತ್ತಿವೆ.**



# ಪೆದ್ದಿ ಸಿನಿಮಾದಲ್ಲಿ ಶಿವರಾಜ್

ರಾಮ್ ಚರಣ್ ಹುಟ್ಟುಹಬ್ಬ. ಅವರ ನಟನೆಯ ಹೊಸ ಸಿನಿಮಾ 'ಪೆದ್ದಿ'ಯ ಟೀಸರ್ ಬಿಡುಗಡೆ ಮಾಡಲಾಗಿದೆ. ಈ ಹಿಂದೆ ಬಿಡುಗಡೆ ಆಗಿದ್ದ ಹಾಡು, ಟೀಸರ್ ನೋಡಿ, 'ಪೆದ್ದಿ' ಸಿನಿಮಾನಲ್ಲಿ ರಾಮ್ ಚರಣ್ ಅವರದ್ದು ಹಳ್ಳಿ ಕ್ರಿಕೆಟಿಗನೊಬ್ಬನ ಪಾತ್ರ ಎಂದುಕೊಂಡಿದ್ದರು ಅಭಿಮಾನಿಗಳು. ಆದರೆ ಈಗ ಬಿಡುಗಡೆ ಆಗಿರುವ ಟೀಸರ್‌ನಲ್ಲಿ ರಾಮ್ ಚರಣ್ ಕುಸ್ತಿ ಪಟುವಾಗಿ ಕಾಣಿಸಿಕೊಂಡಿದ್ದಾರೆ. ಕುಸ್ತಿ ಪಟುವಿನಂತೆ ಲಂಗೋಟಿ ಧರಿಸಿ, ಕಟ್ಟುಮಸ್ತಾದ ದೇಹ ಪ್ರದರ್ಶಿಸುತ್ತಾ ಅಖಾಡದಲ್ಲಿ ಕುಸ್ತಿ ಆಡುತ್ತಿದ್ದಾರೆ.

'ಪೆದ್ದಿ' ಸಿನಿಮಾನಲ್ಲಿ ಶಿವರಾಜ್ ಕುಮಾರ್ ಸಹ ನಟಿಸುತ್ತಿದ್ದಾರೆ. ಶಿವರಾಜ್ ಕುಮಾರ್ ಅವರ ಪಾತ್ರದ ಪೋಸ್ಟರ್ ಅನ್ನು ಈ ಹಿಂದೆ ಬಿಡುಗಡೆ ಮಾಡಲಾಗಿತ್ತು. ಶಿವಣ್ಣನ ಪಾತ್ರದ ಹೆಸರು ಗೌರನಾಯ್ಡು ಎಂದಿದೆ. ಆದರೆ ಶಿವಣ್ಣನ ಪಾತ್ರ ಎಂಥಹದ್ದು ಎಂಬ ವಿಷಯ ಬಹಿರಂಗವಾಗಿರಲಿಲ್ಲ. ಇದೀಗ ಸಿನಿಮಾದ ಹೊಸ ಟೀಸರ್ ಬಿಡುಗಡೆ ಆದ ಬಳಿಕ ಶಿವಣ್ಣನ ಪಾತ್ರದ ಬಗ್ಗೆ ಸುಳಿವು ದೊರೆತಿದೆ. ಶಿವರಾಜ್ ಕುಮಾರ್ ಅವರು 'ಪೆದ್ದಿ' ಸಿನಿಮಾನಲ್ಲಿ ರಾಮ್ ಚರಣ್ ಪಾತ್ರದ ಗುರುವಿನ ಪಾತ್ರದಲ್ಲಿ ನಟಿಸಿದ್ದಾರೆ.

ಇಂದು ಬಿಡುಗಡೆ ಆಗಿರುವ ಟೀಸರ್‌ನಲ್ಲಿ ರಾಮ್ ಚರಣ್ ಕುಸ್ತಿ ಪಟುವಿನ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ರಾಮ್ ಚರಣ್‌ಗೆ ಕುಸ್ತಿ ಹೇಳಿಕೊಡುವ ಗುರುವಾಗಿ ಶಿವರಾಜ್ ಕುಮಾರ್ ನಟಿಸಿದ್ದಾರೆ.

'ಪೆದ್ದಿ' ಸಿನಿಮಾದ ಟೀಸರ್ ಕನ್ನಡದಲ್ಲಿಯೂ ಬಿಡುಗಡೆ ಆಗಿದ್ದು, ಕನ್ನಡ ಟೀಸರ್‌ನಲ್ಲಿ ಖುದ್ದು ಶಿವರಾಜ್ ಕುಮಾರ್ ಅವರೇ ಧ್ವನಿ ನೀಡಿದ್ದಾರೆ. 'ಕುಸ್ತಿ ಅಂದರೆ ಬ್ಯಾಟಿನಿಂದ ಬಾಲ್‌ನ ಹೊಡೆಯೋ ಆಟ ಅಲ್ಲ' ಎಂದು ರಾಮ್ ಚರಣ್‌ಗೆ ಕುಸ್ತಿಯ ಮಹತ್ವ ಹೇಳುವ ಸಂಭಾಷಣೆಯನ್ನು ಟೀಸರ್‌ನಲ್ಲಿ ಶಿವಣ್ಣ ಹೇಳಿದ್ದಾರೆ. 'ಪೆದ್ದಿ' ಸಿನಿಮಾದ ನಿರ್ದೇಶಕ ಬುಚ್ಚಿಬಾಬು ಸನಾ ಅವರು ಪಾತ್ರಕ್ಕೆ ಶಿವರಾಜ್ ಕುಮಾರ್ ಅವರೇ ಬೇಕೆಂದು ಕಾದು ಅವರಿಂದ ನಟನೆ ಮಾಡಿಸಿಕೊಂಡಿದ್ದಾರೆ. ಸಿನಿಮಾದ ಮುಹೂರ್ತ ನಡೆಯುವ ಮುಂಚೆಯೇ ನಿರ್ದೇಶಕ ಬುಚ್ಚಿಬಾಬು ಸನಾ ಶಿವಣ್ಣನವರನ್ನು ಭೇಟಿಯಾಗಿ ಕತೆ ವಿವರಿಸಿದ್ದರು. ಆ ಬಳಿಕ ಶಿವಣ್ಣ ಆಪರೇಷನ್‌ಗಾಗಿ ಅಮೆರಿಕಕ್ಕೆ ತೆರಳಿದರು. ಕೆಲ ತಿಂಗಳ ಕಾಲ ವಿಶ್ರಾಂತಿ ತೆಗೆದುಕೊಂಡರು. ಅನಾರೋಗ್ಯದಿಂದ ದೇಹತೂಕವನ್ನೂ ಕಳೆದುಕೊಂಡರು. ಅಷ್ಟೆಲ್ಲ ಆದರೂ ಸಹ ಬುಚ್ಚಿಬಾಬು ಸನಾ, ಆ ಪಾತ್ರಕ್ಕೆ ಶಿವಣ್ಣನೇ ಇರಬೇಕೆಂದು ಕಾದು, ಶಿವಣ್ಣನ ಮನೆಗೆ ಬಂದು ಲುಕ್ ಟೆಸ್ಟ್ ಸಹ ಮಾಡಿದ್ದರು. ಕೊನೆಗೆ ಶಿವರಾಜ್ ಕುಮಾರ್ ಅವರು ಗೌರನಾಯ್ಡು ಪಾತ್ರಕ್ಕೆ ಬಣ್ಣ ಹಚ್ಚಿದರು. 'ಪೆದ್ದಿ' ಸಿನಿಮಾನಲ್ಲಿ ರಾಮ್ ಚರಣ್, ಶಿವರಾಜ್ ಕುಮಾರ್ ಜೊತೆಗೆ ಜಾನ್ವಿ ಕಪೂರ್ ಸಹ ನಟಿಸಿದ್ದಾರೆ.





# ರಾಜ್ ಬಿ ಶೆಟ್ಟಿಯಿಂದಲೂ ದೂರಾದರೇ ರಿಷಬ್

'ಕಾಂತಾರ: ಚಾಪ್ಟರ್ 2' ಸಿನಿಮಾದ ಬಳಿಕ ರಿಷಬ್ ಶೆಟ್ಟಿ ಹಾಗೂ ಹೊಂಬಾಳೆ ನಡುವೆ ವೈಮನಸ್ಯ ಮೂಡಿತೇ ಎಂಬ ಅನುಮಾನ ಶುರುವಾಗಿತ್ತು. ಅದಕ್ಕೆ ಮುಖ್ಯ ಕಾರಣವಾಗಿದ್ದು, ರಿಷಬ್ ಅವರು ಕೆಲ ವಾರದ ಹಿಂದಷ್ಟೆ ಹೊಂಬಾಳೆ ಫಿಲಮ್ಸ್ ಅನ್ನು ಸಾಮಾಜಿಕ ಜಾಲತಾಣದಲ್ಲಿ ಅನ್‌ಫಾಲೋ ಮಾಡಿದ್ದರು. ಇದು ದೊಡ್ಡ ಸುದ್ದಿಯೇ ಆಯ್ತು.

ಇದೀಗ ರಿಷಬ್ ಶೆಟ್ಟಿ, ತಮ್ಮ ಗೆಳೆಯ ರಾಜ್ ಬಿ ಶೆಟ್ಟಿ ಮತ್ತು 'ಕಾಂತಾರ' ನಾಯಕಿ ರುಕ್ಮಿಣಿ ವಸಂತ್ ಅವರನ್ನೂ ಅನ್‌ಫಾಲೋ ಮಾಡಿದ್ದಾರೆ ಎನ್ನಲಾಗುತ್ತಿದೆ.

ಇನ್‌ಸ್ಟಾಗ್ರಾಂನಲ್ಲಿ ರಿಷಬ್ ಶೆಟ್ಟಿ ಅವರು 140ಕ್ಕೂ ಹೆಚ್ಚು ಮಂದಿ ಸಿನಿಮಾ ಸೆಲೆಬ್ರಿಟಿಗಳು, ಕೆಲವು ರಾಜಕಾರಣಿಗಳನ್ನು ಫಾಲೋ ಮಾಡುತ್ತಾರೆ. ರಕ್ಷಿತ್ ಶೆಟ್ಟಿ, ಪ್ರಮೋದ್ ಶೆಟ್ಟಿ, ಜೆಪಿ ತುಮ್ಮಿನಾಡ್ ಇನ್ನೂ ಹಲವರನ್ನು ರಿಷಬ್ ಶೆಟ್ಟಿ ಫಾಲೋ ಮಾಡುತ್ತಾರೆ. ಆದರೆ ಅವರು ಫಾಲೋ ಮಾಡುವವರ ಪಟ್ಟಿಯಲ್ಲಿ ರಾಜ್ ಬಿ ಶೆಟ್ಟಿ ಅವರ ಹೆಸರಿಲ್ಲ. ರಿಷಬ್ ಶೆಟ್ಟಿ ಅವರು ರಾಜ್ ಬಿ ಶೆಟ್ಟಿ ಅವರನ್ನು ಅನ್‌ಫಾಲೋ ಮಾಡಿದ್ದಾರೆ ಎನ್ನಲಾಗುತ್ತಿದೆ. ಅಂತೆಯೇ 'ಕಾಂತಾರ: ಚಾಪ್ಟರ್ 1' ಸಿನಿಮಾದ ನಾಯಕಿ ರುಕ್ಮಿಣಿ ವಸಂತ್ ಅವರನ್ನೂ ಫಾಲೋ ಮಾಡುತ್ತಿಲ್ಲ ಅಥವಾ ರಿಷಬ್ ಅವರು ರುಕ್ಮಿಣಿ ವಸಂತ್ ಅವರನ್ನು ಅನ್‌ಫಾಲೋ ಮಾಡಿದ್ದಾರೆ. ರಿಷಬ್ ಶೆಟ್ಟಿ ಅವರ ಸಿನಿಮಾ ಇನ್ನಿತರೆ ವಿಷಯಗಳಲ್ಲಿ ಜೊತೆಯಾಗಿಯೇ ಇರುವ ಹಾಗೂ ಸಾಮಾಜಿಕ ಜಾಲತಾಣದಲ್ಲಿ ಬಹಳ ಸಕ್ರಿಯವಾಗಿರುವ ಪ್ರಗತಿ ಶೆಟ್ಟಿ ಅವರೂ ಸಹ ರಾಜ್ ಬಿ ಶೆಟ್ಟಿ ಅವರನ್ನು ಅನ್‌ಫಾಲೋ ಮಾಡಿದಂತಿದೆ. ಆದರೆ ಪ್ರಗತಿ ಶೆಟ್ಟಿ ಅವರು ಈಗಲೂ ರುಕ್ಮಿಣಿ ವಸಂತ್ ಅವರನ್ನು ಇನ್‌ಸ್ಟಾಗ್ರಾಂನಲ್ಲಿ ಫಾಲೋ ಮಾಡುತ್ತಿದ್ದಾರೆ. ಪ್ರಗತಿ ಶೆಟ್ಟಿ ಅವರೂ ಸಹ ಹೊಂಬಾಳೆಯನ್ನು ಅನ್‌ಫಾಲೋ ಮಾಡಿದ್ದಾರೆ.

ರಾಜ್ ಬಿ ಶೆಟ್ಟಿ ಅವರು 'ಕಾಂತಾರ ಚಾಪ್ಟರ್ 1' ಸಿನಿಮಾದ ಯಾವೊಂದು ಅಪ್‌ಡೇಟ್ ಅನ್ನು ಹಂಚಿಕೊಂಡಿರಲಿಲ್ಲ. ಅಲ್ಲದೆ, 'ಕಾಂತಾರ: ಚಾಪ್ಟರ್ 1' ಸಿನಿಮಾಕ್ಕೂ ತಮಗೆ ಸಂಬಂಧವಿಲ್ಲ, ನನಗೆ ಆ ಸಿನಿಮಾಕ್ಕೆ ಕೆಲಸ ಮಾಡುವ ಮನಸ್ಸಿಲ್ಲ' ಎಂದು ಹಿಂದೆ ಸಂದರ್ಶನದಲ್ಲಿ ಹೇಳಿದ್ದರು.

# 'ರಾಮರಸ' ಸಿನಿಮಾದಲ್ಲಿ ಪ್ರಜ್ವಲ್

ಕನ್ನಡ ನಟ ಪ್ರಜ್ವಲ್ ದೇವರಾಜ್ 'ರಾಮರಸ' ಸಿನಿಮಾದಲ್ಲಿ ಗುರುಸಿದ್ಧನ ಪಾತ್ರದಲ್ಲಿ ಗಮನ ಸೆಳೆದಿದ್ದಾರೆ. ರಾಮನವಮಿಯಂದು ವಿನಯ್ ಗುರೂಜಿ ಅನಾವರಣಗೊಳಿಸಿದ ಅವರ ಲುಕ್ ಪೋಸ್ಟರ್ ವೈರಲ್ ಆಗಿದೆ. ಪೋಸ್ಟರ್‌ನಲ್ಲಿ ಪ್ರಜ್ವಲ್ ಉದ್ದನೆಯ ಕೂದಲು, ರುದ್ರಾಕ್ಷಿ ಮಾಲೆ ಮತ್ತು ಕೋಪಭರಿತ ನೋಟದಿಂದ ಮಿಂಚಿದ್ದಾರೆ. ಕನ್ನಡದ ನಟ ಪ್ರಜ್ವಲ್ ದೇವರಾಜ್ ಅವರು ಹಲವು ಸಿನಿಮಾಗಳಲ್ಲಿ ನಟಿಸಿದವರು. ಅವರು ಈಗ ಕಾರ್ತಿಕ್ ಮಹೇಶ್ ನಟನೆಯ 'ರಾಮರಸ' ಸಿನಿಮಾದ ಭಾಗ ಆಗುತ್ತಿದ್ದಾರೆ. ಸಾಕಷ್ಟು ಭಿನ್ನ ಶೈಲಿಯಲ್ಲಿ ಮೂಡಿ ಬರುತ್ತಿರುವ ಈ ಚಿತ್ರದಲ್ಲಿ ಪ್ರಜ್ವಲ್ ಅವರು ಗುರುಸಿದ್ಧನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಈ ಚಿತ್ರದ ಪೋಸ್ಟರ್ ಗಮನ ಸೆಳೆದಿದೆ. ರಾಮನವಮಿ ಪ್ರಯುಕ್ತ 'ರಾಮರಸ' ಚಿತ್ರದಲ್ಲಿನ ಪ್ರಜ್ವಲ್ ದೇವರಾಜ್ ಲುಕ್ ಅನಾವರಣಗೊಂಡಿದೆ. ವಿನಯ್ ಗುರೂಜಿ ಅವರು ಈ ಲುಕ್ ಅನಾವರಣ ಮಾಡಿದರು. ಪೋಸ್ಟರ್ ಅಲ್ಲಿ ಉದ್ದನೆಯ ಕೂದಲು ಬಿಟ್ಟು, ಕತ್ತಲ್ಲಿ ರುದ್ರಾಕ್ಷಿ ಮಾಲೆ ಧರಿಸಿದ್ದಾರೆ ಪ್ರಜ್ವಲ್. ಮುಖದಲ್ಲಿ ಕೋಪ ಮನೆ ಮಾಡಿದೆ. ಹಿಂಭಾಗದಲ್ಲಿ ನಾನಾ ರೀತಿಯ ಕಟ್ಟಡಗಳನ್ನು ಕಾಣಬಹುದು. ಅವರ ಪಾತ್ರದ ಪೋಸ್ಟರ್‌ಗೆ ಎಲ್ಲ ಕಡೆಗಳಿಂದ ಮೆಚ್ಚುಗೆ ಸಿಗುತ್ತಿದೆ.



# ಕೆಲಸಕ್ಕೆ ಮರಳಿದ ನವಜೋಡಿ

ವಿವಾಹದ ಬಳಿಕ ರಶ್ಮಿಕಾ ಮತ್ತು ವಿಜಯ್ ಥಾಯ್ಲೆಂಡ್‌ಗೆ ಹನಿಮೂನ್ ಪ್ರವಾಸಕ್ಕೆ ಹೋಗಿ ಬಂದರು. ಇದೀಗ ಮದುವೆಯಾಗಿ ತಿಂಗಳ ಬಳಿಕ ಇಬ್ಬರೂ ಕೆಲಸಕ್ಕೆ ಮರಳಿದ್ದಾರೆ. ರಶ್ಮಿಕಾ ಮತ್ತು ವಿಜಯ್ ಒಟ್ಟಿಗೆ 'ರಣಬಲಿ' ಸಿನಿಮಾನಲ್ಲಿ ನಟಿಸುತ್ತಿದ್ದು, ಸೆಟ್‌ಗೆ ಒಟ್ಟಿಗೆ ಮರಳಿದ್ದಾರೆ. ನವ ವಧು-ವರರನ್ನು ಆರತಿ ಮಾಡುವ ಮೂಲಕ ಸೆಟ್‌ಗೆ ಸ್ವಾಗತಿಸಿರುವುದು ವಿಶೇಷ. ವಿಜಯ್ ದೇವರಕೊಂಡ ಮತ್ತು ರಶ್ಮಿಕಾ ಮಂದಣ್ಣ ದಂಪತಿ ಕಳೆದ ತಿಂಗಳು ಬಲು ಅದ್ಧೂರಿಯಾಗಿ ವಿವಾಹವಾಗಿದ್ದಾರೆ. ಜೈಪುರದಲ್ಲಿ ನಡೆದ ಇವರ ಮದುವೆ ದೇಶದಾದ್ಯಂತ ಸುದ್ದಿ ಆಗಿತ್ತು, ರಶ್ಮಿಕಾ-ವಿಜಯ್ ಅವರ ಫೋಟೊಗಳು ಸಖತ್ ವೈರಲ್ ಆಗಿದ್ದವು. ಬಳಿಕ ಹೈದರಾಬಾದ್‌ನಲ್ಲಿ ಅದ್ಧೂರಿ ರಿಸೆಪ್ಷನ್ ಸಹ ನಡೆಯಿತು. ವಿವಾಹದ ಬಳಿಕ ಥಾಯ್ಲೆಂಡ್‌ಗೆ ಹನಿಮೂನ್ ಪ್ರವಾಸಕ್ಕೂ ಸಹ ಈ ಜೋಡಿ ಹೋಗಿ ಬಂತು. ಇದೀಗ ಮದುವೆಯಾಗಿ ತಿಂಗಳ ಬಳಿಕ ಇಬ್ಬರೂ ಕೆಲಸಕ್ಕೆ ಮರಳಿದ್ದಾರೆ. ರಶ್ಮಿಕಾ ಮತ್ತು ವಿಜಯ್ ಒಟ್ಟಿಗೆ 'ರಣಬಲಿ' ಸಿನಿಮಾನಲ್ಲಿ ನಟಿಸುತ್ತಿದ್ದು, ಸೆಟ್‌ಗೆ ಒಟ್ಟಿಗೆ ಮರಳಿದ್ದಾರೆ. ನವ ವಧು-ವರರನ್ನು ಆರತಿ ಮಾಡುವ ಮೂಲಕ ಸೆಟ್‌ಗೆ ಸ್ವಾಗತಿಸಿರುವುದು ವಿಶೇಷ. ಮದುವೆಗೆ ಮುಂಚೆ ಈ ಜೋಡಿ 'ರಣಬಲಿ' ಸಿನಿಮಾ ಒಪ್ಪಿಕೊಂಡಿದ್ದರು. ಇದೀಗ ಮದುವೆ ಬಳಿಕ ಸಿನಿಮಾದ ಚಿತ್ರೀಕರಣ ಶುರುವಾಗಿದ್ದು, ಒಟ್ಟಿಗೆ ಸೆಟ್‌ಗೆ ಬಂದಿದ್ದಾರೆ. 'ರಣಬಲಿ' ಒಂದು ಪಿರಿಯಡ್ ಆಕ್ಷನ್ ಡ್ರಾಮಾ ಆಗಿದ್ದು, ರಾಹುಲ್ ಸಂಕೃತ್ಯನ್ ಈ ಸಿನಿಮಾ ನಿರ್ದೇಶಿಸುತ್ತಿದ್ದಾರೆ. ಸಿನಿಮಾದ ಒಂದು ಪೋಸ್ಟರ್ ಈಗಾಗಲೇ ಬಿಡುಗಡೆ ಆಗಿದ್ದು, ಸಖತ್ ಗಮನ ಸೆಳೆದಿತ್ತು. ಮದುವೆ ಬಳಿಕ ಇಬ್ಬರೂ ನಟಿಸುತ್ತಿರುವ ಮೊದಲ ಸಿನಿಮಾ ಇದಾಗಿದೆ. ಜೊತೆಗೆ ಇಬ್ಬರೂ ಒಟ್ಟಿಗೆ ನಟಿಸುತ್ತಿರುವ ಮೂರನೇ ಸಿನಿಮಾ ಇದಾಗಿದೆ.

ವಿಜಯ್ ಹಾಗೂ ರಶ್ಮಿಕಾ ಅವರಿಗೆ 'ರಣಬಲಿ' ಸೆಟ್‌ನಲ್ಲಿ ಆರತಿ ಮಾಡುತ್ತಿರುವ ವಿಡಿಯೋ ವೈರಲ್ ಆಗಿದ್ದು, ವಿಡಿಯೋನಲ್ಲಿ ರಶ್ಮಿಕಾ, ಹಣೆಗೆ ಕುಂಕುಮ, ಕೆನ್ನೆಗೆ ಅರಿಶಿಣ ಧರಿಸಿ ಬಹಳ ಖುಷಿಯಿಂದ ಆರತಿ ಮಾಡಿಸಿಕೊಂಡಿದ್ದಾರೆ. ಜೊತೆಯಲ್ಲಿ ವಿಜಯ್ ದೇವರಕೊಂಡ ಸಹ ಇದ್ದಾರೆ. ಇಡೀ ಚಿತ್ರತಂಡ ನೂತನ ವಧು-ವರರಿಗೆ ಮದುವೆಯ ಶುಭಾಶಯಗಳನ್ನು ಕೋರಿದೆ. ರಶ್ಮಿಕಾ ಮಂದಣ್ಣ ನಟಿಸಿರುವ 'ಕಾಕ್‌ಟೇಲ್ 2' ಸಿನಿಮಾ ಮುಂದಿನ ತಿಂಗಳು ಬಿಡುಗಡೆ ಆಗಲಿದೆ. ಇದೀಗ ಅವರು 'ರಣಬಲಿ' ಸಿನಿಮಾನಲ್ಲಿ ನಟಿಸಲು ಆರಂಭಿಸಿದ್ದಾರೆ. ಇದರ ಜೊತೆಗೆ ಇನ್ನೂ ಒಂದು ಹಿಂದಿ ಸಿನಿಮಾ ಹಾಗೂ ಅಲ್ಲು ಅರ್ಜುನ್ ಜೊತೆಗೆ ಅಟ್ಲಿ ನಿರ್ದೇಶಿಸಲಿರುವ ಸಿನಿಮಾನಲ್ಲಿ ವಿಲನ್ ಪಾತ್ರದಲ್ಲಿ ಸಹ ನಟಿಸಲಿದ್ದಾರೆ.

# ಹನುಮ ಜಯಂತಿಗೆ ಬರಲಿರುವ 'ರಾಮ'

ರಾಮನವಮಿ ಆಗಿದ್ದು, ಸಿನಿಮಾದ ಅಪ್‌ಡೇಟ್ ಹೊರಬರಬಹುದು ಎಂಬ ನಿರೀಕ್ಷೆ ಅಭಿಮಾನಿಗಳಿಗೆ, ಸಿನಿಮಾ ಪ್ರೇಮಿಗಳಿಗೆ ಇತ್ತು. ಆದರೆ ಹಾಗಾಗಿಲ್ಲ. ಆದರೆ ಸಿನಿಮಾದ ನಿರ್ಮಾಪಕ ನಮಿತ್ ಮಲ್ಹೋತ್ರಾ ಅವರು ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಸಂದೇಶ ಹಂಚಿಕೊಂಡಿದ್ದು, ಅಪ್‌ಡೇಟ್ ಯಾವಾಗ ಬರಲಿದೆ ಎಂದು ತಿಳಿಸಿದ್ದಾರೆ. ರಾಮನವಮಿಯ ಶುಭ ಸಂದರ್ಭದಲ್ಲಿ ಸಾಮಾಜಿಕ ಜಾಲತಾಣದಲ್ಲಿ ಸಂದೇಶ ಹಂಚಿಕೊಂಡಿರುವ 'ರಾಮಾಯಣ' ಸಿನಿಮಾದ ನಿರ್ಮಾಪಕ ನಮಿತ್ ಮಲ್ಹೋತ್ರಾ, ಏಪ್ರಿಲ್ 2ಕ್ಕೆ ಅಂದರೆ ಹನುಮ ಜಯಂತಿಯಂತೆ ರಣಬೀರ್ ಕಪೂರ್ ಅವರ 'ರಾಮಾಯಣ' ಸಿನಿಮಾದ ಅಪ್‌ಡೇಟ್ ಬಿಡುಗಡೆ ಮಾಡಲಾಗುವುದು ಎಂದಿದ್ದಾರೆ.

ಸಿನಿಮಾದ ಅಪ್‌ಡೇಟ್ ಬಗ್ಗೆ ಅಭಿಮಾನಿಗಳು ಕಾತರದಿಂದ ಕಾಯುತ್ತಿದ್ದರು. ಇದೀಗ ನಮಿತ್ ಮಲ್ಹೋತ್ರಾ ಹಂಚಿಕೊಂಡಿರುವ ಮಾಹಿತಿಯಿಂದ ಸಹಜಾಗಿಯೇ ಅಭಿಮಾನಿಗಳಿಗೆ ಕಾತರತೆ ಹೆಚ್ಚಾಗಿದೆ. ಇನ್‌ಸ್ಟಾಗ್ರಾಂನಲ್ಲಿ ಈ ಬಗ್ಗೆ ಬರೆದುಕೊಂಡಿರುವ ನಮಿತ್ ಮಲ್ಹೋತ್ರಾ, 'ಇದು (ರಾಮಾಯಣ) ನಮ್ಮೆಲ್ಲರಿಗೂ ಸೇರಿದ ಕಥೆ.



ನಮ್ಮದೇ ಆದ 'ರಾಮಾಯಣ'ವನ್ನು ಅದರ ನೈಜತೆ ಮತ್ತು ಭವ್ಯತೆಯೊಂದಿಗೆ, ಅತ್ಯಂತ ಪ್ರಾಮಾಣಿಕತೆಯಿಂದ ತೆರೆಯ ಮೇಲೆ ತರಲು ನಾವು ಪ್ರತಿ ಹೆಜ್ಜೆಯನ್ನು ಭಕ್ತಿ, ಕಾಳಜಿ ಮತ್ತು ಪ್ರಾಮಾಣಿಕತೆಯಿಂದ ಇಡುತ್ತಿದ್ದೇವೆ. ಹನುಮ ಜಯಂತಿಯ ಶುಭ ಸಂದರ್ಭದಲ್ಲಿ, ಅಂದರೆ ಏಪ್ರಿಲ್ 2ರಂದು, 'ರಾಮ'ನ ಹೊಸ ದೃಶ್ಯದ ತುಣುಕೊಂದನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ನಾವು ಉತ್ಸುಕರಾಗಿದ್ದೇವೆ. ಇಷ್ಟು ವರ್ಷಗಳ ನಮ್ಮ ಶ್ರಮವನ್ನು ಜಗತ್ತಿನಾದ್ಯಂತ ಇರುವ ಅಭಿಮಾನಿಗಳ ಸಮ್ಮುಖದಲ್ಲಿ ಅದ್ಧೂರಿಯಾಗಿ ಅನಾವರಣಗೊಳಿಸುವ ಮೂಲಕ ಈ ಕ್ಷಣವನ್ನು ಆಚರಿಸಲಿದ್ದೇವೆ' ಎಂದಿದ್ದಾರೆ.

**ಭಕ್ತಿ, ಕಾಳಜಿ ಮತ್ತು ಪ್ರಾಮಾಣಿಕತೆ**

# ಕಿಂಗ್ ಕೊಹ್ಲಿ ಹೊಸ ಅವತಾರ!

ಐಪಿಎಲ್ 2026 ಮಾರ್ಚ್ 28 ರಿಂದ ಪ್ರಾರಂಭವಾಗಲಿದೆ. ವಿರಾಟ್ ಕೊಹ್ಲಿ ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ತಮ್ಮ ಮೊದಲ ಪಂದವನ್ನು ಆಡಲಿದ್ದಾರೆ.

ಮೆಗಾ ಟೂರ್ನಿ ಆರಂಭಕ್ಕೂ ಮುಂಚಿತವಾಗಿ ವಿರಾಟ್ ಕೊಹ್ಲಿ ಹೊಸ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ. ತಮ್ಮ ಎಡಗೈಯಲ್ಲಿರುವ ಹಳೆಯ ಟ್ಯಾಟೂ ಗಳನ್ನು ಬದಲಾಯಿಸಿಕೊಳ್ಳುವ ಮೂಲಕ 'ಫುಲ್ ಸ್ಲೀವ್ ಟ್ಯಾಟೂ' ಅನ್ನು ಕಿಂಗ್ ಕೊಹ್ಲಿ ಹಾಕಿಕೊಂಡಿದ್ದಾರೆ. ಈ ವಿಡಿಯೋ ಸೋಶಿಯಲ್ ಮೀಡಿಯಾದಲ್ಲಿ ಸಖತ್ ವೈರಲ್ ಆಗುತ್ತಿದೆ. ಕೆಲವೇ ನಿಮಿಷಗಳಲ್ಲಿ ಈ ವಿಡಿಯೋ ಲಕ್ಷಾಂತರ ವೀಕ್ಷಣೆಗಳನ್ನು ಗಳಿಸಿದೆ.

ವಿರಾಟ್ ಕೊಹ್ಲಿ ಹಾಕಿಕೊಂಡಿರುವ ಹೊಸ ಟ್ಯಾಟೂ ಕೇವಲ ವಿನ್ಯಾಸವಲ್ಲ, ಇದು ಅವರ ವೈಯಕ್ತಿಕ ಮತ್ತು ವೃತ್ತಿಪರ ರೂಪಾಂತರಕ್ಕೆ ಸಾಕ್ಷಿಯಾಗಿದೆ ಎಂದು ಏಲಿಯನ್ಸ್ ಟ್ಯಾಟೂ ಸ್ಟುಡಿಯೋ ಹೇಳಿದೆ. ಕಳೆದ ಕೆಲವು ವರ್ಷಗಳಲ್ಲಿ ವಿರಾಟ್ ಕೊಹ್ಲಿ ಒಬ್ಬ ವ್ಯಕ್ತಿಯಾಗಿ ಹೇಗೆ ರೂಪಾಂತರಗೊಂಡಿದ್ದಾರೆ, ಶಿಸ್ತು, ಗಮನ ಮತ್ತು ಅಚಲ ನಂಬಿಕೆಯ ಮೂಲಕ ಹೊಸ ಎತ್ತರವನ್ನು ಹೇಗೆ ಏರಿದ್ದಾರೆ ಎಂಬುದನ್ನು ಈ ಟ್ಯಾಟೂ ಪ್ರತಿಬಿಂಬಿಸುತ್ತದೆ.

**ಹೊಸ ಟ್ಯಾಟೂ ಅರ್ಥ!:** ಕೊಹ್ಲಿ ತಮ್ಮ ಎಡಗೈಯ ಮೇಲೆ ವಿವಿಧ ಹಂತಗಳಲ್ಲಿ ಪ್ರತ್ಯೇಕ ಹಚ್ಚೆಗಳನ್ನು ಹಾಕಿಸಿಕೊಳ್ಳುತ್ತಿದ್ದರು. ಕಾಲಾನಂತರದಲ್ಲಿ, ಅವು ಸ್ವಲ್ಪ ಮಸುಕಾಗಿವೆ. ಈಗ, ಅವುಗಳನ್ನು ಒಂದೇ ವಿಷಯವಾಗಿ ಸಂಯೋಜಿಸಲಾಗಿದೆ. ಹಳೆಯದನ್ನು ಸುಧಾರಿಸಿ ಅವುಗಳನ್ನು ಅರ್ಥಪೂರ್ಣ ಕಲಾಕೃತಿಯಾಗಿ ಪರಿವರ್ತಿಸಲಾಗಿದೆ. ಕೆಲವು ಹಳೆಯ ಗುರುತುಗಳನ್ನು ಮುಚ್ಚಲಾಗಿದೆ. ಆದರೆ ಇತರವುಗಳನ್ನು ಹೆಚ್ಚು ಸ್ಪಷ್ಟಪಡಿಸಲಾಗಿದೆ. ಇದು ಅವರ ಜೀವನದ ಏರಿಳಿತಗಳು, ಅವರ ಸಾಧನೆಗಳು ಮತ್ತು ಭವಿಷ್ಯದ ಕಡೆಗೆ ಅವರ ಪ್ರಯಾಣವನ್ನು ಪ್ರತಿನಿಧಿಸುತ್ತದೆ.



**ಟ್ಯಾಟೂ ಅಂದ್ರೆ ಕೊಹ್ಲಿಗೆ ಇಷ್ಟ!:** ವಿರಾಟ್ ಕೊಹ್ಲಿಗೆ ಟ್ಯಾಟೂಗಳೆಂದರೆ ತುಂಬಾ ಇಷ್ಟ. ಅವರ ದೇಹದ ಮೇಲೆ ಈಗಾಗಲೇ ದೇವರು, ಪೋಷಕರ ಹೆಸರುಗಳು ಮತ್ತು ಜ್ಯೋತಿಷ್ಯ ಚಿಹ್ನೆಗಳಿವೆ. ಈಗ ಈ ಹೊಸ ಫುಲ್ ಸ್ಲೀವ್ ಟ್ಯಾಟೂ ಅವರ ವ್ಯಕ್ತಿತ್ವಕ್ಕೆ ಹೆಚ್ಚಿನ ಪೂರ್ಣತೆಯನ್ನು ನೀಡಿದೆ.

# ಕೊಟ್ಟ ಮಾತು ಉಳಿಸಿಕೊಂಡ ಹಾರ್ದಿಕ್ ಪಾಂಡ್ಯ

ಮುಂಬೈ ಇಂಡಿಯನ್ಸ್ ನಾಯಕ ಹಾರ್ದಿಕ್ ಪಾಂಡ್ಯ 2026 ರ ಐಪಿಎಲ್ ಆರಂಭಕ್ಕೂ ಮುನ್ನ ತಮ್ಮ ಔದಾರ್ಯದಿಂದ ಎಲ್ಲರ ಹೃದಯ ಗೆದ್ದಿದ್ದಾರೆ. ಪಾಂಡ್ಯ, ಮತ್ತೊಮ್ಮೆ ತಾವು ಮೈದಾನದಲ್ಲಿ ಮಾತ್ರವಲ್ಲದೆ ಮೈದಾನದ ಹೊರಗೆಯೂ 'ದಿಲ್ ದಾರ್' ಎಂದು ಸಾಬೀತುಪಡಿಸಿದ್ದಾರೆ.

ಟೀಮ್ ಇಂಡಿಯಾದ ಸ್ಟಾರ್ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ, ತಮ್ಮ ಐಷಾರಾಮಿ ಜೀವನಶೈಲಿ ಮತ್ತು ದುಬಾರಿ ಕಾರುಗಳಿಗಾಗಿ ಆಗಾಗ್ಗೆ ಸುದ್ದಿಯಲ್ಲಿರುತ್ತಾರೆ. ಆದರೆ ಈ ಬಾರಿ ಅವರು ಒಂದು ಉತ್ತಮ ಕಾರಣಕ್ಕಾಗಿ ಸೋಶಿಯಲ್ ಮೀಡಿಯಾದಲ್ಲಿ ಟ್ರೆಂಡಿಂಗ್ ಆಗುತ್ತಿದ್ದಾರೆ. ಐಪಿಎಲ್‌ನ ಹೊಸ ಸೀಸನ್ ಪ್ರಾರಂಭವಾಗುವ ಮುನ್ನ ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಕೆಲಸ ಮಾಡುವ ಸುಮಾರು 11 ಗ್ರೌಂಡ್ ಸ್ಟಾಫ್ ಸದಸ್ಯರಿಗೆ ಹಾರ್ದಿಕ್ ಭಾರೀ ಬಹುಮಾನವನ್ನು ಘೋಷಿಸಿದ್ದಾರೆ.

ಸಾಮಾನ್ಯವಾಗಿ, ಐಪಿಎಲ್‌ನಲ್ಲಿ ಉತ್ತಮ ಪಿಚ್‌ಗಳನ್ನು ಮಾಡಿದ ಗ್ರೌಂಡ್ ಸ್ಟಾಫ್ ಸದಸ್ಯರಿಗೆ ಬಹುಮಾನ ನೀಡಲು ಆಗುತ್ತದೆ.

ಆದರೆ ಹಾರ್ದಿಕ್ ಈ ಹತ್ತು ಲಕ್ಷ ರೂಪಾಯಿಗಳ ಚೆಕ್‌ಗಳನ್ನು ಕೇವಲ ಐಪಿಎಲ್‌ಗಾಗಿ ನೀಡಲಿಲ್ಲ. ಇದರ ಹಿಂದೆ ಒಂದು ಆಸಕ್ತಿದಾಯಕ ಮತ್ತು ಸ್ಫೂರ್ತಿದಾಯಕ ಕಥೆಯಿದೆ. ಇದಕ್ಕೆ ಮುಖ್ಯ ಕಾರಣ ಹಾರ್ದಿಕ್ ಕೆಲವು ತಿಂಗಳ ಹಿಂದೆ ನೀಡಿದ ಭರವಸೆ. ವರದಿಗಳ ಪ್ರಕಾರ, 2026 ರ ಟಿ20 ವಿಶ್ವಕಪ್ ಸಿದ್ಧತೆಗಳ ಭಾಗವಾಗಿ ಹಾರ್ದಿಕ್ ಪಾಂಡ್ಯ ವಾಂಖೆಡೆ ಕ್ರೀಡಾಂಗಣದಲ್ಲಿ ಕಠಿಣ ಅಭ್ಯಾಸ ನಡೆಸಿದರು. ಆ ಸಮಯದಲ್ಲಿ, ಅವರು ಮಧ್ಯರಾತ್ರಿಯವರೆಗೆ ಮೈದಾನದಲ್ಲಿಯೇ ಇರುತ್ತಿದ್ದರು. ಅಲ್ಲಿನ ಮೈದಾನದ ಸಿಬ್ಬಂದಿ ತಮ್ಮ ಕರ್ತವ್ಯ ಮುಗಿದ ನಂತರ ಹಾರ್ದಿಕ್ ಅಭ್ಯಾಸಕ್ಕಾಗಿ ಕಾಯುತ್ತಿದ್ದರು. ಅವರಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಿದರು.

**11 ಜನರಿಗೆ ತಲಾ 10 ಲಕ್ಷ ರೂ.!**

ನೆಟ್‌ಗಳನ್ನು ಸಿದ್ಧಪಡಿಸುವುದರಿಂದ ಹಿಡಿದು ಪಿಚ್ ಅನ್ನು ಮೇಲ್ವಿಚಾರಣೆ ಮಾಡುವವರೆಗೆ, ಸಿಬ್ಬಂದಿ ಹಾರ್ದಿಕ್‌ಗೆ ತುಂಬಾ ಬೆಂಬಲ ನೀಡಿದರು. ಆ ಸಮಯದಲ್ಲಿ, ಹಾರ್ದಿಕ್ ಅವರೆಲ್ಲರಿಗೂ ಒಂದು ಭರವಸೆ ನೀಡಿದರು. ಮುಂಬೈಗೆ ಹಿಂದಿರುಗಿದಾಗ, ಅವರ ಕಠಿಣ ಪರಿಶ್ರಮಕ್ಕೆ ಪ್ರತಿಫಲ ನೀಡುವುದಾಗಿ ಭರವಸೆ ನೀಡಿದರು. ಮುಂಬೈ ಇಂಡಿಯನ್ಸ್ ಅಭ್ಯಾಸ ಅವಧಿ ಮುಗಿದ ನಂತರ, ಹಾರ್ದಿಕ್ 11 ಸಿಬ್ಬಂದಿಗೆ ಕರೆ ಮಾಡಿ ತಲಾ 10 ಲಕ್ಷ ರೂ.ಗಳ ಚೆಕ್ ನೀಡಿದರು. ತನ್ನ ಬೆಳವಣಿಗೆಯ ಭಾಗವಾಗಿರುವ ಸಾಮಾನ್ಯ ಸಿಬ್ಬಂದಿಯನ್ನು ನೆನಪಿಸಿಕೊಳ್ಳುವುದು ಮತ್ತು ಗೌರವಿಸುವುದು ಕ್ರೀಡಾ ವಿಶ್ಲೇಷಕರ ಸಂತೋಷವನ್ನು ವ್ಯಕ್ತಪಡಿಸುತ್ತಿದೆ.

ಹಾರ್ದಿಕ್ ಪಾಂಡ್ಯ ಜೊತೆ ಸಿಬ್ಬಂದಿ ಚೆಕ್ ಸ್ವೀಕರಿಸುತ್ತಿರುವ ಫೋಟೋಗಳು ಸದ್ಯ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗುತ್ತಿವೆ. ನೆಟಿಜನ್‌ಗಳು ಹಾರ್ದಿಕ್ ಅವರನ್ನು ನಿಜವಾದ ಹೀರೋ ಎಂದು ಬಣ್ಣಿಸುತ್ತಿದ್ದಾರೆ. ಮುಂಬೈ ಇಂಡಿಯನ್ಸ್ ಐಪಿಎಲ್ 2026 ರಲ್ಲಿ ತಮ್ಮ ಮೊದಲ ಪಂದ್ಯವನ್ನು ಆಡಲು ಸಿದ್ಧವಾಗುತ್ತಿರುವಾಗ ನಾಯಕನ ಈ ನಡೆ ತಂಡದಲ್ಲಿ ಹೊಸ ಉತ್ಸಾಹವನ್ನು ತುಂಬಿದೆ. ಮಾರ್ಚ್ 28 ರಂದು ಪ್ರಾರಂಭವಾಗಲಿರುವ ಐಪಿಎಲ್ ಟೂರ್ನಿಯಲ್ಲಿ ಹಾರ್ದಿಕ್ ನಾಯಕತ್ವದ ಮುಂಬೈ ತಂಡ ಯಾವ ರೀತಿಯ ಪ್ರದರ್ಶನ ನೀಡುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ.



# ಆರ್‌ಸಿಬಿಗೆ ಸಂಕಷ್ಟ

ಐಪಿಎಲ್ 2026 ಆರಂಭಕ್ಕೆ ಮುನ್ನ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ದೊಡ್ಡ ಆಘಾತ ಎದುರಾಗಿದೆ. ಸ್ಟಾರ್ ವೇಗಿ ನುವಾನ್ ತುಷಾರ ಫಿಟ್‌ನೆಸ್ ಕಾರಣದಿಂದ ಲೀಗ್‌ಗೆ ಅಲಭ್ಯರಾಗುವ ಸಾಧ್ಯತೆ ಇದೆ. ಶ್ರೀಲಂಕಾ ಕ್ರಿಕೆಟ್ ಮಂಡಳಿ ಐಪಿಎಲ್ ನಿರಾಕರಿಸಿದೆ. ಜೊತೆಗೆ, ಜೋಶ್ ಹೇಜಲ್‌ವುಡ್ ಆರಂಭಿಕ ಪಂದ್ಯಗಳಿಗೆ ಲಭ್ಯವಿಲ್ಲ. ಇದರಿಂದ ಆರ್‌ಸಿಬಿ ಬೌಲಿಂಗ್ ವಿಭಾಗ ದುರ್ಬಲಗೊಳ್ಳುವ ಆತಂಕ ಎದುರಾಗಿದೆ. ತಂಡಕ್ಕೆ ಬದಲಿ ಆಯ್ಕೆಗಳ ಹುಡುಕಾಟ ಅನಿವಾರ್ಯವಾಗಿದೆ. 2026 ರ ಐಪಿಎಲ್ ಆರಂಭಕ್ಕೆ ಕೇವಲ ಒಂದು ದಿನ ಮಾತ್ರ ಬಾಕಿ ಉಳಿದಿದೆ. ಲೀಗ್‌ನ ಮೊದಲ ಪಂದ್ಯದಲ್ಲೇ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ, ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಎದುರಿಸುತ್ತಿದೆ. ಆದರೆ ಈ ಪಂದ್ಯಕ್ಕೂ ಮುನ್ನ ಆರ್‌ಸಿಬಿಗೆ ದೊಡ್ಡ ಆಘಾತ ಎದುರಾಗಿದೆ. ತಂಡದ ಸ್ಟಾರ್ ವೇಗದ ಬೌಲರ್ ನುವಾನ್ ತುಷಾರ ಲೀಗ್‌ನಿಂದ ಹೊರಬೀಳುವ ಸಾಧ್ಯತೆಗಳಿವೆ ಎಂದು ವರದಿಯಾಗಿದೆ. ಗಾಯದಿಂದ ಬಳಲುತ್ತಿರುವ ನುವಾನ್ ತುಷಾರ ಪ್ರಸ್ತುತ ಚೇತರಿಕೆಯ ಹಾದಿಯಲಿದ್ದಾರೆ. ಹೀಗಾಗಿ ಅವರು ಸಂಪೂರ್ಣ ಚೇತರಿಸಿಕೊಳ್ಳುವರೆಗೂ ಅವರಿಗೆ ಐಪಿಎಲ್‌ನಲ್ಲಿ ಆಡಲು ಎನ್‌ಒಸಿ ನೀಡಲು ಶ್ರೀಲಂಕಾ ಕ್ರಿಕೆಟ್ ಮಂಡಳಿ ನಿರಾಕರಿಸಿದೆ. ಶ್ರೀಲಂಕಾ ಕ್ರಿಕೆಟ್ ಮಂಡಳಿ ಇತ್ತೀಚೆಗೆ ಕಟ್ಟುನಿಟ್ಟಾದ ಫಿಟ್‌ನೆಸ್ ನೀತಿಯನ್ನು ಜಾರಿಗೆ ತಂದಿದೆ, ಅದಕ್ಕಾಗಿಯೇ ಈ ಕಠಿಣ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ಶ್ರೀಲಂಕಾ ಮಂಡಳಿಯ ಈ ನಿರ್ಧಾರ ಆರ್‌ಸಿಬಿಗೆ ದೊಡ್ಡ ಹೊಡೆತವಾಗಿದೆ.

ಶ್ರೀಲಂಕಾದ ವೇಗದ ಬೌಲರ್ ನುವಾನ್ ತುಷಾರ ಐಪಿಎಲ್‌ನಲ್ಲಿ ಭಾಗವಹಿಸುವ ಮೊದಲು ಫಿಟ್‌ನೆಸ್ ಪರೀಕ್ಷೆಯನ್ನು ತೆಗೆದುಕೊಳ್ಳಬೇಕಾಯಿತು, ಆದರೆ ಅವರು ವಿಫಲರಾಗಿದ್ದಾರೆ. ಹೀಗಾಗಿ ಶ್ರೀಲಂಕಾ ಮಂಡಳಿ ಅವರಿಗೆ ಎನ್‌ಒಸಿ ನೀಡಲು ನಿರಾಕರಿಸಿದೆ.

ಶ್ರೀಲಂಕಾ ಕ್ರಿಕೆಟ್ ಮಂಡಳಿಯ ಹೊಸ ನೀತಿಯ ಪ್ರಕಾರ, ಎಲ್ಲಾ ಆಟಗಾರರು ಯಾವುದೇ ವಿದೇಶಿ ಫ್ರಾಂಚೈಸ್ ಲೀಗ್‌ನಲ್ಲಿ ಭಾಗವಹಿಸಲು ಫಿಟ್‌ನೆಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು, ಒಂದು ವೇಳೆ ಅದರಲ್ಲಿ ಅವರು ವಿಫಲವಾದರೆ ಅಂತಹ ಆಟಗಾರರಿಗೆ ಎನ್‌ಒಸಿ ನೀಡದಂತೆ ಮಂಡಳಿ ತೀರ್ಮಾನಿಸಿದೆ.

ನುವಾನ್ ತುಷಾರ ಐಪಿಎಲ್‌ನಿಂದ ಹೊರಗುಳಿದರೆ ಆರ್‌ಸಿಬಿ ಬೌಲಿಂಗ್ ವಿಭಾಗದುರ್ಬಲವಾಗಿ ಕಾಣಲಿದೆ. ಏಕೆಂದರೆ ಮತ್ತೊಬ್ಬ ವೇಗಿ ಜೋಶ್ ಹೇಜಲ್‌ವುಡ್ ಕೂಡ ಆರಂಭಿಕ ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ. ಇವರಿಬ್ಬರ ಅನುಪಸ್ಥಿತಿಯಲ್ಲಿ ಆರ್‌ಸಿಬಿ ಯಾರನ್ನು ಆಡಿಸಲಿದೆ ಎಂಬುದು ಪ್ರಶ್ನಾರ್ಥಕವಾಗಿದೆ. ಇದೆಲ್ಲದರ ನಡುವೆ ಒಳ್ಳೆಯ ಸುದ್ದಿ ಅಂದರೆ ಜೋಶ್ ಹೇಜಲ್‌ವುಡ್ ಬೆಂಗಳೂರಿನಲ್ಲಿ ತಂಡವನ್ನು ಕೂಡಿಕೊಂಡಿದ್ದಾರೆ. ಆದಾಗ್ಯೂ ಅವರು ಪ್ರಸ್ತುತ ಫಿಟ್ ಆಗಿಲ್ಲ. ಇದರಿಂದ ಮೊದಲ ನಾಲ್ಕೈದು ಪಂದ್ಯಗಳಲ್ಲಿ ಅವರು ಆಡುವುದು ಅನುಮಾನವಾಗಿದೆ. ಇದರ ಜೊತೆಗೆ ಇದೀಗ ನುವಾನ್ ತುಷಾರಗೆ ಎನ್‌ಒಸಿ ಸಿಗದಿರುವುದು ತಂಡವನ್ನು ಸಂಕಷ್ಟಕ್ಕೆ ಸಿಲುಕಿಸಿದೆ.



**ಸ್ಟಾರ್ ವೇಗಿಗೆ ಸಿಕ್ಕಿಲ್ಲ ಎನ್‌ಒಸಿ**

# ಆರ್‌ಸಿಬಿ- ಎಸ್‌ಆರ್‌ಎಚ್ ಮುಖಾಮುಖಿ

ಮಾರ್ಚ್ 28 ರಂದು ಚಿನ್ನಸ್ವಾಮಿಯಲ್ಲಿ ಐಪಿಎಲ್ 2026 ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಆರ್‌ಸಿಬಿ ಮತ್ತು ಸನ್‌ರೈಸರ್ಸ್ ಹೈದರಾಬಾದ್ ಮುಖಾಮುಖಿಯಾಗಲಿವೆ. ಎಸ್‌ಆರ್‌ಹೆಚ್ ಬಲಿಷ್ಠ ಬ್ಯಾಟಿಂಗ್ ಹೊಂದಿದ್ದರೆ, ಆರ್‌ಸಿಬಿ ಸಮತೋಲಿತ ತಂಡವಾಗಿದೆ. ಐಪಿಎಲ್ ಇತಿಹಾಸದಲ್ಲಿ ಎಸ್‌ಆರ್‌ಎಚ್‌ಗೆ ಸಣ್ಣ ಮೇಲುಗೈ ಇದ್ದರೂ, ಇತ್ತೀಚಿನ ಪಂದ್ಯಗಳಲ್ಲಿ ಆರ್‌ಸಿಬಿ ಉತ್ತಮ ಪ್ರದರ್ಶನ ನೀಡಿದೆ. ಈ ಮಹಾ ಕದನದಲ್ಲಿ ಯಾವ ತಂಡ ಗೆಲ್ಲುತ್ತದೆ ಎಂದು ಕಾದು ನೋಡೋಣ. ಇಂಡಿಯನ್ ಪ್ರೀಮಿಯರ್ ಲೀಗ್‌ನ 19 ನೇ ಸೀಸನ್‌ನ ಮೊದಲ ಪಂದ್ಯ ಮಾರ್ಚ್ 28 ರಂದು ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ನಡುವೆ ನಡೆಯಲಿದೆ. ಒಂದೆಡೆ ಆರ್‌ಸಿಬಿ ಹಾಲಿ ಚಾಂಪಿಯನ್ ಆಗಿದ್ದರೆ, ಮತ್ತೊಂದೆಡೆ ಸನ್‌ರೈಸರ್ಸ್ ಹೈದರಾಬಾದ್ ಕಳೆದ ಆವೃತ್ತಿಯಲ್ಲಿ 5ನೇ ಸ್ಥಾನಕ್ಕೆ ತೃಪ್ತಿಪಡೆದುಕೊಂಡಿತ್ತು. ಆದಾಗ್ಯೂ, ಬಲಿಷ್ಠ ಬ್ಯಾಟಿಂಗ್ ವಿಭಾಗವನ್ನು ಹೊಂದಿರುವ ಎಸ್‌ಆರ್‌ಎಚ್ ತಂಡವನ್ನು ಕಡಿಮೆ ಅಂದಾಜು ಮಾಡುವಂತಿಲ್ಲ. ಇತ್ತ ಬ್ಯಾಟಿಂಗ್ ಹಾಗೂ ಬೌಲಿಂಗ್ ಎರಡು ವಿಭಾಗದಲ್ಲಿ ಸಮತೋಲನದಿಂದ ಕೂಡಿರುವ ಆರ್‌ಸಿಬಿ ಮೈಮರೆಯುವಂತಿಲ್ಲ.

ಇನ್ನು ಐಪಿಎಲ್ ಇತಿಹಾಸದಲ್ಲಿ ಉಭಯ ತಂಡಗಳ ಮುಖಾಮುಖಿ ದಾಖಲೆಯನ್ನು ನೋಡುವುದಾದರೆ..

**ಹೆಡ್ ಟು ಹೆಡ್ ದಾಖಲೆ:** ಅಂಕಿಅಂಶಗಳ ಪ್ರಕಾರ ಸನ್‌ರೈಸರ್ಸ್ ಹೈದರಾಬಾದ್, ಆರ್‌ಸಿಬಿ ವಿರುದ್ಧ ಮೇಲುಗೈ ಸಾಧಿಸಿರುವುದನ್ನು ಗಮಿನಸಬಹುದು. ಐಪಿಎಲ್ ಇತಿಹಾಸದಲ್ಲಿ ಈ ಎರಡೂ ತಂಡಗಳ ನಡುವೆ ಒಟ್ಟು 26 ಪಂದ್ಯಗಳು ನಡೆದಿವೆ. ಇದರಲ್ಲಿ ಸನ್‌ರೈಸರ್ಸ್ ಹೈದರಾಬಾದ್ 13 ಪಂದ್ಯಗಳನ್ನು ಗೆದ್ದಿದ್ದರೆ, ಆರ್‌ಸಿಬಿ 11 ಪಂದ್ಯಗಳನ್ನು ಗೆದ್ದಿದೆ. ಎರಡು ಪಂದ್ಯಗಳು ಡ್ರಾದಲ್ಲಿ ಕೊನೆಗೊಂಡಿವೆ. ಇನ್ನು ಕಳೆದ ಆವೃತ್ತಿಯಲ್ಲಿ ರಜತ್ ಪಾಟಿದಾರ್ ನಾಯಕತ್ವದಲ್ಲಿ, ಆರ್‌ಸಿಬಿ ಅದ್ಭುತ ಪ್ರದರ್ಶನ ನೀಡಿತ್ತಾದರೂ ಸನ್ ರೈಸರ್ಸ್ ಹೈದರಾಬಾದ್ ವಿರುದ್ಧ ಸೋತಿತ್ತು. ಇದರ ಹೊರತಾಗಿಯೂ, ಆರ್‌ಸಿಬಿ ಐಪಿಎಲ್ 2025 ಪ್ರಶಸ್ತಿಯನ್ನು ಗೆದ್ದುಕೊಂಡಿತು.


**ಕಳೆದ 5 ಪಂದ್ಯಗಳ ಫಲಿತಾಂಶ**

ಇನ್ನು ಆರ್‌ಸಿಬಿ ಹಾಗೂ ಎಸ್‌ಆರ್‌ಹೆಚ್ ನಡುವಿನ ಕಳೆದ ಐದು ಪಂದ್ಯಗಳ ಮುಖಾಮುಖಿಯಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಎರಡು ಪಂದ್ಯಗಳನ್ನು ಗೆದ್ದಿದ್ದರೆ, ರಾಯಲ್ ಚಾಲೆಂಜರ್ಸ್ ಬೆಂಗಳೂರು ಮೂರರಲ್ಲಿ ಗೆದ್ದಿದೆ .

ಇತ್ತೀಚಿನ ದಿನಗಳಲ್ಲಿ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಆರ್‌ಸಿಬಿ ಉತ್ತಮ ದಾಖಲೆಯನ್ನು ಹೊಂದಿದೆ ಎಂದು ಅಂಕಿಅಂಶಗಳು ತೋರಿಸುತ್ತವೆ.

ಆದಾಗ್ಯೂ, ಹೊಸ ಆವೃತ್ತಿಯ ಆರಂಭಿಕ ಪಂದ್ಯದಲ್ಲಿ ಯಾರು ಗೆಲ್ಲುತ್ತಾರೆ ಎಂಬುದನ್ನು ನೋಡಲು ಆಸಕ್ತಿದಾಯಕವಾಗಿರುತ್ತದೆ.

**ಆರ್‌ಸಿಬಿ ಪೂರ್ಣ ತಂಡ:** ರಜತ್ ಪಾಟಿದಾರ್, ವಿರಾಟ್ ಕೊಹ್ಲಿ, ದೇವದತ್ ಪಡಿಕ್ಕಲ್, ರಜತ್ ಪಾಟಿದಾರ್, ಫಿಲ್ ಸಾಲ್ಟ್, ಜಿತೇಶ್ ಶರ್ಮಾ, ಜೋರ್ಡಾನ್ ಕಾಕ್ಸ್, ಕೃನಾಲ್ ಪಾಂಡ್ಯ, ಸ್ವಪ್ನಿಲ್ ಸಿಂಗ್, ಟಿಮ್ ಡೇವಿಡ್, ರೊಮಾರಿಯೋ ಶೆಫರ್ಡ್, ಜಾಕೋಬ್ ಬೆಥೆಲ್, ವೆಂಕಟೇಶ್ ಅಯ್ಯರ್, ಸಾತ್ವಿಕ್ ದೇಸ್ವಾಲ್, ಮಂಗೇಶ್ ಯಾದವ್, ವಿಕ್ಕಿ ಓಸ್ತ್ವಾಲ್, ವಿಹಾನ್ ಮಲ್ಹೋತ್ರಾ, ಕಾನಿಷ್ಕ್ ಚೌಹಾಣ್, ಜೋಶ್ ಹೇಜಲ್‌ವುಡ್, ರಸಿಖ್ ದಾರ್, ಸುಯಶ್ ಶರ್ಮಾ, ಭುವನೇಶ್ವರ್ ಕುಮಾರ್, ನುವಾನ್ ತುಷಾರ, ಅಭಿನಂದನ್ ಸಿಂಗ್, ಜಾಕೋಬ್ ಡಫಿ, ಯಶ್ ದಯಾಲ್



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966